Mr. SPEAKER.—The question is :

"That the Mysore Religious and Charitable Institutions and Trusts Bill, 1962, be referred to a Joint Select Committee consisting of a total number of 20 Members; 15 Members from the Legislative Assembly and 5 Members from the Legislative Council and that the concurrence of the Legislative Council be obtained therefor and that the following Members of this House shall be Members of the Joint Select Committee, namely:

Sriyuths :—

1. S. M. Krishna
2. S. Shivappa
3. Siddiah Kashimath
4. C. J. Muckannappa
5. G. V. Gowda
6. P. F. D'Mellow
7. M. Rajasekharamurthy
8. D. M. Siddiah
9. Thirumaladevarayalu
10. H. R. Abdul Gaffar
11. R. S. Patil
12. S. D. Samrajya
13. N. Hutchmasthy Gowda
14. R. Kenchappa
15. K. M. Devaiah

The motion was adopted.

Mr. SPEAKER.—Under sub-rule (2) of Rule 240 of the Rules of Procedure and Conduct of Business, the Minister for Revenue and the Minister for Law are nominated as Members of the Joint Select Committee.

MYSORE BEEDI INDUSTRIAL PREMISES (REGULATION OF CONDITIONS OF WORK) BILL, 1962.

Motion to consider.

Sri D. DEVARAJ URS (Minister for Labour, Housing, Transport).— Sir, I beg to move :

"That the Mysore Beedi Industrial Premises (Regulation of Conditions of Work) Bill, 1962 be taken into consideration"

Mr. SPEAKER.—Motion moved :

"That the Mysore Beedi Industrial Premises (Regulation of Conditions of Work) Bill, 1962 be taken into consideration."

2-00 P.M.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಮೈಸೂರು ರಾಜ್ಯದ ಬೀಡಿ ಕೈಗಾರಿಕೆ ಸ್ಥಳಾವರಣಗಳ (ಕೆಲಸದ ಷರತ್ತುಗಳನ್ನು ಕ್ರಮಗೊಳಿಸುವುದಕ್ಕೆ ಸಂಬಂಧಪಟ್ಟ) ವಿಧೇಯಕ, 1962, ಇದನ್ನು ಮಾನ್ಯ ಸಭೆಯ ಮುಂದೆ ತರುವುದಕ್ಕೆ ಮುಖ್ಯ ಕಾರಣ ಏನಿದೆ ಎಂಬುದನ್ನು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸನಲ್ಲಿ ಸೂಕ್ಷ್ಮವಾಗಿ ತಿಳಿಸಿದೆ. ನಮ್ಮ ಮೈಸೂರು ರಾಜ್ಯದಲ್ಲಿ ಅನೇಕ

(ಶ್ರೀ ಡಿ. ದೇವರಾಜ ಅರಸ್)

ಕಡೆ ಬೀಡಿ ತಯಾರುಮಾಡತಕ್ಕಂಥ ಉದ್ಯಮ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಇಲ್ಲಿ ತಯಾರಾಗುವ ಬೀಡಿಗಳು ಹೊರಗಡೆ ಕೂಡ ಕಳಿಸಲಾಗುತ್ತಿದೆ. ಈ ಉದ್ಯಮದಲ್ಲಿ ಕೆಲಸ ಮಾಡತಕ್ಕಂಥ ಕೆಲಸಗಾರರ ಸಂಖ್ಯೆ ಬಹಳ ದೊಡ್ಡ ಪ್ರಮಾಣದಲ್ಲಿದೆ. ನಿಖರವಾದ ಅಂಕಿಅಂಶಗಳು ಇರದಿದ್ದರೂ, ಲಕ್ಷಾಂತರ ಜನ ಕೆಲಸಗಾರರು ಇದ್ದಾರೆ. ಮೈಸೂರು ರಾಜ್ಯದಲ್ಲಿ 30 ಸಾವಿರಕ್ಕೂ ಮೇಲ್ಪಟ್ಟು ಕೆಲಸಗಾರರು ಇದ್ದಾರೆಂದು ಅಂದಾಜು ಮಾಡಲಾಗಿದೆ. ಇನ್ನೂ ಜಾಸ್ತಿ ಇದ್ದರೂ ಇರಬಹುದು. 70 ಅಥವಾ 80 ಸಾವಿರ ಕೆಲಸಗಾರರು ಇದ್ದಾರೆಂದು ಹಿಂದೆ ಒಮ್ಮೆ ಕೆಲಸಗಾರರ ಪರವಾಗಿ ಮೆಮೋರಾಂಡಂ ಕೊಟ್ಟಾಗ ಹೇಳಿದ್ದಾರೆ. ಇವರಲ್ಲಿ ಎರಡು ಮೂರು ತರಹದ ಕೆಲಸಗಾರರು ಇದ್ದಾರೆ. ಫ್ಯಾಕ್ಟರಿ ಕೆಲಸದ ಹಾಗೆ ಬಹು ಸಂಖ್ಯೆಯಲ್ಲಿ ಒಂದು ಸ್ಥಳದಲ್ಲಿ ಸೇರಿ ಕೆಲಸ ಮಾಡುವ ಅವಶ್ಯಕತೆ ಇಲ್ಲ. ಐವತ್ತು, ನೂರು ಜನ ಒಂದು ಕಡೆ ಸೇರಿ ಒಂದು ಫ್ಯಾಕ್ಟರಿ ಮಾಡಿಕೊಂಡು ಕೆಲಸ ಮಾಡುತ್ತಾರೆ. ಬಹುತೇಕವಾಗಿ ಬೀಡಿ ತಯಾರಮಾಡಿಸತಕ್ಕಂಥ ಮಾಲೀಕರು ಕೆಲಸಗಾರರನ್ನು ಒಂದು ಕಡೆ ಸೇರಿಸಿ ಕೆಲಸ ಮಾಡಿಸಲು ಅವಕಾಶ ಕೊಡುವುದಿಲ್ಲ. ಬೀಡಿ ಸುತ್ತುವ ಕೆಲಸವನ್ನು ಸಾಮಾನ್ಯವಾಗಿ ಅನೇಕರು ಮನೆಯಲ್ಲಿಯೇ ಮಾಡುತ್ತಾರೆ. ಎಲೆ, ಹೊಗೆಸೊಪ್ಪು, ದಾರ ಮುಂತಾದ ಸಾಮಾನು ಮನೆಗೆ ಕೊಟ್ಟು ಕಳಿಸುತ್ತಾರೆ. ಮನೆಯಲ್ಲಿಯೇ ಇದ್ದು ಬೀಡಿ ಸುತ್ತಿ ತಯಾರುಮಾಡಿ ಕಳಿಸಿಕೊಡುತ್ತಾರೆ. ಈ ರೀತಿ ಮನೆಯಲ್ಲಿ ಕೆಲಸ ಮಾಡತಕ್ಕಂಥವರು ಕಾನೂನು ವ್ಯಾಪ್ತಿಗೆ ಒಳಪಡುತ್ತಾರೆಂದು ಹೇಳುವುದಾಕ್ಕಾಗುವುದಿಲ್ಲ. ಅಂಥ ಕೆಲಸಗಾರರ ಸಂಖ್ಯೆ ದೊರೆಯುವುದೂ ಸಹ ದುರ್ಲಭ. ನಮ್ಮ ದೇಶದಲ್ಲಿ ಒಂದು ಲಕ್ಷ ಜನ ಇದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ಇಷ್ಟು ದೊಡ್ಡ ಪ್ರಮಾಣದಲ್ಲಿ ಇರುವ ಕೆಲಸಗಾರರ ಪರಿಸ್ಥಿತಿ ಹೇಗೆ ಇದೆ ಎಂದರೆ ಅದು ಬಹಳ ಹೀನಾಯ ಪರಿಸ್ಥಿತಿ ಇದೆ. ಬಹಳ ಕೀಳು ಮಟ್ಟದಲ್ಲಿದ್ದು ಪರಿಸ್ಥಿತಿ ದಿನೇ ದಿನೇ ಶೋಚನೀಯವಾಗುತ್ತಾ ಇದೆ. ಇತ್ತೀಚೆಗೆ ಮಿನಿಮಂ ವೇಜಸ್ ಗೊತ್ತುಮಾಡಿದ ನಂತರ ಅವರ ವರಮಾನದಲ್ಲಿ ಸ್ವಲ್ಪ ಸುಧಾರಣೆ ಉಂಟಾಗಿದೆ. ಅದೂ ಕೂಡ ಸಂಪೂರ್ಣವಾಗಿ ಅನುಕೂಲವಾಗಿ ಫಲಕಾರಿಯಾಗಿಲ್ಲ. ಈ ಬೀಡಿ ಕೆಲಸ ಮಾಡುವ ಜನ ಕೆಲಸ ಮಾಡತಕ್ಕಂಥ ಸ್ಥಳವನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಅಂಥ ಸ್ಥಳದಲ್ಲಿ ಕೆಲಸ ಮಾಡುತ್ತಾರೆ. ಅವರು ಕೆಲಸ ಮಾಡುವ ಕೋಣೆಯಲ್ಲಿ ಸಾಕಷ್ಟು ಬೆಳಕು ಇರುವುದಿಲ್ಲ. ಅನೇಕ ಕಡೆ ನಾನು ಸ್ವತಃ ಹೋಗಿ ಅವರ ವಸತಿಗಳನ್ನು ನೋಡಿದ್ದೇನೆ. ಎಂಟು ಹತ್ತು ಗಂಟೆ ಒಂದು ಕಡೆ ಕುಳಿತು ಕೆಲಸ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಮುಖ್ಯವಾಗಿ ಬೇಕಾದಂಥ ಅನುಕೂಲತೆಗಳು ಎಂದರೆ ಗಾಳಿ ಬೆಳಕು ಕುಡಿಯುವುದಕ್ಕೆ ನೀರು, ಕಕ್ಕಸ ಇವು ಇರುವುದಿಲ್ಲ. ಇವು ಇದ್ದರೂ ಬಹಳ ದುಸ್ಥಿತಿಯಲ್ಲಿ ಇರುತ್ತವೆ. ಇದರ ಪರಿಣಾಮ ಏನಾಗಿದೆ ಎಂದರೆ ಈ ಕೆಲಸಗಾರರಲ್ಲಿ ಶ್ವಾಸಕೋಶದ ಕಾಹಿಲೆ ಹೆಚ್ಚಾಗಿ ಉಂಟಾಗುವುದನ್ನು ನೋಡುತ್ತೇವೆ. ಕ್ಷಯ ರೋಗ ಕೂಡ ಈ ಕೆಲಸಗಾರರಲ್ಲಿ ಹೆಚ್ಚಾಗಿದೆ ಎಂದು ಕಂಡು ಬಂದಿದೆ. ಬೀಡಿ ಸುತ್ತುವ ಕೆಲಸ ಕೆಲವಾರು ವರ್ಷ ಮಾಡಿದ ಮೇಲೆ ಸಾಕಷ್ಟು ಕೈಯಲ್ಲಿ ಶಕ್ತಿ ಉಳಿಯುವುದಿಲ್ಲ. ನರ ದೌರ್ಬಲ್ಯದಿಂದ ಕೆಲಸ ನಿಧಾನವಾಗುತ್ತದೆ. ಅದರಿಂದ ಮೊದಲಿನ ಹಾಗೆ ಅಷ್ಟು ಸಂಪಾದನೆ ಮಾಡಲಾರರು. ಪೂರ್ತಿ ವೇತನ ದೊರೆಯದ ಮೂಲಕ ಅವರ ಸಂಸಾರ ದುಃಖದಾಯಕವಾಗುತ್ತದೆ. ಇದರಲ್ಲಿ ಸುಧಾರಣೆ ಮಾಡಬೇಕೆಂಬ ಉದ್ದೇಶದಿಂದ ಈಗ ಈ ಮಸೂದೆಯನ್ನು ಮಾನ್ಯ ಸಭೆಯ ಮುಂದೆ ಇಟ್ಟಿದ್ದೇವೆ. ಸದ್ಯಕ್ಕೆ ನಮ್ಮ ದೇಶದಲ್ಲಿ ಫ್ಯಾಕ್ಟರೀ ಕಾನೂನು ಜಾರಿಯಲ್ಲಿದೆ. ಆದರೆ ಕೆಲವು ಕಡೆ ಈ ಕಾನೂನನ್ನು ಚಲಾಯಿಸುವುದಕ್ಕೆ ಆಗುವುದಿಲ್ಲ. ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಿ ಈ ಕಾನೂನು ಪ್ರಕಾರ ಏನೇನು ಸೌಕರ್ಯ ಒದಗಿಸಬೇಕೋ ಅದನ್ನು ಒದಗಿಸಿಕೊಡುತ್ತಾರೆ. ಆದರೆ ಕಾನೂನಿನ ಚೌಕಟ್ಟಿನಿಂದ ತಪ್ಪಿಸಿಕೊಳ್ಳಲು, ಈ ಉದ್ಯಮದ ಮಾಲೀಕರು ಬಹಳ ಜನ ಒಂದು ಕಡೆ ಸೇರಿ ಕೆಲಸ ಮಾಡುವುದನ್ನು ಒಡೆದುಬಿಟ್ಟು ಐವತ್ತು ಜನ, ಹತ್ತು ಜನ ಹೀಗೆ ಎರಡು ಮೂರು ಕಡೆ ಕೆಲಸ ಮಾಡುವ ಹಾಗೆ ವ್ಯವಸ್ಥೆಮಾಡಿ ಕಾನೂನು ನಿಬಂಧನೆಗೆ ಒಳಪಡದೇ ಇರುವ ರೀತಿಯಲ್ಲಿ ಏರ್ಪಾಡು ಮಾಡಿಕೊಳ್ಳುವುದರಿಂದ ಅಂಥವರಿಗೆ ಕಾನೂನು ಅನ್ವಯಿಸಲು ಆಗುವುದಿಲ್ಲ. ಹೀಗೆ ಇದು ನಡಕೊಂಡು ಬರುತ್ತಿದೆ. ಆದುದರಿಂದ ಫ್ಯಾಕ್ಟರಿ ಕಾನೂನು ಚಲಾಯಿಸುವುದು ಕಷ್ಟವಾಗಿದೆ. ಯಾವ ಪ್ರಮಾಣದಲ್ಲಿ ತೊಂದರೆ ಉಂಟಾಗಿದೆ ಎನ್ನುವುದಕ್ಕೆ ಇದರ ಬಗ್ಗೆ ಅಂಕಿಅಂಶಗಳನ್ನು ತಮ್ಮ ಮುಂದೆ ಇಟ್ಟರೆ ಅದನ್ನು ತಾವು ನಂಬುತ್ತೀರಿ.

ನಮ್ಮ ದೇಶದಲ್ಲಿ ಅಂದಾಜು ಮಾಡಿರತಕ್ಕ ಪ್ರಕಾರ ಈ ಕೆಲಸಗಾರರು ಕೆಲಸ ಮಾಡತಕ್ಕ ಸ್ಥಳಗಳು ಸುಮಾರು 2,000 ಇವೆ. ಇದರಲ್ಲಿ 1962ನೇ ಸಾಲಿನಲ್ಲಿ ಕೇವಲ 85 ಸ್ಥಳಗಳು ಮಾತ್ರ ರಿಜಿಸ್ಟರ್ ಮಾಡಿಸಿಕೊಂಡಿವೆ. ಅದು ಫ್ಯಾಕ್ಟರಿ ಆಕ್ಟ್ ಪ್ರಕಾರ; ಬಾಕೀವೆಲ್ಲಾ ಅವರ ಮೇಲೆ ಕಾನೂನು ಚಲಾಯಿಸುವುದಕ್ಕೆ ಸಾಧ್ಯವಿಲ್ಲದ ಹಾಗೆ ಮಾಡಿಕೊಂಡಿವೆ. ಹೋದ ವರ್ಷ ರಿಜಿಸ್ಟರ್ ಮಾಡಿಸಿಕೊಂಡಿದ್ದರೂ ಕೂಡ ವರ್ಷೇ ವರ್ಷೇ ರಿನ್ಯೂ ಆಗಬೇಕಾಗುತ್ತದೆ. ಈ ವರ್ಷ ಆ 85 ಕೂಡ ಇಲ್ಲ, ಕೇವಲ

22ಕ್ಕೆ ಬಂದು ನಿಂತಿದೆ. 1963ನೇ ಇಸವಿಯಲ್ಲಿ ಒಟ್ಟು 2,000 ಸ್ಥಳಗಳ ಪೈಕಿ ಕೇವಲ 22 ಮಾತ್ರ ರಿಜಿಸ್ಟರ್ ಆಗಿವೆ ಎಂದರೆ ತಾವೇ ಯೋಚನೆ ಮಾಡಬಹುದು. ಈಗಿರತಕ್ಕ ಫ್ಯಾಕ್ಟರಿ ಆಕ್ಟಿನಿಂದ ಅವರನ್ನು ಹಿಡಿಯುವುದಕ್ಕೆ ಅಥವಾ ಕಾನೂನಿಗೆ ಒಳಪಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದೂ ಒಂದು ಕಾರಣದಿಂದಾಗಿ ಈ ರೀತಿ ಅವರು ತಪ್ಪಿಸಿಕೊಳ್ಳುವುದನ್ನು ತಡೆಗಟ್ಟಲು ನಾವು ಬೇರೆ ಒಂದು ಕಾನೂನನ್ನು ತಂದು ಈ ಕೆಲಸಗಾರರಿಗೆ ದೊರೆಯಬೇಕಾದ ನ್ಯಾಯವಾದ ಸೌಕರ್ಯಗಳು ಸೌಲಭ್ಯ ಗಳು ಏನಿವೆ ಅವನ್ನು ಒದಗಿಸಬೇಕಾಗಿದೆ. ಅವರು ಕೆಲಸ ಮಾಡುತ್ತಾ ಇರತಕ್ಕ ಸ್ಥಳ ಚೊಕ್ಕಟ ವಾಗಿರಬೇಕು; ಇಂಥ ಸೌಲಭ್ಯಗಳನ್ನು ದೊರಕಿಸುವುದಕ್ಕಾಗಿಯೇ ಈ ಒಂದು ಕಾನೂನನ್ನು ತಂದಿರು ವುದು. ಇದರ ಜೊತೆಯಲ್ಲಿ ಅವರು ಕೆಲಸ ಮಾಡುತ್ತಾ ಇರತಕ್ಕ ವರ್ಕಿಂಗ್ ಕಂಡೀಷನ್ ಎಂದು ಏನು ಹೇಳುತ್ತೇವೆಯೋ ಅದನ್ನು ರೆಗ್ಯುಲೇಟ್ ಮಾಡುವುದಕ್ಕೂ, ಅವರ್ಸ್ ಆಫ್ ವರ್ಕ್ ರೆಗ್ಯುಲೇಟ್ ಮಾಡುವುದಕ್ಕೂ, ಸೆಂಟ್ರಲ್ ಆಕ್ಟ್ ಆದ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್ ಮತ್ತು ಇನ್ನೂ ಒಂದೆರಡು ಮೂರು ಆಕ್ಟ್‌ಗಳಲ್ಲಿ ನಮೂದು ಮಾಡಿರುವಂತ ಆ ಆಕ್ಟ್‌ಗಳೂ ಈ ಕೆಲಸಗಾರರಿಗೆ ಅನ್ವಯವಾಗ ಬೇಕೆಂದು ಹೇಳಿ ಆ ಪ್ರೊವಿಜನ್‌ಗಳನ್ನೂ ಇಲ್ಲಿ ಸೇರಿಸಿದ್ದೇವೆ. ಹೀಗೆ ನಾನಾ ರೀತಿಯಲ್ಲಿ ಈ ಬೀಡಿ ಕೆಲಸಗಾರರ ಜೀವನ ಮಟ್ಟವನ್ನು ಹಾಗೂ ಮಾಡತಕ್ಕ ಸ್ಥಿತಿಗತಿಗಳನ್ನು ಉತ್ತಮ ಪಡಿಸಬೇಕೆಂಬ ದೃಷ್ಟಿಯಿಂದ ಈ ಮಸೂದೆಯನ್ನು ಇವತ್ತು ತಂದಿದ್ದೇವೆ. ಇನ್ನೂ ಒಂದು ವಿಷಯವನ್ನು ಮಾನ್ಯ ಸಭೆಯ ಗಮನಕ್ಕೆ ತರಬೇಕಾದ್ದು ಯಾವುದೆಂದರೆ ಈ ಕಾನೂನನ್ನು ಇಡೀ ಭಾರತ ದೇಶಕ್ಕೆ ಅನ್ವಯ ವಾಗುವಂತೆ ತರಬೇಕೆಂದು ಉದ್ದೇಶಿಸಲಾಗಿದ್ದು ಪಾರ್ಲಿಮೆಂಟ್ ಮುಂದೆ ಬಂದಾಗ ಏನು ತೀರ್ಮಾನವಾಯಿತು ಎಂದರೆ ಒಟ್ಟಿಗೆ ಸೆಂಟ್ರಲ್ ಆಕ್ಟ್ ಮಾಡುವುದು ಬೇಡ ಆಯಾಯಾ ರಾಜ್ಯ ಸರ್ಕಾರದವರು ತಮ್ಮ ಸ್ಥಳಕ್ಕೆ ಸಂಬಂಧಪಟ್ಟ ಹಾಗೆ ಬೇರೆ ಬೇರೆ ಕಾನೂನುಗಳನ್ನು ತರುವುದು ಸೂಕ್ತ ಎಂದು ಅವರು ಒಂದು ಆದೇಶ ಕೊಟ್ಟಮೇಲೆ ನಮ್ಮಲ್ಲೂ ಈ ಕಾನೂನು ತರುವುದಕ್ಕೆ ಸಿದ್ಧವಾದೆವು. ಇದೇ ರೀತಿಯಲ್ಲಿ ಮದರಾಸ್ ಪ್ರಾಂತ್ಯದಲ್ಲಿ ಈ ಕಾನೂನು ಇದೆ, ಕೇರಳದಲ್ಲಿ ಇದೆ, ಆಂಧ್ರ ಪ್ರದೇಶದಲ್ಲಿ ಕಾನೂನು ಮಾಡಬೇಕೆನ್ನುವುದರಲ್ಲಿದ್ದಾರೆ. ಇನ್ನೂ ಆಗಿಲ್ಲ. ಮದರಾಸ್ ಮತ್ತು ಕೇರಳದಲ್ಲಿ ಅವರು ಈ ಕಾನೂನನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಕೆಲವು ಅಡ್ಡಿ ಆತಂಕ ಗಳಿವೆ ಎಂದು ಹಾಗೆಯೇ ತಡೆದು ಇಟ್ಟಿದ್ದಾರೆ. ಅದಕ್ಕೆ ಕಾರಣ ಮೈಸೂರು ಪ್ರಾಂತ್ಯವಾದ ನೆರೆ ಪ್ರಾಂತ್ಯದಲ್ಲಿ ಈ ಕಾನೂನು ಇಲ್ಲದೇ ಹೋದಾಗ ಅಕ್ಕಪಕ್ಕದಲ್ಲಿರತಕ್ಕ ಈ ಒಂದು ಕೈಗಾರಿಕೆ ಆ ಕಾನೂನಿನ ಚೌಕಟ್ಟನ್ನು ತಪ್ಪಿಸಿಕೊಳ್ಳುತ್ತದೆ ಎಂಬ ದೃಷ್ಟಿಯಿಂದ ಮತ್ತು ಅಲ್ಲಿರತಕ್ಕ ಕೈಗಾರಿಕೆ ಬೇರೆ ಪ್ರಾಂತ್ಯಕ್ಕೆ ಹೋದೀತು ಎಂಬ ಶಂಕೆ ಬಂದು ಮದರಾಸಿನವರಾಗಲೀ, ಕೇರಳದವರಾಗಲೀ ಈ ಕಾನೂನನ್ನು ಸಂಪೂರ್ಣವಾಗಿ ಜಾರಿಗೆ ಕೊಟ್ಟಿಲ್ಲ. ನಮ್ಮ ದೇಶದಲ್ಲಿ ಇದನ್ನು ಜಾರಿಗೆ ತಂದದ್ದೇ ಆದರೆ ನಮ್ಮ ದಕ್ಷಿಣ ಭಾರತದ ಮದರಾಸು, ಕೇರಳ ಹಾಗೂ ಆಂಧ್ರ ಪ್ರದೇಶದವರೂ ಸಹ ಇದನ್ನು ಜಾರಿ ಮಾಡಿ ಯಾರು ಎಂಬ ಆಶೆ ಇವೆ. ಎಲ್ಲಾ ಕಡೆ ಈ ಕಾನೂನು ಜಾರಿಗೆ ಬಂದು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಈ ಕೈಗಾರಿಕೆ ಹೋಗುವುದು ತಪ್ಪುತ್ತದೆ. ಮತ್ತು ಎಲ್ಲಾ ಕೆಲಸಗಾರರಿಗೂ ಒಂದೇ ರೀತಿಯಾದ ಸೌಲಭ್ಯ ಕೂಡ ದೊರೆಯತಕ್ಕ ಅನುಕೂಲವುಂಟಾಗುತ್ತದೆ. ಅದನ್ನೂ ಈ ಕಾನೂನನ್ನು ತರುವುದರಿಂದ ಒಂದು ಸಾಧನೆ ಮಾಡಿದಹಾಗಾಗುತ್ತದೆ. ಮೈಸೂರಿನ ಮತ್ತು ಇತರ ಮೂರು ರಾಜ್ಯಗಳಿಗೆ ಸಂಬಂಧಪಟ್ಟ ಮಂತ್ರಿಗಳ ಮತ್ತು ಇತರ ಅಧಿಕಾರಿಗಳ ಸಭೆ ನಡೆದು ಅಲ್ಲಿ ತೆಗೆದುಕೊಂಡ ತೀರ್ಮಾನದ ಪ್ರಕಾರವಾಗಿಯೂ ಈ ಒಂದು ಮಸೂದೆಯನ್ನು ತರುತ್ತಾ ಇದ್ದೇವೆ.

ಬಹುಶಃ ಮಾನ್ಯ ಸಭೆಯಲ್ಲಿ ಎಲ್ಲರಿಗೂ ಗೊತ್ತಿರಬಹುದು ಯಾವ ರೀತಿ ಈ ಕಾನೂನಿನ ಚೌಕಟ್ಟಿನಿಂದ ಮಾಲೀಕರು ತಪ್ಪಿಸಿಕೊಳ್ಳುತ್ತಾರೆ ಎಂಬುದು. ಬೀಡಿ ತಯಾರು ಮಾಡುವುದಕ್ಕೆ ಯಾವುದಾದರೂ ಒಂದು ಸ್ಥಳದಲ್ಲಿ ಕೆಲವರನ್ನು ಒಟ್ಟಿಗೆ ಕೂಡಿಸಿ—ಹೆಚ್ಚು ಜನರನ್ನು ಒಂದೇ ಕಡೆ ಇಟ್ಟುಕೊಂಡರೆ ಕಾನೂನಿನ ಪ್ರಕಾರ ಸೌಲಭ್ಯ ಕೊಡಬೇಕಾಗುತ್ತದೆ ಎಂಬ ದೃಷ್ಟಿಯಿಂದ—ಅವರಿಂದ ಬೀಡಿ ತಯಾರು ಮಾಡಿಸುತ್ತಾರೆ. ಈ ಕೆಲಸ ಮಾಡಿಸುವುದಕ್ಕೆ ಕೆಲವು ಮನೆಗಳನ್ನು ಇಟ್ಟುಕೊಂಡು ಏಜೆಂಟರ ಮೂಲಕ ಕೆಲಸ ಮಾಡಿಸುತ್ತಾರೆ. ನನಗೆ ಗೊತ್ತಿರುವಹಾಗೆ ನಮ್ಮ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಬೀಡಿ ತಯಾರು ಮಾಡತಕ್ಕ ಒಂದು ಸಂಸ್ಥೆಯೂ ಇಲ್ಲ. ಅವರ ಕೈಕೆಳಗೆ ನೇರವಾಗಿ ಒಬ್ಬ ಕೆಲಸಗಾರನೂ ಇರುವುದಿಲ್ಲ ಆದರೆ ಪ್ರೊಡಕ್ಷನ್ ತೆಗೆದುಕೊಂಡರೆ ಒಂದು ದಿವಸಕ್ಕೆ ಎಷ್ಟೋ ಲಕ್ಷ ಬೀಡಿ ತಯಾರು ಮಾಡುತ್ತೇವೆ ಎಂದು ಹೇಳುತ್ತಾರೆ. ಹೀಗೆ ಏರ್ಪಾಡು ಮಾಡಿಕೊಂಡಿದ್ದಾರೆ ಏಜೆಂಟುಗಳನ್ನು ನೇಮಕವಾಡಿಕೊಂಡು ಅವರಿಗೆ ಕಂಟ್ರಾಕ್ಟ್ ಕೊಡುತ್ತಾರೆ. ಆ ಕಾಂಟ್ರಾಕ್ಟರು ಏನು ಮಾಡುತ್ತಾನೆ ಎಷ್ಟೋ ಪೌಂಡ್ ಹೊಗೇಸೊಪ್ಪು ಎಲೆ ಅದಕ್ಕೆ ಬೇಕಾಗತಕ್ಕ ದಾರ ಎಲ್ಲಾ ಕೊಟ್ಟು ಅದಕ್ಕೆ ಪ್ರತಿಯಾಗಿ ಇಷ್ಟು ಬೀಡಿ ಎಂದು ಯಾವುದೋ ಒಂದು ಲೆಕ್ಕಾಚಾರ ಇರುತ್ತದೆ ಅದರಂತೆ ತಂದು ಕೊಡಬೇಕೆಂದು ಗೊತ್ತು ಮಾಡುತ್ತಾನೆ. ಆದಕ್ಕೆ ಬೇಕಾದ ಒಂದೆರಡು ಮನೆ ಗಳನ್ನು ಬಾಡಿಗೆಗೋ ಅಥವಾ ಸ್ವಂತಕ್ಕೋ ಯಾವುದೋ ರೀತಿಯಲ್ಲಿ ತೆಗೆದುಕೊಂಡಿರುತ್ತಾನೆ. ಹತ್ತು

(ಶ್ರೀ ಡಿ. ದೇವರಾಜ ಅರಸ್)

ಜನರನ್ನು ಒಂದು ಕಡೆ ಇನ್ನು ಹತ್ತು ಜನರನ್ನು ಇನ್ನೊಂದುಕಡೆ ಸೇರಿಸಿ ಅವರಿಗೆ ಪ್ರತ್ಯೇಕವಾಗಿ ಎಲೆಯನ್ನು, ಸೊಪ್ಪನ್ನು ಹಂಚಿಕೊಟ್ಟು 1,000 ಸಾವಿರ ಬೀಡಿ ಕಟ್ಟಿದರೆ ಇಷ್ಟು ಕೂಲಿ ಕೊಡುತ್ತೇನೆ ಎಂದು ಗೊತ್ತು ಮಾಡಿಕೊಂಡಿರುತ್ತಾನೆ. ಒಂದು ಸಾವಿರ ಬೀಡಿಗೆ ಮಿನಿಮಂ ವೇಜಸ್ ಒಂದು ರೂಪಾಯಿ ಹನ್ನೆರಡಾಣೆ ಇದ್ದರೆ ಅವನು ಒಂದು ರೂಪಾಯಿ ಮಾತ್ರ ಕೊಡುತ್ತಾ ಇದ್ದಾನೆ. ಅವನಿಗೆ ಹನ್ನೆರಡಾಣೆ ಉಳಿಯುತ್ತದೆ. ಅಲ್ಲೂ ಕೂಡ ಮೋಸ ನಡೆಯುತ್ತಾ ಇದೆ. ಹೀಗೆ ನಾನಾ ರೀತಿಯಲ್ಲಿ ಕಾರ್ಮಿಕ ಕ್ಷೇತ್ರದಲ್ಲಿರತಕ್ಕ ಜನರನ್ನು ಎಷ್ಟು ಶೋಷಣೆ ಮಾಡಬಹುದೋ ಅಷ್ಟನ್ನೂ ಭಾರಿ ಮಾಲೀಕರು ಮತ್ತು ಕಂಟ್ರಾಕ್ಟರುಗಳು ಎಲ್ಲಾ ಸೇರಿ ಮಾಡುತ್ತಾ ಇದ್ದಾರೆ ಇವತ್ತಿನ ಸನ್ನಿವೇಶದಲ್ಲಿ ಅದನ್ನು ತಪ್ಪಿಸಬೇಕಾಗಿದೆ.

ಈಗ ಈ ಕಷ್ಟಗಳನ್ನೆಲ್ಲ ತಪ್ಪಿಸಿ ಅವರಿಗೆ ಕೆಲವು ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಈ ಹಿಂದೆ ಮಹಾರಾಷ್ಟ್ರ ಸರ್ಕಾರದವರು ಬೀಡಿ ಉದ್ಯಮಕ್ಕೆ ಸಂಬಂಧಿಸಿದಂತೆ ಫ್ಯಾಕ್ಟರಿ ಆಕ್ಟಿನನ್ವಯ ಒಂದು ನೋಟಿಫಿಕೇಷನ್ ಹೊರಡಿಸಿದ್ದರು. ಆ ಬಗ್ಗೆ ಸಂಬಂಧಪಟ್ಟ ಫ್ಯಾಕ್ಟರಿ ಮಾಲೀಕರು ಅದನ್ನು ಛಾಲೆಂಜ್ ಮಾಡಿದ್ದರು. ಆದರೆ ಆ ರೀತಿ ನೋಟಿಫೈ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆಯೆಂಬುದಾಗಿ ಮೊನ್ನೆ ತಾನೆ ತೀರ್ಮಾನವಾಯಿತು. ಈಗ ಕಾರ್ಮಿಕರಿಗೆ ರಕ್ಷಣೆ ಕೊಡತಕ್ಕ ಬಗ್ಗೆ ನಮ್ಮ ಮಸೂದೆಯಲ್ಲಿ ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ಕೆಲವು ಫ್ಯಾಕ್ಟರಿಗಳನ್ನು ರಿಜಿಸ್ಟರ್ ಮಾಡಬೇಕಾಗಿದ್ದರೆ ಅಲ್ಲಿ ಇಂತಿಷ್ಟು ಜನರು ಕೆಲಸಮಾಡುತ್ತಿರಬೇಕು ಎಂಬ ನೇಮವಿದೆ. ಆದರೆ ನಾವೀಗ ನಮ್ಮ ಮಸೂದೆಯಲ್ಲಿ ಪ್ರತಿಯೊಂದು ಫ್ಯಾಕ್ಟರಿಯವರೂ ಲೈಸೆನ್ಸನ್ನು ತೆಗೆದುಕೊಳ್ಳಲೇಬೇಕೆಂದು ಕಡ್ಡಾಯ ಮಾಡಿದ್ದೇವೆ. ಆ ಫ್ಯಾಕ್ಟರಿಯಲ್ಲಿ ಇಬ್ಬರಿರಲಿ, ಮೂವರಿರಲಿ ಅಂಥವರೂ ಕೂಡ ಲೈಸನ್ಸ್ ಪಡೆಯಲೇಬೇಕೆಂದು ಹೇಳಿದೆ. ಆ ಕಾರ್ಮಿಕರ ಆರೋಗ್ಯ ದೃಷ್ಟಿಯಿಂದ ಇದು ಅತ್ಯಗತ್ಯ. ಕೆಲವು ಸಂದರ್ಭಗಳಲ್ಲಿ ಬೇರೆ ಪ್ರಾಂತದಲ್ಲಿ ಈ ಮಸೂದೆ ಚರ್ಚೆಯಾಗುತ್ತಿದ್ದ ಕಾಲದಲ್ಲಿ ಮಾಲೀಕರಪರ ಮಾತನಾಡತಕ್ಕ ಕೆಲವು ಜನರು ಇದೊಂದು ಕ್ರಾಂತಿಕಾರಕ ಮಸೂದೆ. ಇದನ್ನು ಪಾಸ್ ಮಾಡಿದರೆ ಕಾರ್ಖಾನೆಗಳಿಗೆ ಬಹಳ ಧಕ್ಕೆ ತಗುಲುತ್ತದೆ ಎಂಬುದಾಗಿ ವಾದಮಾಡಿದ್ದರು. ಆದರೆ ಆ ವಾದದಲ್ಲಿ ತಿರುಳಿಲ್ಲ. ಯಾವುದೋ ಒಂದು ಭಾಗದಲ್ಲಿ ಮಾತ್ರ ಇಂಥ ಒಂದು ಕಾನೂನು ಇದ್ದು ಇನ್ನೊಂದು ಕಡೆ ಅಂಥ ಕಾನೂನು ಜಾರಿಯಲ್ಲಿ ಇಲ್ಲದಿದ್ದರೆ ಆಗ ಈ ಕೈಗಾರಿಕೆಗೆ ಸ್ವಲ್ಪ ತೊಂದರೆ ಬರುತ್ತಿತ್ತೋ ಏನೋ. ಈಗ ಎಲ್ಲ ಕಡೆಗಳಲ್ಲೂ ಈ ಕಾನೂನು ಜಾರಿಗೆ ಬಂದಿರುವಾಗ ಅಂಥ ಒಂದು ತೊಂದರೆಗೆ ಅವಕಾಶವಿಲ್ಲ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈಗಾಗಲೆ ಒಂದೆರಡು ಪ್ರಾಂತಗಳವರು ಈ ವೇಜಸ್ಸನ್ನೂ ನಿಗದಿ ಮಾಡಿದ್ದಾರೆ. ನಮ್ಮಲ್ಲಿ ಒಂದು ಸಾವಿರ ಬೀಡಿ ಕಟ್ಟತಕ್ಕವನಿಗೆ ಕನಿಷ್ಟಪಕ್ಷ ಒಂದು ರೂಪಾಯಿ ಎಂಭತ್ತೊಂದು ನಯಾಪೈಸೆ ಕೂಲಿ ಕೊಡಬೇಕೆಂದು ನಿಗದಿ ಮಾಡಿದ್ದೇವೆ. ಹಾಗೆ ಕೂಲಿ ಕೊಡದೆ ಹೋದರೆ ಅವರು ಕೋರ್ಟಿನ ಮುಂದೆ ಬರಬೇಕಾಗುತ್ತದೆ, ಅವರು ಶಿಕ್ಷೆಗೂ ಗುರಿಯಾಗುತ್ತಾರೆ. ಮದ್ರಾಸಿನಲ್ಲಿ ಒಂದು ಸಾವಿರ ಬೀಡಿಗಳನ್ನು ಕಟ್ಟತಕ್ಕ ಒಬ್ಬ ಮನುಷ್ಯನಿಗೆ 1-69 ನ.ಪೈ ; ಒಂದು ರೇಟಿದೆ, ರೂ. 1-62 ನ.ಪೈ. ಒಂದು ರೇಟೂ, ಮತ್ತು ರೂ. 1-37 ನ.ಪೈ. ಒಂದು ರೇಟು ಹೀಗೆ ಮೂರು ವಿಧವಾದ ರೇಟುಗಳಿರುತ್ತವೆ. ಕೇರಳದಲ್ಲಿ ರೂ. 1-87 ನ.ಪೈ. ರೇಟಿದೆ. ನಮ್ಮಲ್ಲಿ ಕೆಲವು ಭಾಗದಲ್ಲಿ ಸ್ವಲ್ಪ ಜಾಸ್ತಿ ಇದೆ. ಇನ್ನು ಕೆಲವು ಕಡೆಗಳಲ್ಲಿ ಸ್ವಲ್ಪ ಕಡಮೆ ರೇಟಿದೆ. ನಿಪ್ಪಾಣಿಯಲ್ಲಿ ರೇಟು ಜಾಸ್ತಿ ಇದೆ. ಅಲ್ಲಿ 2 ರೂಪಾಯಿನ ವರೆಗೂ ರೇಟಿದೆ. ಇತ್ತೀಚೆಗೆ ಮದ್ರಾಸ್, ಆಂಧ್ರ, ಕೇರಳ ಮತ್ತು ನಮ್ಮ ಮೈಸೂರು ಈ ನಾಲ್ಕು ರಾಜ್ಯಗಳೂ ಒಟ್ಟಿಗೆ ಸೇರಿ ಈ ಕೂಲಿ ದರವನ್ನು ನಿಗದಿ ಮಾಡಬೇಕೆಂದು ಮಾತುಕತೆಗಳಾಗಿವೆ. ಆದುದರಿಂದ ಈಗ ನಮ್ಮ ಮೈಸೂರಿನಲ್ಲಿ ಈ ಬಿಲ್ಲನ್ನು ಜಾರಿಗೆ ತಂದರೆ ನಮ್ಮ ವ್ಯವಹಾರ ಬೇರೆಕಡೆಗೆ ಹೋಗುತ್ತದೆ ಎಂಬ ಶಂಕೆಗೆ ಅವಕಾಶವಿಲ್ಲ. ಇದು ಬಹಳ ಸಾಧುವಾದಂಥ ಕಾನೂನು. ಬೀಡಿ ಕೆಲಸಗಾರರು ಬಹಳ ದಿನಗಳಿಂದಲೂ ಬಯಸುತ್ತಿದ್ದಂಥ ಕಾನೂನು. ಅವರ ಸ್ಥಿತಿಗತಿಗಳು ಇಲ್ಲಿಯವರೆಗೂ ಬಹಳ ಚಿಂತಾಜನಕವಾಗಿದ್ದವು. ಹೊಲದಲ್ಲಿ ಕೂಲಿಮಾಡತಕ್ಕವನಿಗೆ ಇವರಿಗಿಂತ ಕಡಮೆ ಕೂಲಿ ಸಿಕ್ಕಿದರೂ ಅವನಿಗೆ ಒಳ್ಳೆ ಗಾಳಿ, ಬೆಳಕಾದರೂ ಸಿಕ್ಕುತ್ತದೆ. ಇವರಿಗೆ ಗಾಳಿಯೂ ಇಲ್ಲ, ಬೆಳಕೂ ಇಲ್ಲ, ಕಡೆಗೆ ಊಟವೂ ಇಲ್ಲ, ಹೀಗಿತ್ತು ಇವರ ಪರಿಸ್ಥಿತಿ. ಈ ಕಾನೂನು ಜಾರಿಗೆ ಬಂದರೆ ಅವರ ಸ್ಥಿತಿಗತಿಗಳು ಬಹಳಮಟ್ಟಿಗೆ ಉತ್ತಮಗೊಳ್ಳುತ್ತವೆ. ಈ ಕಾನೂನು ಎಲ್ಲ ದೃಷ್ಟಿಗಳಿಂದಲೂ ಬಹಳ ಒಳ್ಳೆಯದು. ಈ ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಕ್ಕೂ ಅವಕಾಶ ಮಾಡಿದ್ದೇನೆ. ಮಾನ್ಯ ಸದಸ್ಯರಿಂದ ಬರತಕ್ಕ ಉತ್ತಮ ಸಲಹೆಗಳ ಮೇಲೆ ಈ ಬಿಲ್ಲನ್ನು ಮತ್ತಿಷ್ಟು ಮಾರ್ಪಾಡು ಮಾಡುವುದಕ್ಕೆ ಅವಕಾಶವಿರಲೆಂದು ಹಾಗೆ ಮಾಡಿದ್ದೇನೆ. ಇಷ್ಟು ವಿಚಾರಗಳನ್ನು ಹೇಳಿ ಈ ಮಸೂದೆಯನ್ನು ನಾನು ಸಭೆಯ ಮುಂದೆ ಮಂಡಿಸುತ್ತೇನೆ.

Sri V. S. PATIL (Belgaum I).—On a point of information, Sir. May I know from the Hon'ble Minister as to whether he intends to have any additional staff for the enforcement of this particular Bill or whether he is going to enforce this with the existing staff under his control ?

Sri D. DEVARAJ URS.—As it is, we do not intend to have any additional staff. We want to carry on with the existing staff empowering them to act as Inspectors under the Act.

[MR. DEPUTY SPEAKER in the Chair.]

2-30 P.M.

ಶ್ರೀ ಸಂಜೀವನಾಥ ಐಕಳ (ಸೂರತ್ಕಲ್).—ಮಾನ್ಯ ಸಭಾಪತಿಗಳೇ, ಮೈಸೂರು ರಾಜ್ಯದ ಬೀಡಿ ಕೈಗಾರಿಕೆಗಳಿಗೆ ಸಂಬಂಧಪಟ್ಟ ೧೯೬೩ನೆಯ ಇಸವಿಯ ವಿಧೇಯಕವನ್ನು ಸ್ವಾಗತಿಸುತ್ತಾ ನನ್ನ ಕೆಲವು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ. ಮೊದಲಿಗೆ ಈ ಮಸೂದೆಯನ್ನು ಸ್ವಾಗತಿಸುತ್ತೇನೆ. ಏಕೆಂದರೆ ಈ ಮಸೂದೆಯನ್ನು ನಾವು ಅನೇಕ ವರ್ಷಗಳಿಂದಲೂ ಬರುತ್ತದೆ ಎಂದು ನಿರೀಕ್ಷಿಸುತ್ತಿದ್ದೆವು. ಈಗ ಅದು ಬಂದಿದೆ. ಕಾರ್ಮಿಕರಿಗೆ, ಕೆಲವು ಅನುಕೂಲತೆಗಳನ್ನು ಒದಗಿಸಬೇಕೆಂಬ ಭಾವನೆಯಿಂದ ಈ ಮಸೂದೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಆದರೆ ಸರಕಾರ ಮಸೂದೆ ತರುವುದೇನೂ ಕಷ್ಟವಲ್ಲ. ಈ ಮಸೂದೆಯನ್ನೂ ಬೇರೆ ಬೇರೆ ಇತರ ಕಾನೂನುಗಳಂತೆ ಸುಮ್ಮನೆ ಪಾಸುಮಾಡಿಕೊಂಡು ಇಡಬಹುದು. ಆದರೆ ಇದನ್ನು ಜಾರಿಗೆ ಕೊಡುವುದಕ್ಕಾಗಿ ಸರಕಾರದ ಎಷ್ಟೇ ಅಧಿಕಾರಿಗಳಿದ್ದರೂ ಇದನ್ನು ಕಾರ್ಯಗತ ಮಾಡದೇ ಇರುವುದರಿಂದ ಇದರಿಂದ ಯಾವ ನ್ಯಾಯವೂ ದೊರಕುವುದಿಲ್ಲ. ಇದಕ್ಕೆ ಕಾರಣ ಸರಕಾರಿ ಅಧಿಕಾರಿಗಳಲ್ಲಿ ವಿಶೇಷವಾಗಿ honesty, integrity, efficiency and application to do the needful things. ಇಲ್ಲ ಎಂದು ಹೇಳಬಹುದು. ಕಾರ್ಮಿಕರಿಗೆ ಅನುಕೂಲ ಮಾಡಿಕೊಡಬೇಕು ಎಂಬ ಧ್ಯೇಯ ಮತ್ತು ತತ್ವಗಳು ಸರಿಯಾಗಿದ್ದರೂ ಇದನ್ನು ಆಚರಣೆಗೆ ತರುವಾಗ ಅವೊಂದೂ ಕಾಣುತ್ತಿಲ್ಲ. ಕಾರ್ಮಿಕರ ಹಿತಕ್ಕೆ ಸಂಬಂಧಪಟ್ಟಂತೆ ಸಾಧಾರಣವಾಗಿ ಈಗಾಗಲೇ ಐದಾರು ಕಾನೂನುಗಳಾಗಿವೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟಿದೆ. ಪೇಮೆಂಟ್ ಆಫ್ ವೇಜಸ್ ಆಕ್ಟಿದೆ. ವೀಕ್ಲೀ ಹಾಲಿಡೇಸ್ ಆಕ್ಟಿದೆ. ಪೇಮೆಂಟ್ ಆಫ್ ಕಾಂಪೆನ್‌ಸೇಷನ್ ಆಕ್ಟಿದೆ ಮತ್ತು ಫ್ಯಾಕ್ಟರೀಸ್ ಆಕ್ಟಿದೆ. ಹೀಗೆ ಐದಾರು ದೊಡ್ಡದೊಡ್ಡ ಕಾನೂನುಗಳು ಇವೆ. ಇವಲ್ಲದೇ ಇನ್ನೂ ಸಣ್ಣಸಣ್ಣ ಶಾಸನಗಳೂ ಇವೆ. ಇಷ್ಟೆಲ್ಲಾ ಇದ್ದರೂ, ಬಡಕಾರ್ಮಿಕರಿಗೆ ನಿಜವಾಗಿಯೂ ಏನೂ ಪ್ರಯೋಜನವಾಗುವುದಿಲ್ಲ. ನಾವು ನೋಡುತ್ತಿರುವಂತೆ ಪ್ರತಿದಿವಸವೂ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಎಂದರೆ ಎಷ್ಟೋ ಕೈಗಾರಿಕಾ ವಿವಾದಗಳಿಗಾಗಿ ಟ್ರಿಬ್ಯೂನಲ್‌ಗಳು ನೇಮಕವಾಗುತ್ತವೆ. ಮೇಲಿಂದ ಮೇಲೆ ಇಂತಹ ನ್ಯಾಯಾಲಯಗಳು ನೇಮಕವಾಗುತ್ತಿರುವುದನ್ನು ನಾವು ನೋಡಬಹುದು. ನಮಗೆ ಬೇಕಾಗಿರುವ ಕಾನೂನುಗಳ ಹೆಚ್ಚುವರಿಯಾಗಿದ್ದರೂ ಅವುಗಳ ಉಪಯೋಗವಾಗದೇ ಇರುವಾಗ ಮೇಲಿಂದ ಮೇಲೆ ಇಂತಹ ಕಾನೂನುಗಳನ್ನು ಮತ್ತು ಅದರ ಮೂಲಕ ಹೊರಡಿಸಲಾಗುವ ಆಜ್ಞೆಗಳನ್ನು ಪಾಲಿಸದೇ ಹೋದರೆ ನಿಷ್ಠಾವಂತರಿಗೆ ಸರಕಾರದಿಂದ ನ್ಯಾಯ ದೊರೆಯುವಂತೆ ತೋರುವುದಿಲ್ಲ. ನಾನು ಹೇಳುವುದೇನೆಂದರೆ, ಇಂತಹ ಕಾನೂನುಗಳು ನಿಜವಾಗಿ ಬೇಕು. ಆದರೆ ಇದನ್ನು ಜಾರಿಗೆ ತರುವಾಗ ಇದರ ಅಧಿಕಾರಿಗಳಲ್ಲಿ ಚಾಕಚಕ್ಯತೆ, ವಿಚಕ್ಷಣತೆ ಮತ್ತು ಕಾರ್ಯದಕ್ಷತೆ ಇರಬೇಕಲ್ಲದೆ, ಧರ್ಮದ ಕಡೆಗೆ ಅವರ ಗಮನವಿರುವಂತೆ ಮಾಡಬೇಕಾದುದು ಅಗತ್ಯ. ಅಧಿಕಾರಿಗಳಿಂದ ತುಂಬಾ ಉಪಕಾರವಾಗುವುದಕ್ಕೆ ಬದಲಾಗಿ ಉಪದ್ರವಗಳೇ ಹೆಚ್ಚಾಗುತ್ತಿವೆ. ನಾಲ್ಕೈದು ಕಾನೂನುಗಳು ಇದ್ದರೂ ಕಾರ್ಮಿಕ ಕ್ಷೇತ್ರದಲ್ಲಿ ತುಂಬಾ ಅನಾನುಕೂಲಗಳಾಗುತ್ತವೆ. ಎಷ್ಟೋ ಕಡೆಗಳಲ್ಲಿ Weekly Holidays ಇಲ್ಲ. Payment of Wages Act ; ಇತ್ಯಾದಿ ಕೆಲವು ಕಾನೂನುಗಳು ಇದ್ದರೂ ಅದರಿಂದ ಜನತೆಗೆ ಹೆಚ್ಚಿನ ಉಪಯೋಗವಾಗುತ್ತಿಲ್ಲ. ನಮ್ಮ ಕೆಲಸಗಾರರನ್ನು ಸಂಘಟನೆ ಮಾಡಲಕ್ಕೆ ಇಲಾಖೆಯವರು ಎಷ್ಟರಮಟ್ಟಿಗೆ ಅನುಕೂಲತೆಗಳನ್ನು ಒದಗಿಸುತ್ತಿದ್ದಾರೆ ಎನ್ನುವುದು ನೋಡಿದರೆ ಗೊತ್ತಾಗುತ್ತದೆ. ಅನೇಕ ಕಡೆಗಳಲ್ಲಿ ಲೇಬರ್ ಇನ್ಸ್‌ಪೆಕ್ಟರು, ಫ್ಯಾಕ್ಟರಿ ಇನ್ಸ್‌ಪೆಕ್ಟರು, ಲೇಬರ್ ವೆಲ್‌ಫೇರ್ ಆಫೀಸರುಗಳು ಇದ್ದರೂ ದೂರನ್ನು ಎಲ್ಲಿ ಕೊಡುವುದೆಂಬುದು ಕಾರ್ಮಿಕರಿಗೆ ಗೊತ್ತಿರುವುದಿಲ್ಲ. ಇದು ಅಧಿಕಾರಿಗಳ ದಕ್ಷತೆಯಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಯಾವ ದೂರನ್ನೂ ತಾವು ಕೊಟ್ಟೇ ಇಲ್ಲ. ಯಾವುದಾದರೂ ಸಂದರ್ಭದಲ್ಲಿ ಕೂಲಿಗಾರರಿಗೆ ನ್ಯಾಯ ದೊರೆತಿಲ್ಲ ಎಂದು ಹೇಳಿದ್ದರೆ ಅದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಸಂಜೀವನಾಥ ಐಕಳ.—ಉದಾಹರಣೆಗಾಗಿ ಪ್ಲಾಂಟೇಷನ್ಸ್ ಲೇಬರ್ ಆಕ್ಟ್ ಎಂದಿರುವುದನ್ನು ನಿಜವಾಗಿಯೂ ಜಾರಿಗೆ ತಂದಿಲ್ಲ, ಕೆಲಸಗಾರರಿಗೆ ಇದರ ಪ್ರಯೋಜನವಾಗುತ್ತಿಲ್ಲ. ದೊಡ್ಡ ದೊಡ್ಡ ಕಂಪನಿಗಳ ಮೂಲಕ ನಡೆಯುತ್ತಿರುವ ಪ್ಲಾಂಟರುಗಳ ತೋಟದಲ್ಲಿಯೂ ಇದು ಜಾರಿಗೆ ಬರುವಂತೆ ಮಾಡಬೇಕು. ಇಂತಹ ಪ್ರಯತ್ನ ಇದುವರೆಗೂ ನಡೆದಿಲ್ಲ. ಸಣ್ಣಸಣ್ಣ ತೋಟಗಳ ಪ್ಲಾಂಟರುಗಳ ಮೇಲೆ ಈ ಕಾನೂನಿನಿಂದ ಅನೇಕ ಕಷ್ಟಗಳು ಬರುತ್ತವೆ. ಆದ್ದರಿಂದ ಈ ಕಾನೂನನ್ನು ದೊಡ್ಡ ಕಂಪೆನಿಗಳ ತೋಟಗಳಿಗೂ ಅನ್ವಯವಾಗುವಂತೆ ಮಾಡಬೇಕು. ಇದರ ಉದ್ದೇಶ ತುಂಬಾ ಚೆನ್ನಾಗಿದೆ. ಧ್ಯೇಯವೂ ಉದಾತ್ತವಾಗಿದೆ. ಆದರೆ ಇದರ ಕಾರ್ಯಾಚರಣೆ ನ್ಯಾಯವಾಗಿ ಕೆಲಸ ನಡೆಯುವಂತೆ ನೋಡಿಕೊಂಡು ಕೂಲಿಕಾರರುಗಳಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಬೀಡಿ ಕೆಲಸಗಾರರಂತೆ ಇನ್ನೊಂದು ಪ್ರಾಮುಖ್ಯವಾದ ಕೆಲಸಗಾರರ ವರ್ಗವಿದೆ. ಅದೇನೆಂದರೆ ನಶ್ಯ ಕೆಲಸ ಮಾಡುವವರು ನಮ್ಮ ಜಿಲ್ಲೆಯಲ್ಲಿ ಬಡವರಾದ ಬಹುಜನ ಈ ನಶ್ಯದ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಭಾಗದಲ್ಲಿ ಸುಮಾರು ಬೀಡಿ ಕೆಲಸ ಮಾಡುವವರು ೨೫,೦೦೦ ದಷ್ಟು ಜನರಿದ್ದರೆ, ನಶ್ಯ ಮಾಡುವ ಕೆಲಸಗಾರರು ಸುಮಾರು ಐದಾರು ಸಾವಿರದಷ್ಟು ಇದ್ದಾರೆ. ಸಾಧಾರಣವಾಗಿ ನಮ್ಮ ಮಂಗಳೂರು ಟೈಲ್ಸ್, ಮಂಗಳೂರು ಕಾಫೀ, ಮಂಗಳೂರು ಬೀಡಿ, ಹಾಗೂ ಮಂಗಳೂರು ನಶ್ಯದಂತಹವುಗಳು ಹೆಸರು ಪಡೆದಿವೆ. ಈ ಉದ್ಯಮಗಳಲ್ಲಿ ತೊಡಗಿರುವ ಕೆಲಸಗಾರರನ್ನು ಕೂಡ ಇದರೊಳಗೆ ಸೇರಿಸುವುದು ಅಗತ್ಯ ಎಂದು ನನಗೆನಿಸುತ್ತದೆ. ಈ ಬಿಲ್ಲು ಹೇಗೂ ಸೆಲೆಕ್ಟ್ ಕಮಿಟಿಗೆ ಹೋಗುವ ಪ್ರಮೇಯವಿದೆ ಎಂದು ಮಂತ್ರಿಗಳು ಹೇಳಿದರು. ಆದರೆ ನನಗಾದರೂ ಇದು ಕಮಿಟಿಗೆ ಹೋಗುವುದು ಅಷ್ಟೇನೂ ಅಗತ್ಯವಿಲ್ಲ ಎಂದು ಕಾಣುತ್ತದೆ. ಇಲ್ಲೇ ಇದಕ್ಕೆ ಬೇಕಾದ ಒಂದೆರಡು ಸೂಚನೆಗಳನ್ನು ತಂದು ಇದನ್ನು ಪಾಸುಮಾಡಬಹುದಿತ್ತು. ಆದರೂ ಸೆಲೆಕ್ಟ್ ಕಮಿಟಿಗೆ ಹೋಗುವಂತಿದ್ದರೆ ಅದಕ್ಕೆ ನನ್ನ ಆಕ್ಷೇಪಣೆಯಿಲ್ಲ. ಆದರಲ್ಲಿ ನಶ್ಯದ ಕೆಲಸಗಾರರನ್ನೂ ಸೇರಿಸುವುದು ಅಗತ್ಯ. ಬೀಡಿ ಕೆಲಸಗಾರರಗಿಂತ ನಶ್ಯದ ಕೆಲಸಗಾರರು ಕೇವಲ, ಹತ್ತು ಹದಿನೈದು ಮಂದಿ ಹಾಗೂ ಎಂಟುಮಂದಿ ಕೂಡಿಕೊಂಡು ಕೆಲಸ ಮಾಡುವವರು ಸಣ್ಣಸಣ್ಣ ಮಾಲೀಕರಾಗಿದ್ದಾರೆ. ಇವರಿಗೆ Shop Establishment Act, Factories Act, ಇವು ಯಾವುದೂ ಲಾಗು ಆಗುವುದಿಲ್ಲ, ಬೇರೆ ಬೇರೆ ಕಡೆಗಳಲ್ಲಿ ನಶ್ಯ ತಯಾರಿಸುವವರೂ ಇದ್ದಾರೆ. ಈ ಕೆಲಸಗಾರರನ್ನೂ ಬೀಡಿ ಕೆಲಸಗಾರರೊಂದಿಗೆ ಸೇರಿಸಿದರೆ ಸರಿಯಾಗಿರುತ್ತದೆ. ಇದು ವರ್ಕ್ ಲೋಡಿನ ಮೇಲೆ ಕೆಲಸ ಮಾಡುವುದಲ್ಲ, ಒಂದು ದಿವಸದ ಕೆಲಸ ಎಂದರೆ ಒಂದುಸಾವಿರ ಬೀಡಿಗಳನ್ನು ಕಟ್ಟುವುದು. ಇಂತಹ ಕೆಲಸವನ್ನು ಎಷ್ಟೋ ಮನೆಗಳಲ್ಲಿ ಮಾಡುತ್ತಿರುವ ಪರಿಸ್ಥಿತಿಯೂ ಇದೆ.

ಅವರು ಇಡೀ ದಿವಸ ಕೆಲಸ ಮಾಡಬಹುದು ಅರ್ಧ ದಿವಸ ಕೆಲಸ ಮಾಡಬಹುದು, ಕೆಲಸ ಮಾಡದೆ ಇದ್ದರೂ ಇರಬಹುದು. ಬೀಡಿ ಕೆಲಸಗಾರರಿಗೆ piece-rate system ಇರುತ್ತದೆ; ಅವರಿಗೆ ಸ್ವಲ್ಪ ಸ್ವಾತಂತ್ರ್ಯವಿದೆ ಆದ್ದರಿಂದ ನಶ್ಯದ ಕೆಲಸಗಾರರನ್ನೂ ಈ ಮಸೂದೆಯಲ್ಲಿ ಸೇರಿಸುವುದು ಪ್ರಾಮುಖ್ಯವಾದ ವಿಷಯವಾಗಿದೆ.

ಈ ಕಾನೂನು ಮಾಡುವುದೇನೋ ಒಳ್ಳೆಯದು. ಆದರೆ ಈ ಕಾನೂನಿನಿಂದ ದೊಡ್ಡ ತೊಂದರೆ ಆದೀತೋ ಎಂಬ ಭಯವಾಗುತ್ತದೆ. ಇದರಲ್ಲಿರುವ ಬೇರೆ ಬೇರೆ ಪ್ರಾವಿಶನ್ನುಗಳ ಪ್ರಕಾರ ಬೀಡಿ ತಯಾರಿಸುವ ಮಾಲೀಕರು ಫ್ಯಾಕ್ಟರಿ ಕಟ್ಟಬೇಕು. ಲೈಸೆನ್ಸು ತೆಗೆದುಕೊಳ್ಳಬೇಕು, ಕೆಲಸಗಾರರಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಬೇಕು ಎಂದೆಲ್ಲಾ ಹೇಳಿದ್ದೀರಿ: ರಾಜ್ಯದ ಬೇರೆ ಕಡೆಗಳಲ್ಲಿ ಬೀಡಿ ಹೇಗೆ ತಯಾರಾಗುತ್ತಿದೆಯೋ ನನಗೆ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಈಗಾಗಲೇ ಸಾಧಾರಣವಾಗಿ ಬೀಡಿ ಫ್ಯಾಕ್ಟರಿಗಳಲ್ಲಿ 25 ಸಾವಿರ ಜನ ಕೆಲಸಮಾಡುತ್ತಿದ್ದಾರೆ. ಈ ಬೀಡಿ ಕಟ್ಟುವ ಕ್ರಮ ಹೇಗಿದೆಯೆಂದರೆ ಹೊರಗಿನ ದೊಡ್ಡ ಕಂಪೆನಿಗಳಿಗೆ ಕಂಟ್ರಾಕ್ಟ್ ಸಿಸ್ಟಂಮೇಲೆ ಬೀಡಿ ತಯಾರಿಸುವುದನ್ನು ವಹಿಸುತ್ತಾರೆ; ಅವರು ಕಂಟ್ರಾಕ್ಟ್ ಲೈಸೆನ್ಸ್ ತೆಗೆದುಕೊಳ್ಳುತ್ತಾರೆ. ಬೀಡಿ ಕಟ್ಟುವುದನ್ನು ಮನೆಗಳಲ್ಲಿ ಮಾಡಿಸುತ್ತಾರೆ. ಪ್ರತಿಯೊಂದು ಮನೆಯಲ್ಲಿಯೂ ಕೆಲವರು ಹೆಂಗಸರು, ಮಕ್ಕಳು (ಗಂಡಸರು ಕೂಡ) ಬೀಡಿ ಕಟ್ಟುತ್ತಾರೆ. ಮನೆಗಳಿಗೇ ಬೇಕಾದ ಹೊಗೆಸೊಪ್ಪು, ಎಲೆ ಮುಂತಾದುವುಗಳನ್ನು ತಂದುಕೊಡುತ್ತಾರೆ. ಪ್ರತಿದಿವಸ ಕೆಲಸ ನೋಡಿ, ಅವರಿಗೆ ಕೂಲಿ ಕೊಡುತ್ತಾರೆ. ಈ ಕಾನೂನು ಜಾರಿಗೆ ಬಂದಮೇಲೆ ಮನೆಯಲ್ಲಿ ಕೆಲಸಮಾಡುವವರ ಪರಿಸ್ಥಿತಿಯೇನು ? ಇದರಲ್ಲಿರುವ ವಿಧೇಯಕದ ಪ್ರಕಾರ ಮನೆಯಲ್ಲಿ ಬೀಡಿ ತಯಾರಿಸುವವರಿಗೆ ಅಡ್ಡಿ ಆತಂಕ ಮಾಡುತ್ತೀರಾ ? ನಮ್ಮ ಜಿಲ್ಲೆಯಲ್ಲಿ ಸಾವಿರಾರು ಮಂದಿ ಮುಸ್ಲಿಮ್ ಹೆಂಗಸರು ಬೀಡಿ

ಯನ್ನು ಮನೆಯಲ್ಲಿ ಕಟ್ಟುತ್ತಾರೆ. ಗಂಡಸರು ಹೋಗಿ ಬೀಡಿಸೊಪ್ಪು, ನೂಲು, ಎಲೆಗಳನ್ನು ಅವರಿಗೆ ತಂದುಕೊಡುತ್ತಾರೆ. ಈ ಮುಸ್ಲಿಮ್ ಹೆಂಗಸರು ಫ್ಯಾಕ್ಟರಿಗಳಿಗೆ ಬಂದು ಕೆಲಸ ಮಾಡುವವರಲ್ಲ, ಮನೆಯಲ್ಲಿಯೇ ಕಟ್ಟುವವರು ಈ ಕಾನೂನು ಅಂಶಗಳಿಂದ ಮನೆಯಲ್ಲಿ ಕೆಲಸ ಮಾಡುವ ಮುಸ್ಲಿಮ್ ಹೆಂಗಸರಿಗೆ ತೊಂದರೆಯಾಗುವುದಿಲ್ಲವೇ? ಅವರ ಜೀವನ ನಿರ್ವಹಣೆಗೆ ದೊಡ್ಡ ಅಪಾಯ ಸಂಕಟ ಒದಗುವುದಿಲ್ಲವೇ? ನಮ್ಮಲ್ಲಿ ಹೆಚ್ಚಿನ ಮುಸ್ಲಿಮ್ ಹೆಂಗಸರೇ ಅಲ್ಲದೆ, ಅವರ ಮಕ್ಕಳೂ, 8-12-15-20 ವರ್ಷಗಳ ವಯಸ್ಸಿನವರೂ ಸಹ ಮನೆಯಲ್ಲಿ ಕೂಡ ಹಾಗೆ ಕೆಲಸ ಮಾಡುತ್ತಾರೆ. ಅವರು ಈ ಕಾನೂನಿನ ವ್ಯಾಪ್ತಿಗೆ ಒಳಪಡುವುದಿಲ್ಲವೇ? ಈ ಕಾನೂನಿಂದ ಇನ್ನೊಂದು ತೊಂದರೆ ಇದೆ. ಅವರುಗಳು ತಾವು ಮಾಡುವ ಕೆಲಸದ ಜೊತೆಗೆ, ಬೀಡಿ ಕಸಬನ್ನು ಉಪಸಂಪಾದನೆಗಾಗಿ ತೆಗೆದುಕೊಂಡಿದ್ದಾರೆ. ಬೀಡಿ ಕಟ್ಟುವ ಪ್ರವೃತ್ತಿ, ಉದ್ಯೋಗ ನಮ್ಮಲ್ಲಿ ಎಷ್ಟರತನಕ ಹೋಗಿದೆಯೆಂಬುದರಿಂದ, ಅದರಿಂದ ರೈತರದು ಒಂದು ದೊಡ್ಡ ದೂರು ಎದ್ದಿದೆ. ಅದೇನೆಂದರೆ ಈ ಬೀಡಿ ಉಪಕಸಬಿನಿಂದ ಅವರಿಗೆ ಕೆಲಸಕ್ಕೆ ಜನ ಸಿಕ್ಕುವುದಿಲ್ಲವೆಂದೂ, ರೈತರ ಕೂಗು ಬಹಳವಾಗಿ ಕೇಳಿಬರುತ್ತಿದೆ. ಇದು ಎಷ್ಟರಮಟ್ಟಿಗೆ ಸರಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಬೀಡಿ ಕೈಗಾರಿಕೆ ನಮ್ಮ ಜಿಲ್ಲೆಯಲ್ಲಿ ಒಂದು ದೊಡ್ಡ ಉಪಕಸಬಾಗಿದೆ. ನಿಮ್ಮ ಕಾನೂನಿನ ಪ್ರಕಾರ ಫಾಕ್ಟರಿಗೇ ಹೋಗಿ ಬೀಡಿ ಕಟ್ಟಬೇಕೆಂದರೆ, ಎಷ್ಟೋ ಕೆಳವರ್ಗದ ಮುಸ್ಲಿಮ್ ಕುಟುಂಬಗಳು ಉಪವಾಸ ಬೀಳುವ ಸಂಭವ ಬರಬಹುದು. ಈ ಬೀಡಿ ಕಸಬು ಕೇವಲ ಷಹರುಗಳಲ್ಲಿಯೇ ಇಲ್ಲ. ನಮ್ಮ ಜಿಲ್ಲೆಯಲ್ಲಿ ಸಾಧಾರಣವಾಗಿ ಎಲ್ಲ ಕಡೆಗೂ ಹಬ್ಬಿದೆ. ನಮ್ಮ ಜಿಲ್ಲೆಯಲ್ಲಿ 50 ಸಾವಿರ ರೂಪಾಯಿ ಸೂಪರ್‌ಟ್ಯಾಕ್ಸ್ ಕೊಡುವಂಥ 2-3 ದೊಡ್ಡ ಕಂಪೆನಿಗಳಿವೆ (ಇನ್‌ಕಂಟ್ಯಾಕ್ಸ್ ಬಿಟ್ಟು). ಗಣೇಶ ಬೀಡಿ, No. 30 ಬೀಡಿ, P.V. 5 ಬೀಡಿಗಳು, ಸುವಾಸನೆ ಬೀಡಿಗಳು, ದರ್ಬಾರ್ ಬೀಡಿಗಳು, ಎಂದು ಹೆಸರಿರುವ ದೊಡ್ಡ ದೊಡ್ಡ ಕಂಪನಿಗಳು ನಮ್ಮ ಜಿಲ್ಲೆಯಲ್ಲಿವೆ. ಅವರುಗಳ ನೌಕರರುಗಳು ಮನೆಯಲ್ಲಿ ಕೆಲಸ ಮಾಡುತ್ತಿರುವುದರಿಂದ, ನಿಮ್ಮ ಕಾನೂನು ಜಾರಿಗೆ ಬಂದಲ್ಲಿ, ಬೀಡಿ ಕಟ್ಟುತ್ತಿರುವ ಮುಕ್ಕಾಲು ಪಾಲು ಕುಟುಂಬಗಳನ್ನು ನಿರುದ್ಯೋಗಕ್ಕೆ ದುಡಿದಹಾಗಾಗುವುದಿಲ್ಲವೇ? ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುತ್ತಾರೆ. ಆ ಸಮಿತಿಯಲ್ಲಿ ತಜ್ಞರು ಇರುತ್ತಾರೆ. ಅವರಿಗೆ ನಾನು ಈ ವಿಷಯವನ್ನು ಬಿಟ್ಟುಬಿಡುತ್ತೇನೆ.

ಈ ಮಸೂದೆಯನ್ನು ನೈತಿಕ ದೃಷ್ಟಿಯಲ್ಲಿ ಒಪ್ಪುತ್ತೇನೆ. ಇಂಥ ಕೈಗಾರಿಕೆಯ ಕೆಲಸಗಳು ಮನೆಯಲ್ಲಿ ನಡೆಯಬಾರದು ಮತ್ತು ಅದರಲ್ಲಿ ಸಣ್ಣ ಮಕ್ಕಳು ಮತ್ತು ಹೆಂಗಸರು ಕೆಲಸ ಮಾಡದಿರುವುದು ಒಳ್ಳೆಯದು. ಈ ಉದ್ಯೋಗದಲ್ಲಿ 3-4 ದೊಡ್ಡ ರೋಗಗಳು ಬರುವ ಸಂಭವವಿದೆ. ಒಂದು ಶ್ವಾಸಕೋಶಕ್ಕೆ ಸಂಬಂಧಪಟ್ಟದು; ಅದು ಅಸ್ತಮ ರೋಗ. ಕ್ಷಯವೂ ಸಹ ಈ ವೃತ್ತಿಯಿಂದ ಬರುತ್ತದೆ. ಈ ಕೆಲಸದಲ್ಲಿ waste of sexual energy ಇದ್ದು, impotency ಉಂಟುಮಾಡುತ್ತದೆ. ಹೇಗಾದರೂ ಈ ರೀತಿ 3-4 ರೋಗಗಳ ಲಕ್ಷಣಗಳು ಬೀಡಿ ಕೆಲಸಗಾರರಲ್ಲಿರುತ್ತವೆ.

ಒಂದಾನೊಂದು ಕಡೆ ಬೀಡಿಯನ್ನು ತಯಾರಿಸಲಿಕ್ಕೆ ಯಂತ್ರವನ್ನು ಉಪಯೋಗಿಸುತ್ತಿದ್ದರಂತೆ. ಅದು ಕಲಕತ್ತೆಯಲ್ಲಿ ಜಾರಿಗೆ ಬಂತು ಎಂದು ಕೇಳಿದ್ದೆ. ನೈತಿಕ ದೃಷ್ಟಿಯಿಂದ ಮತ್ತು ಆರೋಗ್ಯ ದೃಷ್ಟಿಯಿಂದ ಬೀಡಿಯನ್ನು ಮಿಲ್ಲುಗಳಲ್ಲಿ ತಯಾರಿಸುವುದು ಒಳ್ಳೆಯದು. ಆದರೆ ಹಾಗೆ ಮಾಡಿದರೆ ನಿರುದ್ಯೋಗದ ದೊಡ್ಡ ಪ್ರಶ್ನೆ ಬರುತ್ತದೆ. ಅದರಿಂದ ಸರಕಾರದವರು ಯಂತ್ರಗಿರಣಿಗಳ ಮೂಲಕ ತಯಾರಿಸುವುದನ್ನು ಉಪೇಕ್ಷಿಸಿರಬಹುದು. ಕೆಲಸಗಾರರ ಆರೋಗ್ಯದ ದೃಷ್ಟಿಯಿಂದ ಯಂತ್ರ ತಯಾರಿಕೆಯ ವಿಚಾರವನ್ನು ಸ್ವಾಗತಿಸುವಾಗ ಈ ಉದ್ದಿಮೆಯಲ್ಲಿ ತೊಡಗಿರುವವರ ನಿರುದ್ಯೋಗ ಸಮಸ್ಯೆಯ ದೃಷ್ಟಿಯಿಂದಲೂ ನೋಡಬೇಕಾಗುತ್ತದೆ. ಇದನ್ನೆಲ್ಲಾ ನಮ್ಮ ಸೆಲೆಕ್ಟ್ ಕಮಿಟಿಯವರು ಪರ್ಯಾಲೋಚಿಸುತ್ತಾರೆಂದು ನಾನು ಭಾವಿಸುತ್ತೇನೆ.

ನನ್ನ ಕೆಲವು ಸಮಸ್ಯೆಗಳನ್ನೂ, ಅನುಮಾನಗಳನ್ನೂ ನಿಮ್ಮ ಮುಂದಿಟ್ಟು, ಈ ಮಸೂದೆಯನ್ನು ಸ್ವಾಗತಿಸುತ್ತೇನೆ. ನನಗೆ ತೋರಿದ ಸಮಸ್ಯೆಗಳನ್ನು ಕೈಗಾರಿಕೆಯ ದೃಷ್ಟಿಯಿಂದ, ಜನರ ಆರೋಗ್ಯ ದೃಷ್ಟಿಯಿಂದ, ಕೆಲಸಗಾರರ ಹಿತರಕ್ಷಣೆ ದೃಷ್ಟಿಯಿಂದ, ಅವರ ಆರ್ಥಿಕ ದೃಷ್ಟಿಯಿಂದ, ಮತ್ತು ನೈತಿಕದೃಷ್ಟಿಯಿಂದ ಪರಿಪೂರ್ಣವಾಗಿ ನಿಮ್ಮ ಮುಂದಿಟ್ಟಿದ್ದೇನೆ. ಮಾಲೀಕರಿಗೆ ಆಗುವ ತೊಂದರೆಗಳನ್ನೂ ಇಲ್ಲಿ ಹೇಳಿದ್ದೇನೆ. ಮುಖ್ಯವಾಗಿ ಕೆಲಸಗಾರರಿಗಿರುವ ಕುಂದುಕೊರತೆಗಳನ್ನು ಸರಿಪಡಿಸಬೇಕು. ಅದಕ್ಕೆ ನಿಜವಾಗಿಯೂ ಕೆಲಸಗಾರರ ಹಿತರಕ್ಷಣೆಯಲ್ಲಿ ಆಸಕ್ತಿ ಇರತಕ್ಕಂಥ ಮತ್ತು ಮಾಡತಕ್ಕಂಥ ಅಧಿಕಾರಿಗಳನ್ನು ನೇಮಿಸಬೇಕು.

ಇನ್ನೊಂದು ವಿಷಯವನ್ನು ಮಾತ್ರ ಹೇಳಬೇಕಾಗಿದೆ. ಕ್ಲಾಜ್ 26 ರಲ್ಲಿ 240 ದಿನ ಕೆಲಸ ಮಾಡಿದವರಿಗೆ ಮಾತ್ರ 20 ದಿನಗಳಿಗೆ ಒಂದು ದಿನದಂತೆ ರಜೆ ಕೊಡಲ್ಪಡತಕ್ಕದು ಎಂದು ಹೇಳಿದೆ; ಹೀಗೆ ಆಗಬಾರದು; ಇದು ಎಲ್ಲರಿಗೂ ಅನುಕೂಲವಾಗುವುದಿಲ್ಲ. ಎಷ್ಟು ದಿವಸ ಕೆಲಸಮಾಡಿದ್ದರೆ, ಅಷ್ಟು ದಿವಸಕ್ಕೆ ದಾಮಾಷಾ ಮೇಲೆ ರಜೆ ಸಿಕ್ಕುವ ಹಾಗೆ ಆಗಬೇಕು.

(ಶ್ರೀ ಸಂಜೀವನಾಥ ಐಕಳ)

ಮತ್ತೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಾದರೆ ಲೇಬರ್ ಇನ್‌ಸ್ಪೆಕ್ಟರ್ ಎಂದು ನೇಮಕ ಮಾಡಿದ್ದೀರಿ. ಇವರ ಉದ್ಯೋಗ ಏನು, ಇವರ ಕಾರ್ಯವ್ಯಾಪ್ತಿ ಏನು ಎನ್ನುವುದರ ಬಗ್ಗೆ ಒಂದು ನೋಟಿಫಿಕೇಷನ್ ಮಾಡದೆ ಇರುವುದರಿಂದ ಮಂಗಳೂರಿಗೆ ನೇಮಕಮಾಡಿ ಕಳಿಸಿರುವ ನಾಲ್ಕೈದು ಜನ ಲೇಬರ್ ಇನ್‌ಸ್ಪೆಕ್ಟರುಗಳು ಕೆಲಸವಿಲ್ಲದೆ ಇದ್ದಾರೆ. ಹೀಗೆ ಬೇಕಾದಷ್ಟು ಸಿಬ್ಬಂದಿಯನ್ನು ನೇಮಿಸಿದ್ದೀರಿ. ಅವರ ಕೆಲಸದ ಪರಿಮಿತಿ ಏನೆಂಬುದನ್ನು ತಿಳಿಸಿಲ್ಲ. ನಾವು ಅವರ ಹತ್ತಿರ ಕೇಳಿದರೆ ಇನ್ನೂ ಸರ್ಕಾರದಿಂದ ಆರ್ಡರಾಗಿಲ್ಲ, ನೋಟಿಫಿಕೇಶನ್ ಆಗಿಲ್ಲ, ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಾರೆ.

Sri D. DEVARAJ URS.—It will be done shortly.

Sri SANJEEVANATH AIKALA.—In Government's parlance "shortly" means a minimum of 9 months.

Sri D. DEVARAJ URS.—By the time you reach your place it will be there

ಶ್ರೀ ಸಂಜೀವನಾಥ ಐಕಳ.—ಅವರ ಕೆಲಸವೇನು ಎನ್ನುವುದರ ಬಗ್ಗೆ ಆರ್ಡರಾಗಿಲ್ಲ, ಅವರೆಲ್ಲ ಕೆಲಸವಿಲ್ಲದೆ ಕುಳಿತಿದ್ದಾರೆ. ಇದಕ್ಕೆ ಗಮನ ಕೊಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಡಿ. ಸಾಮ್ರಾಜ್ಯ (ಬ್ರಹ್ಮಾವರ).—ಅಧ್ಯಕ್ಷರೇ, ನಾನು ಈ ಬಿಲ್ಲನ್ನು ಸ್ವಾಗತಿಸುತ್ತ ಅದರ ವಿಚಾರದಲ್ಲಿ ನನ್ನ ಅನುಭವವನ್ನು ಸಭೆಯ ಮುಂದೆ ಇಡಬಯಸುತ್ತೇನೆ. ಬೀಡಿ ಕಟ್ಟುವಂಥ ಕಾರ್ಮಿಕರಿಗೆ ಏನು ಅನುಕೂಲ ಮಾಡಿಕೊಡಬೇಕೆಂದು ಬಿಲ್ಲನ್ನು ತಂದಿದ್ದೀರಿ ಅದು ಕೆಲವು ಸಂದರ್ಭಗಳಲ್ಲಿ ಒಳ್ಳೆಯದಾದರೂ ಕೆಲವು ಸಂದರ್ಭಗಳಲ್ಲಿ ಬಹಳ ತೊಂದರೆಗಳು ಕೂಡ ಉಂಟು. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಬೀಡಿ ಕಟ್ಟುವವರು ಹೆಚ್ಚಿನ ಜನ ಹೆಂಗಸರು ಮತ್ತು 14 ವರ್ಷ ಪ್ರಾಯಕ್ಕೆ ಮೀರಿದ ಜನರು. ಹಳ್ಳಿಯವರು ಕೂಡ ಬಹಳ ಜನ ಈ ಉದ್ಯಮದಲ್ಲಿರುತ್ತಾರೆ. ಅವರೆಲ್ಲ ಇದನ್ನು ಉಪಕಸಬಾಗಿ ಇಟ್ಟುಕೊಂಡಿರುತ್ತಾರೆ. ಅನೇಕ ರೈತರು ಸಾಗುವಳಿ ಮಾಡಿ ಬಿಡುವಾದಾಗ ಈ ಕೆಲಸವನ್ನು ಮಾಡುತ್ತಾರೆ. ದಿನಕ್ಕೆ 13 ಗಂಟೆ ಕೆಲಸಮಾಡುತ್ತಾರೆ ಎಂದು ಹೇಳುವುದು ಸರಿಯಾಗುವುದಿಲ್ಲ. ದಿನಕ್ಕೆ ನಾಲ್ಕೈದಾರು ಗಂಟೆ ಕಾಲ ಬೀಡಿ ಕಟ್ಟುತ್ತಾರೆ. ಇದರಿಂದ ಅವರಿಗೆ ದಿನಕ್ಕೆ ಒಂದರಿಂದ ಮೂರು ರೂಪಾಯಿ ಕೆಲವು ವೇಳೆ ನಾಲ್ಕು ರೂಪಾಯಿವರೆಗೂ ಉತ್ಪತ್ತಿ ಇದೆ. ಇದರಲ್ಲಿ ಏನು ತೊಂದರೆ ಎಂದರೆ ಅವರು ಒಂದೇ ಕಡೆಯಲ್ಲಿ ಬಂದು ಬೀಡಿಯನ್ನು ಕಟ್ಟಬೇಕು, ಸರಿಯಾದ ಲೆಕ್ಕಾಚಾರ ಮಾಡಬೇಕು ಎಂದರೆ ನಮ್ಮ ಜಿಲ್ಲೆಯಲ್ಲಿ ತೊಂದರೆಯುಂಟು. ಮಂಗಳೂರು ಷಹರಿನಲ್ಲಿ ಈಗಿರುವ ಜನಗಳಿಗೇ ವಸತಿ ಸೌಕರ್ಯವಿಲ್ಲ. ಬೀಡಿ ಕಟ್ಟುವುದಕ್ಕೋಸ್ಕರ ಹಳ್ಳಿಯಿಂದ ಜನರು ಬಂದರೆ ಸಣ್ಣ ಸಣ್ಣ ಪಟ್ಟಣಗಳಲ್ಲಿ ಮತ್ತು ಮಂಗಳೂರಿನಂಥ ಷಹರುಗಳಲ್ಲಿ ಮನೆ ಬಾಡಿಗೆ ಕೊಡಲಿಕ್ಕೆ ಕೂಡ ಅವರಿಗೆ ಕಷ್ಟವಾಗುತ್ತದೆ. ನಮ್ಮ ಊರಿಗೆ ಆರು ಮೈಲಿ ದೂರವಿರುವ ಮೂಡಬಿದ್ರಿಯಿಂದ ಬೆಳಗ್ಗೆ ಅಥವಾ ಮಧ್ಯಾಹ್ನ ಬಸ್ಸಿನಲ್ಲಿ ಬಂದು ಹೊಗೆಸೊಪ್ಪು, ಎಲೆ ಮುಂತಾದುವನ್ನು ಐದಾರು ದಿವಸಕ್ಕಾಗುವಷ್ಟು ತೆಗೆದುಕೊಂಡು ಹೋಗಿ ಸಾಗುವಳಿ ಮುಗಿದ ಮೇಲೆ ಬೀಡಿ ಕಟ್ಟಿ ಅದರಿಂದ ಬರುವ ಉತ್ಪತ್ತಿಯನ್ನು ಉಪಯೋಗಿಸಿಕೊಳ್ಳುತ್ತಾರೆ. ಇದು ಅವರಿಗೆ ಒಂದು ಉಪಕಸಬಾಗಿರುತ್ತದೆ. ಅವರು ಪೇಟೆಗೆ ಬಂದು ಬೀಡಿ ಕಟ್ಟಬೇಕು ಎಂದರೆ ಅನೇಕ ಜನ ಹೆಂಗಸರಿಗೆ, ಹೆಚ್ಚಿಗೆ ಹೇಳುವುದಾದರೆ ಮುಸಲ್ಮಾನ್ ಘೋಷ ಹೆಂಗಸರಿಗೆ ಬಹಳ ತೊಂದರೆಯಾಗುತ್ತದೆ. ಅವರು ಈ ಕಸಬನ್ನೇ ಬಿಡಬೇಕಾಗುತ್ತದೆ. ಅವರಿಗೆ ಈ ಉಪಕಸಬಿನಿಂದ ಬರತಕ್ಕ ಉತ್ಪತ್ತಿ ನಿಂತುಹೋಗುತ್ತದೆ. ಬೇರೆ ಜಿಲ್ಲೆಗಳಿಗೂ ನಮ್ಮ ಜಿಲ್ಲೆಗೂ ಇರುವ ವ್ಯತ್ಯಾಸವೆಂದರೆ ನಮ್ಮಲ್ಲಿ ಮನೆಗಳು ಬಹಳ ದೂರವಾಗಿರುತ್ತವೆ. ಮನೆಗಳು ಒಂದಕ್ಕೊಂದು ಹೊಂದಿಕೊಂಡಿರುವುದಿಲ್ಲ. ಕೆಲವು ಕಡೆ ಒಂದು ಫರ್ಲಾಂಗ್ ದೂರದಲ್ಲಿದ್ದರೆ ಕೆಲವು ಕಡೆ ಅರ್ಧ ಮೈಲಿ, ಒಂದು ಮೈಲಿ ಇರುತ್ತವೆ. ಇಂಥ ಕಡೆಗಳಲ್ಲಿ ಬೀಡಿ ಕಾರ್ಮಿಕರು ಒಂದು ಸ್ಥಳದಲ್ಲಿ ಸೇರಿ ಕೆಲಸ ಮಾಡಬೇಕು ಎಂದರೆ ತೊಂದರೆಯಾಗುತ್ತದೆ. ರೈತರೂ—ಅವರಿಗೆ ಮೂರು ನಾಲ್ಕು ತಿಂಗಳು ಮಾತ್ರ ಕೆಲಸವಿರುತ್ತದೆ, ಉಳಿದ ಸಂದರ್ಭಗಳಲ್ಲಿ ಕೆಲಸವಿರುವುದಿಲ್ಲ—ತಮಗೆ ಕೆಲಸವಿಲ್ಲದ ವೇಳೆಯಲ್ಲಿ ಬೀಡಿ ಕಟ್ಟುವುದನ್ನು ಉಪಕಸಬಾಗಿ ಮಾಡಿಕೊಂಡು ತಮ್ಮ ಜೀವನವನ್ನು ಒಳ್ಳೆಯ ರೀತಿಯಲ್ಲಿ ನಡೆಸುತ್ತಿರುತ್ತಾರೆ. ಇಂಥ ಸಂದರ್ಭಗಳಲ್ಲಿ ಬಹಳ ಯೋಚನೆ ಮಾಡಬೇಕು.

ಇನ್ನೊಂದು ವಿಷಯವೆಂದರೆ ಸುವರ್ಣ ನಿಯಂತ್ರಣ ಆಜ್ಞೆಯಿಂದ ನಿರುದ್ಯೋಗಿಗಳಾದವರಲ್ಲಿ ಅರ್ಧ ಜನ ಹೆಂಗಸರು, ಅಥವಾ 14 ವರ್ಷಕ್ಕೆ ಮಿಕ್ಕಿದ ಹುಡುಗರು ಬೀಡಿ ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೂ ಈ ಬಿಲ್ಲಿನಿಂದ ತೊಂದರೆಯಾಗಿದೆ. ಆದುದರಿಂದ ಈ ವಿಷಯವಾಗಿ ಬಹಳ ಆಲೋಚನೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಸುಮಾರು ಹತ್ತು ಸಾವಿರ ಕುಟುಂಬಗಳು ಬೀಡಿ ಕಟ್ಟುವ ಕೆಲಸದಲ್ಲಿವೆಂದರೆ 45,000 ಜನ ಬೀಡಿ ಕಟ್ಟುವವರಿದ್ದಾರೆ. ಅವರಿಗೆಲ್ಲ ತೊಂದರೆಯಾಗದಂತೆ ಸೆಲೆಕ್ಟ್ ಕಮಿಟಿ ಮತ್ತು ಈ ಸಭೆ ನೋಡಿಕೊಳ್ಳಬೇಕೆಂದು ತಿಳಿಸಿ ನನಗೆ ನಾಲ್ಕು ಮಾತನ್ನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ರಾಜ್ಯದ ಮಾನ್ಯ ಕಾರ್ಮಿಕ ಸಚಿವರು ಈ ಸಭೆಯ ಮುಂದೆ ಇಟ್ಟಿರುವ ಮೈಸೂರು ರಾಜ್ಯದ ಬೀಡಿ ಕೈಗಾರಿಕೆ ವಠಾರಗಳ 1962ನೆಯ ವಿಧೇಯಕವನ್ನು ಓದಿನೋಡಿದೆ. ಈ ವಿಧೇಯಕದಲ್ಲಿ ಕೊಟ್ಟಿರತಕ್ಕ ಬೀಡಿ ಉದ್ಯಮಗಳಲ್ಲಿ ಕಾರ್ಮಿಕರಿಗೆ ಇರತಕ್ಕ ಸವಲತ್ತುಗಳನ್ನು ನೋಡಿದರೆ ಬಹಳ ಉತ್ತಮ ರೀತಿಯಿಂದ ಮಾಡಿದ್ದಿದೆ. ಆದರೆ ನಮ್ಮ ಸ್ನೇಹಿತರು ಈಗಾಗಲೇ ಸಂಶಯಪಟ್ಟಂತೆ ಈ ಕಾನೂನುಗಳು ಅಮಲಿನಲ್ಲಿ ಬರುವುವೋ ಇಲ್ಲವೊ ಎನ್ನುವುದನ್ನು ನಾವು ಇಲ್ಲಿ ವಿಚಾರಿಸತಕ್ಕದ್ದಿದೆ. ಈಗ ನಾವು ನೋಡಿದಹಾಗೆ ಬೀಡಿ ಕಟ್ಟುವ ಕೆಲಸದ ಬಗ್ಗೆ ನಾನು ರಾಜ್ಯದ ಕೆಲವೊಂದು ಭಾಗದಲ್ಲಿ ಹೋಗಿದ್ದೆ. ಮಂಗಳೂರು, ಗದಗ, ಧಾರವಾಡ, ಬೆಳಗಾಂ, ಬಳ್ಳಾರಿ ಮುಂತಾದ ಊರುಗಳಲ್ಲಿ ನಾನು ನೋಡಿದ್ದೇನೆ. ಈಗಾಗಲೇ ಮಂತ್ರಿಗಳು ವಿವರಿಸಿದಂತೆ ಬೀಡಿ ಕಟ್ಟುವ ಸ್ಥಳಗಳು ಬೆಳಕಿಲ್ಲದೆ, ಸ್ವಚ್ಛ ರೀತಿಯಲ್ಲಿಲ್ಲದೆ ರೋಗರುಜಿನಗಳಿಗೆ ಆಸ್ಪದ ಕೊಡತಕ್ಕ ಸ್ಥಳಗಳಾಗಿದ್ದುದು ಕಂಡುಬಂತು. ಇಷ್ಟೇ ಅಲ್ಲದೆ ಈಗಾಗಲೇ ಹೇಳಿದರು; ಸಾವಿರಾರು ಬೀಡಿಗಳನ್ನು ಕಟ್ಟಿದರೆ ಕಂಟ್ರಾಕ್ಟ್ ಮುಖಾಂತರವಾಗಿ ಅಥವಾ ಅವರಿಗೆ ದಿನಕೂಲಿಯಲ್ಲಿ ಬಹಳ ಕಡಮೆ ಕೂಲಿಯನ್ನು ಕೊಡತಕ್ಕ ಪರಿಸ್ಥಿತಿ ಕೂಡ ಉಂಟು ಎಂದು.

ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ರೀತಿಯಾಗಿ ಒಂದು ಸಾವಿರ ಬೀಡಿ ಸುತ್ತುವುದಕ್ಕೆ ರೇಟು ಇದೆ ಎಂಬುದು ಕಂಡು ಬಂದಿದೆ. ಈ ಮಸೂದೆಯಲ್ಲಿ ಹೇಳಿದ ಹಾಗೆ ಈ ಬೀಡಿ ಸುತ್ತುವ ಕೆಲಸಗಾರರು ಕೆಲಸ ಮಾಡುವ ಸ್ಥಳದಲ್ಲಿ ಗಾಳಿ ಬೆಳಕು ನೀರಿನ ವ್ಯವಸ್ಥೆ ಅವಶ್ಯಕವಾಗಿ ಇರಬೇಕು. ಕಾರ್ಮಿಕರ ಬಗ್ಗೆ ಅನುಕೂಲ ಒದಗಿಸಲು ಇದರಲ್ಲಿ ಆಸ್ಪದವಿದೆ. ಆದರೆ ಕಾರ್ಮಿಕರನ್ನು ಒಳ್ಳೇ ರೀತಿಯಿಂದ ನಡೆಸಿಕೊಂಡು ಬರತಕ್ಕ ಮಾಲೀಕರ ಬಗ್ಗೆ ಒಂದೆರಡು ಸಲವತ್ತು ಕೊಡಬೇಕಾಗಿತ್ತು. ಮಾಲೀಕರಿಗೆ ಸವಲತ್ತು ಒದಗಿಸದೇ ಹೋದರೆ ಎರಡು ಮೂರು ಸಾವಿರ ರೂಪಾಯಿ ಸಾಲ ತಂದು ಪ್ರಾರಂಭಿಸಿದ ಕಾರ್ಖಾನೆಗಳನ್ನು ಹಣ ಸಾಲದೆ ಮುಚ್ಚಿ ಬಿಡುವ ಸಂದರ್ಭ ಬರುತ್ತದೆ. ಅವರಿಗೂ ಸಹಾಯ ಕೊಡದೇ ಹೋದರೆ ಇನ್ನು ಮುಂದೆ ನಡೆಸುವುದು ಸಾಧ್ಯವಿಲ್ಲ. ಈ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದದ್ದೇ ಆದರೆ ರಾಜ್ಯದಲ್ಲಿರುವ ಒಂದೆರಡು ಫ್ಯಾಕ್ಟರಿಗಳನ್ನು ಬಿಟ್ಟು ಉಳಿದುವುಗಳನ್ನು ಮುಚ್ಚಿಬಿಡಬೇಕಾಗುತ್ತದೆ. ಆ ರೀತಿ ಆಗದ ಹಾಗೆ ಮಾಡಲು ಮಸೂದೆಯಲ್ಲಿ ಸೂಕ್ತ ಬದಲಾವಣೆ ಮಾಡಬೇಕು. ಜಾಯಿಂಟ್ ಸೆಲೆಕ್ಟ್ ಕಮಿಟಿ ಇದನ್ನು ಗಮನಿಸಬೇಕಾದುದು ಅಗತ್ಯ. ಅವರು ಮಂಗಳೂರು, ಮುಂಬಯಿ ಕರ್ನಾಟಕ ಈ ಪ್ರದೇಶ ಮದ್ರಾಸ್ ಪ್ರದೇಶಕ್ಕೆ ಹೋಗಿ ನೋಡಿಕೊಂಡು ಬರಬೇಕು. ಕಾರ್ಮಿಕರ ಪ್ರತಿನಿಧಿಗಳನ್ನು ಬರಮಾಡಿಕೊಂಡು ವಿಚಾರಿಸಬೇಕು. ಉತ್ತಮ ರೀತಿಯಿಂದ ನಡೆಸಿಕೊಂಡು ಬರುತ್ತಿರುವ ಮಾಲೀಕರಿಗೂ, ಕಾರ್ಮಿಕರಿಗೂ ಪರಸ್ಪರ ಯಾರಿಗೂ ನುಕ್ಸಾನವಾಗದ ಹಾಗೆ ನೋಡಿಕೊಳ್ಳಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

3 P.M

ಈ ಮಸೂದೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬೇಕಾದುದು ಅಗತ್ಯವಿದೆ. ಯುವಕ ಎಂದರೆ 14 ವರ್ಷ ವಯಸ್ಸು ಪೂರ್ತಿಯಾಗಿರುವ ಆದರೆ 18 ವರ್ಷ ವಯಸ್ಸು ಪೂರ್ತಿಯಾಗದ ಮನುಷ್ಯ ಎಂದು ಅರ್ಥ ಎಂದು ಹೇಳಿದೆ. ಅಂದರೆ 14 ರಿಂದ 18 ವರ್ಷದವರೆಗೆ ಯುವಕ ಅಂದ ಹಾಗೆ ಆಗುತ್ತದೆ. ಅಲ್ಲದೆ 14 ವರ್ಷವರೆಗೆ ಮಕ್ಕಳು ಎಂಬ ಹಾಗೆ ಆಗುತ್ತದೆ. ಇದು ಅಷ್ಟು ಸರಿಯಾಗಿಲ್ಲ. 14 ವರ್ಷ ಮೇಲ್ಪಟ್ಟವರ ಬಗ್ಗೆ ಒಂದೇ ರೀತಿಯಾಗಿ ಅನ್ವಯಿಸಬೇಕು. ಈ ಬಗ್ಗೆ ಸೂಕ್ತ ತಿದ್ದುಪಡಿ ಮಾಡಬೇಕು. ಇನ್ನು ವಠಾರಗಳ ಬಗ್ಗೆ ನಿರ್ದಿಷ್ಟಪಡಿಸುವುದು ಪಟ್ಟಣಗಳಲ್ಲಿ ಮಾತ್ರ ಸಾಧ್ಯ. ಆದರೆ ಹಳ್ಳಿಗಳಲ್ಲಿ ಅದನ್ನು ಅನ್ವಯಿಸುವುದು ಸಾಧ್ಯವಿಲ್ಲ. ಸಣ್ಣ ಸಣ್ಣ ಮನೆಗಳಲ್ಲಿ ಬೀಡಿ ಕಟ್ಟುವ ಕೆಲಸ ನಡೆಯುತ್ತದೆ. ಕಾನೂನಿನಲ್ಲಿ ನಿರ್ದಿಷ್ಟ ಪಡಿಸಿದ ಹಾಗೆ ಎಲ್ಲ ಸೌಕರ್ಯವನ್ನು ಒದಗಿಸುವುದಾಗಲಿ, ದಿನ ಕೂಲಿ ಕೊಡುವುದಾಗಲಿ ಸಾಧ್ಯವಾಗುವುದಿಲ್ಲ. ಒಂದು ದಿನಕ್ಕೆ ಒಂಬತ್ತು ತಾಸು ಕೆಲಸ ಮಾಡಿದರೆ ಒಬ್ಬನು 600 ಬೀಡಿ ಕಟ್ಟುತ್ತಾನೆ. ಆದರೆ ಒಂದು ಸಾವಿರ ಬೀಡಿ ಕಟ್ಟಿದರೆ ಇಷ್ಟು ಕೂಲಿ ಕೊಡಬೇಕೆಂದು ನಿಗದಿ ಮಾಡುತ್ತಾರೆ. ಈ ರೀತಿ ಮಾಡಿದರೆ ಕಾರ್ಮಿಕ ಜನರಿಗೂ

(ಶ್ರೀ ಸಿದ್ದಯ್ಯ ಕಾಶಿಮಠ)

ಉತ್ತಮ ಮಾಲೀಕನಿಗೂ ಲುಕ್ಸಾನವಾಗುವುದಿಲ್ಲ. ಈ ರೀತಿ ಮಾಡಲು ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಬೇಕು.

ಇನ್ನು ಹೆಣ್ಣುಮಕ್ಕಳ ವಿಚಾರದಲ್ಲಿ ನಿಗದಿ ಮಾಡಿರುವುದನ್ನು ನಾನು ಒಪ್ಪುತ್ತೇನೆ. 14 ವರ್ಷ ವಯಸ್ಸು ಮೇಲ್ಪಟ್ಟು ಇರತಕ್ಕ ಹೆಣ್ಣುಮಕ್ಕಳು ರಾತ್ರಿ ಕೆಲಸ ಮಾಡಬಾರದು ಎಂಬುದು ಸರಿಯಾಗಿದೆ. ಆದರೆ ಹೆಣ್ಣುಮಕ್ಕಳು ಕಾರ್ಖಾನೆಗೆ ಕೆಲಸಕ್ಕೆ ಹೋಗುವುದನ್ನು ನಾವು ನೋಡಿಲ್ಲ. ಆದರೆ ಅವರು ಎಲೆ ತಂಬಾಕು ಮುಂತಾದ ಸಾಮಾನು ಮನೆಗೆ ತಂದು ಕೆಲಸ ಮಾಡುವುದನ್ನು ನಾವು ನೋಡುತ್ತೇವೆ. ಕ್ಯಾಂಟೀನ ಸೌಕರ್ಯ ಒದಗಿಸುವುದು, 50 ಜನ ಹೆಣ್ಣುಮಕ್ಕಳು ಕೆಲಸ ಮಾಡುವಕಡೆ ಬಾಲವಾಡಿ ಒದಗಿಸಬೇಕು ಎಂದು ಇದರಲ್ಲಿದೆ. ಆದರೆ ಬಾಕಿ ಎಲ್ಲ ಉದ್ಯಮಕ್ಕಿಂತ ಈ ಉದ್ಯಮ ಬೇರೆ ರೀತಿ ನಡೆಯುವುದರಿಂದ ಇಂಥ ಸೌಕರ್ಯ ಯಾವ ರೀತಿ ಒದಗಿಸಬೇಕೆಂಬುದನ್ನು ವಿಚಾರಮಾಡಿ ನೋಡಬೇಕು. ಕಾನೂನನ್ನು ಸರಿಯಾಗಿ ಉಪಯೋಗಿಸುವ ಹಾಗೆ ಮಾಡಬೇಕು.

ಇನ್ನು 3 ನೆಯ ಅಧ್ಯಾಯದಲ್ಲಿ ಪರಿಶೀಲನಾ ಸಿಬ್ಬಂದಿ ವರ್ಗದಲ್ಲಿ ಇನ್ಸ್ಪೆಕ್ಟರ್ ಬಗ್ಗೆ ಹೇಳಿದ್ದಾರೆ. ಹೊಸದಾಗಿ ಇನ್ಸ್ಪೆಕ್ಟರ ಗಳ ನೇಮಕ ಮಾಡಿ ಅಧಿಕಾರ ಕೊಡಬೇಕೆಂದು ಮಸೂದೆಯಲ್ಲಿ ಹೇಳಿದೆ. ಯಾವ ಸಮಯದಲ್ಲಿ ಹೋದರೂ ಮಾಲೀಕರೂ ಸಂಬಂಧಿಸಿದ ಲೆಕ್ಕಪತ್ರ ಕೊಡಬೇಕೆಂದು ಹೇಳಿದೆ. ಇದು ಸರಿಯಾಗಿಲ್ಲ. ಏಕೆಂದರೆ ಇದುವರೆಗೆ ಸೇಲ್ಸ ಟಾಕ್ಸ ಇನ್ಸ್ಪೆಕ್ಟರುಗಳಿಂದ ಆಗಬಾರದ ತೊಂದರೆಯಾಗುತ್ತಿರುವುದನ್ನು ನಾವು ನೋಡಿದ್ದೇವೆ. ಯಾವಾಗ ಬೇಕಾದಾಗ್ಗೆ ಎಂಬುದನ್ನು ತೆಗೆದು ಹಾಕಿ ನಿರ್ದಿಷ್ಟ ಪಡಿಸಿದ ಕೆಲಸದ ಸಮಯದಲ್ಲಿ ಮಾತ್ರ ಬಂದು ಲೆಕ್ಕ ಪತ್ರ ತಪಾಸ್ ಮಾಡಬೇಕು ಎಂದು ಇದರಲ್ಲಿ ತಿದ್ದುಪಡಿ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಶಿಶುವಿಹಾರ ನಡೆಸುವ ಬಗ್ಗೆ ಸರಕಾರ ಸಹಾಯ ಒದಗಿಸುತ್ತದೆಂದು ಹೇಳಿದರು. ಆದರೆ ಯಾವ ರೀತಿ ಸಹಾಯ ಕೊಡಲಾಗುವುದು ಎಂಬುದನ್ನು ಇದರಲ್ಲಿ ಹೇಳಿಲ್ಲ. ಅಂಥ ಸಹಾಯ ಒದಗಿಸುವುದನ್ನು ತಿಳಿಸಬೇಕು. ಈ ಸಹಾಯ ಒದಗಿಸುವ ಮೂಲಕ ಈ ಮಸೂದೆಯನ್ನು ಬೀಡಿ ಉದ್ಯಮದವರು ಸ್ವಾಗತಿಸುತ್ತಾರೆ. ಒಟ್ಟಿನಲ್ಲಿ ಈ ಮಸೂದೆಯಲ್ಲಿರುವ ಕುಂದು ಕೊರತೆಗಳನ್ನು ತೆಗೆದು ಹಾಕಲು ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ವಿಚಾರ ಮಾಡಿ ಇದನ್ನು ಪಾಸ್ ಮಾಡಬೇಕು ಮತ್ತು ಕಾರ್ಮಿಕರಿಗೆ ಯೋಗ್ಯ ಸಹಾಯ ಮಾಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

Sri B. R. SUNTHANKAR (Belgaum City).—Mr. Speaker Sir, this is a welcome measure. For the first time, this Bill seeks to regulate the conditions of work in the Beedi Manufacturing premises or concerns.

Sir, while we welcome this Bill, I should say that this contains some defects and shortcomings which will have to be removed and if this Bill has to serve its purpose, if the object is to be achieved and if this Bill has to be worked successfully, these defects and shortcomings will have to be removed.

Sir, this Beedi manufacturing industry is a very important industry in the State. This industry is spread over several areas and districts in the State. The extent and proportion of this industry are very considerable. Sir, unfortunately, I could not get statistics. I looked into figures that were suppplied to us in respect of this industry and industrial workers. But nowhere I could find any statistics or figures about this Beedi industry. I got some figures about the Tobacco factory, not about this big industry. So, we cannot definitely say how many beedi manufacturing concerns are there, and how many workers are employed. But Sir, I think several lakhs of workers are employed in this industry. The nature of this industry is a very peculiar one. It is not an industry working in group or collective industry as such. This work is scattered in different places, in different localities and in different villages. It is not a concentrated industry but it is a scattered industry assuming the

form of a cottage industry or home or subsidiary industry. There are a large number of households which take up this industry in their spare time as a subsidiary industry—not as a main industry, where women-folk of these families in their spare time do this beedi manufacturing work. So, the extent and proportion of this industry are not perceptible. It is rather imperceptible. The proportion and extent are very large because it is scattered in large areas.

Sir, this is an industry which can be called a very easy industry. To start this industry, not much initial capital is required. Not much fixed capital is required. But at the same time, working capital is very high and huge and so profits made by the employers, by those proprietors are very huge and with less capital, with minimum capital, they can make maximum profits. Workers are paid very low. Particularly in this State, Sir, beedi workers are paid very low wages. As the Hon'ble Minister was pleased to state, such enactments have been passed in the Madras State and Kerala State. Naturally this beedi industrialists are trying to shift to the borders of Mysore because there was no such legislation in this State and further because the wages paid here are very low. So, very recently this industry is being shifted from Kerala and Madras States to the borders of Mysore. Because the wages paid here to workers are very low, the employers can make a greater margin of profit. On account of the nature of the industry, huge industrial concerns have sprung up from mere scrap. In a period of a few years, tobacco kings have sprung up from almost nothing. If I say from almost nothing, it is correct, because the initial capital required is very little, no fixed capital is required and so within a very short period, from nothing, tobacco kings have sprung up in these tobacco areas. These tobacco kings have a tight grip on this industry. Wherever this industry exists, these tobacco magnates or tobacco kings have a tight grip on the industry and not only on this industry but they hold a tight grip on workers. They hold rural areas in their clutches where this industry is going on. They are at most kings in this industry and there has been absolutely no check on this industry.

Sir, it has been also mentioned in the statement of objects and reasons that owing to the peculiar nature of this industry, the employers and proprietors have been successfully evading all the Factory and Labour laws. They have been doing that. From that point of view, this Bill is very welcome and I should congratulate the Minister on bringing this Bill in this House.

Sir, this industry has been flourishing on the exploitation of the workers—men and women who are engaged in this industry. And the labour unfortunately is not organised. It cannot be organised because it is scattered in various places, houses, homes, cottages, etc. Owing to this peculiar nature of the working of this industry, labour unfortunately cannot organise themselves and they cannot put up any fight successfully and get their rights and facilities. or amenities. So, they are at a disadvantage.

(SRI B. R. SUNTHANKAR)

Another feature of this industry is that this industry almost goes on a contract basis. There is a special class of people who work as contractors and sub-contractors in this industry. The proprietors or employers sit at home, just as the Hon'ble Minister was pleased to explain and they have not much parafernalia. But through contractors they get this industrial work and make huge profits. There is nothing in this Bill to check the activities of these contractors because wages as I said is Rs. 1-80 or Rs. 1-13-0. This wage the contractor gets, not the employees or the actual workers. They get only Rs. 1-9-0. or Rs. 1-10-0. These contractors and agents make huge profits without putting up any labour. They are almost parasites in this industry. There is nothing in this Bill to check the activities of these contractors, these parasites on this industry. Sir, I therefore suggest that provision would have to be made to check the activities of these contractors or to do away with these contractor systems.

Sir, there has been a provision in this Bill about the sanitary conditions, etc., and that is very essential. The places where this industry is being worked are in a very unhygienic and dirty condition. As my friend Sri Aikala put it, it gives room for T. B. and other diseases. Particularly the women workers get emaciated. It is very necessary that healthy atmosphere and healthy conditions will have to be provided. But there is no provision here as regards the tools and other implements to be used by the workers. Then, the worker has to sit there for hours together in a sqatting position. This is very uncomfortable. So, there must be some provision to make certain arrangements, certain specifications in this regard. Similarly Minimum Wages Act. Some minimum standards not made applicable to the workers. At least wage has to be fixed for these workers.

Similarly, Sir, in clause 3 only the employees preparing beedies are mentioned. What about the clerical staff? There will be clerical staff also in these industries and this Bill does not cover them. So, provision should be made to cover them also. As Sri Aikala pointed out, snuff manufacturing industry should also be included in this Bill. That is also an important industry having similar conditions, if not worse conditions than beedi industry. So, that has to be included in this Bill.

Sir, for the successful working of this enactment, more and proper vigilance and supervision is very necessary. Simply passing an Act and leaving it to the hands of some Inspectors would not do any good. On account of the peculiar nature of this industry, strict vigilance is required. For the successful working of this Act, separate and special staff will have to be employed. I do not know why a Financial Memorandum is not attached to this Bill. The Hon'ble Minister was pleased to say that no new staff would be employed for the implementation of this Act. But, a Financial Memorandum should have been attached giving details of the expenditure for the staff and the income from the fee of licenses and all that.

[MR. SPEAKER in the Chair.]

About the powers of the Inspector, it says, 'The Inspector may for the purpose of enforcement of this Act...' 'May' may mean 'may not' also. These functions must be made obligatory on the Inspector. Sir, we have enough experience of these Inspectors. It would not be out of place if I were to mention something about the Inspectors in the Electricity Board. We have very bitter experience of them. For the last several years the electricity consumers of Belgaum have put forth their several grievances before the Government but the Inspector never cares to redress them. The consumers of electricity of Belgaum had to pass a resolution in a public meeting that the Electrical Inspector should be removed. Therefore, I say that we must make it obligatory on these Inspectors to supervise and inspect these beedi industries. It should not be left to their sweet will.

Then, Sir, proviso to clause 1 is unnecessary. Suppose the number of workers is less than 50 and there are some women workers also there. Should not separate urinals be provided there? So, this clause should be deleted and sub-section (2) is there and it covers everything.

Clause 17 refers to hours of working. It says more than 9 hours in any day. Why should it be nine hours? It should be only eight hours. The workers should not be made to work for more than eight hours.

In sub-clause (3) of Clause 18 there is a mention about basic wages. But what a basic wage is, who should fix it and how it is going to be fixed are all matters not defined in the Bill. This must be made clear and specific.

3-30 P.M.

Sri D. DEVARAJ URS.—It has been fixed in the notification under the Minimum Wages Act.

Sri B. R. SUNTHANKAR.—That Act is not applicable here.

Coming to clause 26, there is no mention about sick leave and festival holidays. The workers must be paid wages during sick leave and festival holidays also.

I agree with sub-clause (3) of clause 29 but I am afraid the families which are engaged in this industry on a part-time basis or as a subsidary industry are not covered.

Sri G. V. GOWDA.—They are not employees of anybody. This Bill will not apply to them.

Sri B. R. SUNTHANKAR.—That may create some trouble to those who are carrying on the business as a subsidiary work. It should be the duty of the employer to provide for some space or yard or shed for such families who work in their leisure time. According to this Bill such people may be prevented from carrying on their work in their homes and therefore some arrangement must be made for them to take to work during spare hours.

(SRI B. R. SUNTHANKAR)

The power of exemption given to Government under clause 40 should be deleted. Such exemptions would defeat the very purpose of this legislation. There should be no exemption if the Government is really keen or serious in bringing this Bill into effect.

Looking to the peculiar nature of this industry I would venture to suggest to Government that they should take all steps to bring it under the co-operative sector. That will do immense good to the employees, particularly women employees.

I hope the Bill would emerge in a better form from the Select Committee

†Sri D. PARAMESHWARAPPA (Honnali).—Sir, many of my friends have already spoken on this Bill and pointed out many defects. My friend Sri Sunthankar has made the very valuable suggestion that this industry may best be under the co-operative sector and I hope the Government will take steps in that direction. I recollect that last year one of the Members of the Legislature, who happens to be the President of the Beedi Workers, Association of Mysore, submitted a memorandum setting forth the many grievances of the workers in this industry. I congratulate the Government on having brought this Bill so early. In my opinion this Bill appears to be superfluous and unwarranted by reason of the fact that the Factories Act and the Industrial Disputes Act could as well serve the interests of this industry. The Minister who is piloting this Bill argued that it was the intention behind this Bill to ameliorate the conditions of the workers and improve their living conditions. I congratulate the Labour Minister for his sympathy but all the same I would like to ask him whether the other two enactments of which I spoke just now would not serve the purpose. If it be his feelings that the employers are circumventing the provisions of the Factories Act, he may bring in appropriate amendments to that Act. The Minister said that there was no additional financial involvement in the course of the implementation of this Bill but I am afraid, it may not turn out to be true. There is likely to be some expenditure. My apprehension is, now at this stage it may appear a thin end of the edge, but certainly it is bound to assume some extra additional expenditure on the State Exchequer. With these observations, I submit that the Minister in charge of the Bill will be doing a very good thing if he drops this Bill totally in view of the Factory Act that is now in existence.

As has been suggested by the Hon'ble Minister, this Bill is going to be referred to a Joint Select Committee to go through the details of working and to examine this thoroughly. That is a suggestion which was made by the Minister. In that case, I think the members of the Select Committee will duly consider the valuable suggestions that were made out by my learned friend, Sri B. R. Sunthankar. I need not repeat the same argument so far as this Bill is concerned.

I oppose this Bill and request the Minister in charge to withdraw it in view of the existence of the Factory Act and the Industrial Disputes

Act, because these workers also can be governed by labour laws under the same Act.

Mr. SPEAKER.—One thing I could not follow. If it is superfluous, it won't do any harm.

Sri D. PARAMESHWARAPPA.—I said that it was not only superfluous but unwarranted, and so it should be withdrawn.

With these observations, I thank you, Sir.

† ಶ್ರೀ ಗಂಗಾಧರ ನಮೋಷಿ (ಗುಲ್ಬರ್ಗ).—ಅಧ್ಯಕ್ಷರೆ, ಮಾನ್ಯ ಕಾರ್ಮಿಕ ಮಂತ್ರಿಗಳು ಈ ಮಸೂದೆಯನ್ನು ಮಂಡಿಸುತ್ತಾ ಒಳ್ಳೆಯ ರೀತಿಯಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಒಳ್ಳೆಯ ಹ್ಯೂಮನ್ ಅಪ್ರೋಚ್ ಇಟ್ಟುಕೊಂಡು, ಮಸೂದೆಗೆ ಅನುಮತಿ ಪಡೆಯಲು ನಮ್ಮ ಮುಂದಿಟ್ಟಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಇದನ್ನು ತರುವುದು ಸ್ವಲ್ಪ ತಡವಾಗಿದೆಯೆಂದು ನನಗನಿಸುತ್ತದೆ. ಎಲ್ಲಾ ಬಿಲ್ಲುಗಳೂ ಸೆಲೆಕ್ಟ್ ಕಮಿಟಿಗೆ ಹೋಗಿ ಎರಡೆರಡು ವರ್ಷಗಳು ಹಿಂದಕ್ಕೆ ಸಭೆಗೆ ಬಂದಿರುವ ಅನುಭವ ನಮಗಿದೆ. ಆ ರೀತಿ ಈ ಮಸೂದೆಗೆ ಆಗಕೂಡದು. ಇದು ಬೇಗ ಸೆಲೆಕ್ಟ್ ಕಮಿಟಿಗೆ ಹೋಗಿ, ಹಿಂದಕ್ಕೆ ಬಂದು, ಬಹಳ ತೀವ್ರವಾಗಿ ಅಮಲಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇಷ್ಟರಲ್ಲಿ ಮಾನ್ಯ ಮಂತ್ರಿಗಳು ಇದನ್ನು ಸೆಂಟ್ರಲ್ ಆಕ್ಟ್ ಆಗಿ ಬರುವ ಹಾಗೆ ಸಮಯ ಬಂದಾಗ ಬಲವಂತ ಮಾಡಬೇಕು. ಇದು ಸೆಂಟ್ರಲ್ ಆಕ್ಟ್ ಆಗಿ ಬಂದರೆ ಒಳ್ಳೆಯ ರೀತಿಯಲ್ಲಿ ಬಹಳ ಫಲಕಾರಿಯಾಗಿ ಜಾರಿಗೆ ಬರುತ್ತದೆ. ಇಲ್ಲದೆ ಹೋದರೆ ಕೇರಳದವರು, ಮದ್ರಾಸ್ ಸರ್ಕಾರ ಜಾರಿಗೆ ಕೊಟ್ಟಿಲ್ಲವೆಂದು ಸ್ವಸ್ಥವಾಗಿರುತ್ತಾರೆ. ಮದ್ರಾಸಿನವರು ಮೈಸೂರಿನವರು ಜಾರಿ ಮಾಡಲಿ ಎಂದು ಕಾಯಬಹುದು. ಮೈಸೂರಿನವರು ಒರಿಸ್ಸಾ ಸರ್ಕಾರ ಮೊದಲು ಇದನ್ನು ಮಾಡಲಿ ಎಂದು ಸುಮ್ಮನಿರಬಹುದು, ಹೀಗೆ ಒಂದು ರಾಜ್ಯದವರು ಇನ್ನೊಂದು ರಾಜ್ಯ ಆಕ್ಟನ್ನು ಮಾಡಲಿ ಎಂದು ನಿರೀಕ್ಷೆಮಾಡಿಕೊಂಡು ಮುಂದಕ್ಕೆ ಹಾಕುತ್ತಾ ಹೋಗುತ್ತಾರೆ, ಈ ಮಸೂದೆಯನ್ನು ಕೇಂದ್ರದವರೆ ಮಾಡದಿದ್ದರೆ, ಇಂಪ್ಲಿಮೆಂಟ್ ಮಾಡುವುದನ್ನು ರಾಜ್ಯ ಸರಕಾರಗಳು ಪೆಂಡಿಂಗ್ ನಲ್ಲಿಯೇ ಇಡುತ್ತವೆ. ಆದ್ದರಿಂದ ಎಲ್ಲಾ ಲೇಬರ್ ಮಿನಿಸ್ಟರುಗಳ ಕಾನ್‌ಫೆರೆನ್ಸಿನಲ್ಲಾಗಲಿ ಅಥವಾ ಬೇರೆ ಯಾವುದಾದರೂ ಸಂದರ್ಭದಲ್ಲಾಗಲಿ, ಮಾನ್ಯ ಮಂತ್ರಿಗಳು ಇದನ್ನು ಸೆಂಟ್ರಲ್ ಆಕ್ಟ್ ಆಗಿ ಒಪ್ಪುವಂತೆ ಕೇಂದ್ರದ ಮೇಲೆ ಒತ್ತಾಯ ಹಾಕಬೇಕೆಂದು ಸೂಚಿಸುತ್ತೇನೆ.

ಮಾನ್ಯ ಮಂತ್ರಿಗಳು ಹೇಳಿದರು, ಮಿನಿಮಮ್ ವೇಜ್ ಆಕ್ಟ್ ಇಂಪ್ಲಿಮೆಂಟ್ ಮಾಡಿದ ಮೇಲೆ, ಸ್ವಲ್ಪ ಸವಲತ್ತುಗಳು ಕಾರ್ಮಿಕರಿಗೆ ಆಗಿವೆಯೆಂದು. ಮಾನ್ಯ ಮಂತ್ರಿಗಳು ಇಷ್ಟು ಕಡೆ ನೋಡಿಕೊಂಡು ಬಂದಿದ್ದಾರೆ. ನಮ್ಮಲ್ಲಿ ಆ ಕಾನೂನು ಜಾರಿಗೆ ಬಂದಿಲ್ಲ ಅನ್ನುವುದು ಗೊತ್ತಿಲ್ಲವೇನೋ. ಆಕ್ಟಿನಲ್ಲಿ ಮಿನಿಮಮ್ ವೇಜ್ ಎಷ್ಟಿರಬೇಕೆಂದು ಚೆನ್ನಾಗಿ ನಿರ್ಧಾರಮಾಡಿದ್ದಾರೆ. ಆದರೆ ಸಂಬಂಧಪಟ್ಟ ಇನ್‌ಸ್ಪೆಕ್ಟರುಗಳು ಕಾನೂನು ಇಂಪ್ಲಿಮೆಂಟ್ ಮಾಡದಿದ್ದವರ ಮೇಲೆ ಕೇಸು ಹಾಕಿ ಪ್ರಾಸಿಕ್ಯೂಟ್ ಮಾಡಿದರೆ, ಮಾಲೀಕರಿಗೆ 50 ರೂಪಾಯಿ ಜುಲ್ಮಾನೆ ಹಾಕಿದ್ದಾರೆ. ಈ ಜುಲ್ಮಾನೆ ಹಣ ತೀರ ಕಡಮೆ; ಆದ್ದರಿಂದ ಜುಲ್ಮಾನೆಗೆ ಯಾರು ಹೆದರುವುದಿಲ್ಲ ಮತ್ತು ಮಿನಿಮಮ್ ವೇಜಸ್ ಆಕ್ಟನ್ನು ಜಾರಿ ಮಾಡಲಿಕ್ಕೆ ತಯಾರಿಲ್ಲ ಅದೂ ಅಲ್ಲದೆ ಈ ಕಾನೂನಿನ ಪ್ರಕಾರ ಪ್ರಾಸಿಕ್ಯೂಟ್ ಮಾಡಲಿಕ್ಕೂ ಇನ್‌ಸ್ಪೆಕ್ಟರುಗಳು ತಯಾರಿಲ್ಲ. ಆ ಇಲಾಖೆಯ ರೆಕಾರ್ಡುಗಳನ್ನು ತೆಗೆದುನೋಡಿ, ಎಷ್ಟು ಕೇಸುಗಳನ್ನು ಹಾಕಿದ್ದಾರೆನ್ನುವುದಕ್ಕೆ ಮಾನ್ಯ ಮಂತ್ರಿಗಳಿಗೆ ವೇಳೆ ಇದ್ದು, ಆ ಇನ್‌ಫರ್ಮೇಷನ್ ಪಡೆದರೆ, ಅದನ್ನು ಈ ಮಾನ್ಯ ಸಭೆಯ ಮುಂದಿಡಬೇಕು. ಇವತ್ತಿನವರೆಗೆ ಮಿನಿಮಮ್ ವೇಜಸ್ ಆಕ್ಟ್ ಪ್ರಕಾರ ಎಷ್ಟು ಕೇಸುಗಳನ್ನು ಹಾಕಿದ್ದಾರೋ ಅವು ಅಷ್ಟು ಯಶಸ್ವಿಯಾಗಿಲ್ಲ; ಏಕೆಂದರೆ ಬಹಳ ಕಡಿಮೆ ಜುಲ್ಮಾನೆ ಹಾಕಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ 10-15 ಸಾವಿರ ಬೀಡಿ ಕಾರ್ಮಿಕರಿದ್ದಾರೆಂದು ಹೇಳಿದರು; ಅವರ ಲೆಕ್ಕದ ಪ್ರಕಾರ ಇಡೀ ರಾಜ್ಯದಲ್ಲಿ ಅವರ ಸಂಖ್ಯೆ 80 ಸಾವಿರ, ಆದರೆ ಅದು $1\frac{1}{2}$ ಲಕ್ಷಕ್ಕೂ ಮೇಲಕ್ಕೆ ಹೋಗಬಹುದು. ಹಳ್ಳಿ ಹಳ್ಳಿಯಲ್ಲಿ 25-30 ಜನ ಕೆಲಸ ಮಾಡತಕ್ಕ ಫ್ಯಾಕ್ಟರಿಗಳಿವೆ; ಅವರು ಷಹರುಗಳಲ್ಲಿರುವುದನ್ನು ಮಾತ್ರ ಲೆಕ್ಕ ಹಾಕಿದ್ದಾರೆ. ಯಾದ್ಗಿರ್ ಟೌನಿನಲ್ಲಿಯೇ ಆರು ಸಾವಿರ ಜನ ಕೆಲಸ ಮಾಡುತ್ತಾರೆ. ಆದರೆ ಸರಕಾರಿ ಇನ್‌ಸ್ಪೆಕ್ಟರು ಅಲ್ಲಿ ಒಂದು ಕೇಸೂ ಹಾಕಿಲ್ಲ. ಇತರ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ, ಆ ನಿಯಮವನ್ನು ಜಾರಿಗೆ ಕೊಡತಕ್ಕ ಮೆಷಿನರಿ, ಎಂದರೆ ಸ್ಟಾಫ್ ಏನಿದೆ, ಅದನ್ನು ಹೆಚ್ಚು ಮಾಡುವ ಅವಶ್ಯಕತೆಯಿದೆ ಎಂದು ನಾನು ಒತ್ತಾಯಮಾಡಿ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ.

ಅನಂತರ ಇಂಡಸ್ಟ್ರಿಯಲ್ ಪ್ರಿಮಿಸಸ್ ಎಂದು ಡಿಕ್ಲೇರ್ ಮಾಡುವ ಅಧಿಕಾರವನ್ನು ಈ ಕಾನೂನಿನ ಪ್ರಕಾರ ಹೊಂದಿದ್ದಾರೆ. ಆದರೆ ಕೆಲವು ಜನರನ್ನು ಇಟ್ಟುಕೊಂಡು ಬೀಡಿ ತಯಾರಿಸುತ್ತಿರುವ

(ಶ್ರೀ ಗಂಗಾಧರ ನಾವೋಷಿ)

ಫ್ಯಾಕ್ಟರಿಗಳನ್ನು ಈ ಅರ್ಥ ವಿವರಣೆಯಿಂದ ಬಿಟ್ಟು ಬಿಡುತ್ತಾರೆ. ಇವುಗಳಿಗೆ Shops and Establishment Act ಲಾಗು ಆಗುವುದಿಲ್ಲ. ಇದರಲ್ಲಿ ಬೀಡಿಗೆ ಲೇಬಲ್ ಹಾಕತಕ್ಕಂಥ ಜನ, ಕ್ಲೆರಿಕಲ್ ಸ್ಟಾಫ್, ಮುಂತಾದವರ್ಯಾರೂ ಬರುವುದಿಲ್ಲ. ಅವರನ್ನೂ ಇವರಲ್ಲಿ ಸೇರಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಸೆಲೆಕ್ಟ್ ಕಮಿಟಿಯಲ್ಲಿ ಕ್ಲಾಸು 9 (1) ನ್ನು ಮತ್ತೊಮ್ಮೆ ಪರಿಶೀಲಿಸಿ ಅದನ್ನು ಬಲಾತ್ಕಾರವಾಗಿ ಜಾರಿಗೆ ಕೊಡುವಂತೆ ಮಾಡಬೇಕು.

ಇನ್ನು ಸದಸ್ಯರೆಲ್ಲರೂ ಮಾತನಾಡುತ್ತಾ ಎಲ್ಲ ಸಮಯದಲ್ಲಿಯೂ ಎಲ್ಲ ಫ್ಯಾಕ್ಟರಿಗಳಿಗೂ ಫ್ಯಾಕ್ಟರಿ ಆಕ್ಟು ಲಾಗು ಆಗುತ್ತದೆಂದು ಹೇಳಿದ್ದಾರೆ. ಆದರೆ ಈ ಕಾನೂನಿನಲ್ಲಿ 9 ಗಂಟೆಗಳ ಕಾಲಕ್ಕಿಂತ ಹೆಚ್ಚಾಗಿ ಕೆಲಸ ಮಾಡಿಸಬಾರದೆಂದು ಹೇಳಿದೆ, ಈ ನಿಯಮ ಸರಿಯಾದುದಲ್ಲ. ಈ ಕೆಲಸದ ಕಾಲವನ್ನು 8 ಗಂಟೆಗಳು ಎಂದು ನಿಗದಿ ಮಾಡಬೇಕೆಂದು ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು 8ನೆಯ ಅಧ್ಯಾಯದಲ್ಲಿ ಕೂಲಿ ಸಹಿತ ಅದೇ ವಿಷಯವನ್ನು ಹೇಳಿದೆ. ಇದರಲ್ಲಿ ಫೆಸ್ಟಿವಲ್ ಹಾಲಿಡೆಗಳನ್ನೆಲ್ಲಾ ಸೇರಿಸಿಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ಫೆಸ್ಟಿವಲ್ ಹಾಲಿಡೆಗಳಿಗೆ ಬೇರೆ ಕಾನೂನು ಮಾಡಿದರೆ. Industrial premises ಎಂದು ಡಿಕ್ಲೇರ್ ಮಾಡಿದ ಕೂಡಲೆ, ಆ ಕಾನೂನ ಅಲ್ಲೆಲ್ಲಾ ಅಪ್ಲೈ ಆಗುತ್ತದೆ.

ಶ್ರೀ ಗಂಗಾದರ ನಾವೋಷಿ.—ಸೆಕ್ಷನ್ 31—Notice of dismissal ಬಗ್ಗೆ ಹೇಳುವ ಕ್ಲಾಸು ಸರಿಯಾಗಿ ಡ್ರಾಫ್ಟ್ ಆಗಿ ಬಂದಿಲ್ಲ. ಇದು ನೌಕರರ ಹಿತಕ್ಕೆ ಅತೃಪ್ತಿಕರವಾಗಿ ಬಂದಿವೆ. ದಯಮಾಡಿ ಈ ಕ್ಲಾಜನ್ನು ಕೂಲಿಗಾರ ಹಿತರಕ್ಷಣೆಗೆ ಏನೂ ಧಕ್ಕೆ ಬರದಂತೆ ಸರಿಯಾಗಿ ತಿದ್ದುಪಾಡುಮಾಡಿಕೊಳ್ಳಬೇಕು. ಹೆಣ್ಣು ಮಕ್ಕಳು ಕೆಲಸ ಮಾಡುತ್ತಿದ್ದರೆ ಅವರ ಮೆಟರ್ನಿಟಿ ರಜೆ ವಿಷಯ ಇದರಲ್ಲಿಲ್ಲ, ಅದನ್ನು ಇದರಲ್ಲಿ ಸೇರಿಸಬೇಕು. ಕ್ಲಾಜ್ 40ರಲ್ಲಿ ಸರ್ಕಾರದವರು ವಿನಾಯಿತಿ ಕೊಡುವ ಅಧಿಕಾರವನ್ನು ಪಡೆಯುತ್ತಾರೆ. ಇದನ್ನು ಬಿಟ್ಟು ಬಿಡಬೇಕು. ಮಾನ್ಯ ಮಂತ್ರಿಗಳಂಥ ಅಭಿಮಾನಿಗಳು ಬಂದು ಸ್ವಲ್ಪ ಸಹಾನುಭೂತಿ ತೋರುವವರಿದ್ದರೆ ಒಳ್ಳೆಯದಾಗುತ್ತದೆ. ಆದರೂ ಕೆಳಗಿನ ಆಡಳಿತ ಯಂತ್ರದವರಿಂದ ಇದರ ದುರುಪಯೋಗವಾಗುವ ಸಂಭವವಿರುವುದರಿಂದ ಇಂಥದನ್ನು ದಯವಿಟ್ಟು ಹಾಕಬಾರದು.

ಕೆಲವು ಮಾನ್ಯ ಸದಸ್ಯರು ಈ ವಿಧೇಯಕದ ಬಗ್ಗೆ ಆಕ್ಷೇಪಣೆಯನ್ನು ತೆಗೆದುಕೊಂಡರು. ಶ್ರೀ ಧರ್ಮಸಾಮ್ರಾಜ್ಯ, ಶ್ರೀ ಕಾಶೀಮಠ ಮತ್ತು ಇತರ ಕೆಲವು ಸದಸ್ಯರು ಹೆಣ್ಣು ಮಕ್ಕಳು, ಘೋಷದಲ್ಲಿರುವ ಹೆಣ್ಣು ಮಕ್ಕಳ ಬೀಡಿ ಕಟ್ಟುವ ಸ್ಥಳಗಳಿಗೆ ಬರುವುದಿಲ್ಲ, ಅವರಿಗೆ ತೊಂದರೆ ಯಾಗುತ್ತದೆ ಎಂದು ಹೇಳಿದರು. ನಮ್ಮಲ್ಲಿ ಮುಸಲ್ಮಾನರ ಜನಸಂಖ್ಯೆ ಇದೆ. ಅದರಲ್ಲಿ ಬಹು ಜನ ಬೀಡಿ ಕೆಲಸಗಾರರಿದ್ದಾರೆ. ಇವರಿಗೆಲ್ಲ ಈ ವಿಧೇಯಕದಿಂದ ಏನೂ ತೊಂದರೆಯಾಗಲಾರದು. ಅವರು ಇದರ ಮೇಲೆಯೇ ಅವಲಂಬಿಸಿರುವವರಿದ್ದಾರೆ. ಕೆಲವರು ಹೆಣ್ಣು ಮಕ್ಕಳು ತಮ್ಮ ಗಂಡಂದಿರು ಬೇರೆ ಉದ್ಯೋಗಗಳಲ್ಲಿದ್ದರೂ ತಮ್ಮ ಬಿಡುವಿನ ವೇಳೆಯಲ್ಲಿ ಮನೆಗಳಲ್ಲಿ ಬೀಡಿ ಕಟ್ಟಿ ಅದರಿಂದ ಬರುವ ಹಣದಿಂದ ತಮಗೆ ಬೇಕಾದ ಒಳ್ಳೆಯ ಬಟ್ಟೆ ಬರೆಗಳನ್ನು ತೆಗೆದುಕೊಳ್ಳಲು ಉಪಯೋಗಿಸಿಕೊಳ್ಳುತ್ತಾರೆ. ಇಂಥವರ ಸಲುವಾಗಿ ರಿಯಾಯಿತಿಯನ್ನು ಕೊಡಬಾರದೆಂದು ಹೇಳುತ್ತೇನೆ. ದೇಶದಲ್ಲಿ ಒಂದು ಹೊತ್ತು ತಿನ್ನುವುದಕ್ಕೂ ಇಲ್ಲದೆ ಉಪವಾಸ ಸಾಯತಕ್ಕ ಎಷ್ಟೋ ಜನರಿದ್ದಾರೆ. ಇಂಥವರ ಸಲುವಾಗಿ ಈ ಕಾಯದೆಗಳನ್ನು ತರತಕ್ಕದ್ದು. ಮಾನ್ಯ ಸದಸ್ಯರು ಕೆಲವರು ಹೇಳಿದ ಅಭಿಪ್ರಾಯಗಳಿಗೆ ಮಾನ್ಯ ಮಂತ್ರಿಗಳು ಮತ್ತು ಸೆಲೆಕ್ಟ್ ಕಮಿಟಿಯವರು ಲಕ್ಷ್ಯ ಕೊಡಬಾರದು. ನಮಗೂ ಅನುಭವವಿದೆ. ಕೆಲವು ಕಡೆ ಮಾಲೀಕರ ಹಿತವನ್ನು ರಕ್ಷಣೆ ಮಾಡುವುದಕ್ಕೆ, ಇವರ ನೆಪ ತೆಗೆದುಕೊಂಡು ಅವರಿಗೆ ತ್ರಾಸವಾಗುತ್ತದೆಂದು ಹೇಳುತ್ತಾರೆಂದು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಬೀಡಿ ಕಾರ್ಖಾನೆಗಳಲ್ಲಿ ಹೆಣ್ಣು ಮಕ್ಕಳಿಗೆ, ಪ್ರತ್ಯೇಕವಾಗಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡಿ ಅಲ್ಲಿಗೆ ಗಂಡಸರು ಹೋಗತಕ್ಕದ್ದಲ್ಲವೆಂದು ಮಾಡಿದರೆ ಸರಿ ಹೋಗುತ್ತದೆಂದು ನನಗನ್ನಿಸುತ್ತದೆ.

ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದನ್ನು ಆದಷ್ಟು ಬೇಗನೆ ತರಬೇಕು, ಈಗ exploitation ಹೆಚ್ಚಾಗಿದೆ. ಅದರ ಸಲುವಾಗಿ ಮಾನ್ಯ ಮಂತ್ರಿಗಳು ನಿಧಾನ ಮಾಡದೆ ಇದನ್ನು ಜಾರಿಯಲ್ಲಿ ತರಬೇಕು. ನಮ್ಮ ಸರ್ಕಾರದ ಭಾವನೆ ಸೆಲೆಕ್ಟ್ ಕಮಿಟಿಯಲ್ಲಿ ಸ್ವಲ್ಪ ವಿರೋಧ ಮಾಡು

ವವರೂ ಇರಲಿ, ಒಳ್ಳೆಯದು ಮಾಡುವವರೂ ಇರಲಿ ಎಂದು ಇವರಿಬ್ಬರನ್ನೂ ಸೇರಿಸುವರೆಂದು ಕಾಣುತ್ತದೆ. ಇಂಥದ್ದು ಮಾಡಬಾರದು.

ಕನಿಷ್ಠ ದರ್ಜೆ ಜನರಿಗೆ ಕೊಡುವ ಕೂಲಿ ಒಂದು ರೂಪಾಯಿ ಹದಿಮೂರಾಣೆ ಇದ್ದರೆ ಬೀಡಿ ಕೆಲಸಗಾರರಿಗೆ 14 ಆಣೆ ಕೊಟ್ಟು ದುಡಿಸಿಕೊಳ್ಳುತ್ತಿದ್ದಾರೆ. ಇದನ್ನೆಲ್ಲ ಸರಿಪಡಿಸಬೇಕು. ಬೀಡಿ ಕೆಲಸ ಮಾಡುವವರಿಗೆ ಕ್ಷಯ ರೋಗ ಬಹಳ ಬೇಗ ಬರುತ್ತದೆ. ಕ್ಷಯ ರೋಗ ಬಂದವರಿಗೆ ಏನಾದರೂ ಪರಿಹಾರ ಕೊಡುವುದನ್ನು ವಿಚಾರ ಮಾಡಬೇಕು. ಸೆಲೆಕ್ಟ್ ಕಮಿಟಿಯವರು ಇದಕ್ಕೆ ಲಕ್ಷ್ಯ ಕೊಡಬೇಕು. ಬೀಡಿ ಕೆಲಸ ಮಾಡುವವನಿಗೆ ಒಬ್ಬನಿಗೆ ಕ್ಷಯ ರೋಗ ಬಂತು. ಎಲ್ಲ ಕಡೆಯೂ ಸುತ್ತಿದ. ಅವನಿಗೆ ಎಲ್ಲೂ ಔಷಧಿ ಸಿಕ್ಕಲಿಲ್ಲ. ಕಡೆಗೆ ಯಾರೋ ದೇಶಭಕ್ತರು ಹೇಳಿದರಂತೆ ನೀನು ಷರಾಬು ಕುಡಿ, ಕೇಸಾಗುತ್ತದೆ ಜೈಲಿಗೆ ಹಾಕುತ್ತಾರೆ, ಅಲ್ಲಿ ಈ ರೋಗ ಗುಣವಾಗುತ್ತದೆ ಎಂದು. ಅವನು ಅದೇ ರೀತಿ ಮಾಡಿದ್ದಕ್ಕೆ ಅವನಿಗೆ ಜೈಲಿನಲ್ಲಿ ಒಳ್ಳೆಯ ಚಿಕಿತ್ಸೆ ನಡೆದು ಈಗ ಸ್ವಲ್ಪ ಮಟ್ಟಿಗೆ ಉತ್ತಮವಾಗಿದ್ದಾನೆ. ಪೂರ್ತಿ ಉತ್ತಮವಾಗಬೇಕಾದರೆ ಇನ್ನೂ ಒಮ್ಮೆ ಜೈಲಿಗೆ ಹೋಗಿ ಬರಬೇಕು ಎಂದು ಹೇಳುತ್ತಾನೆ. ಇಂಥ ಜನರ ಸಲುವಾಗಿ ಈ ವಿಧೇಯಕವನ್ನು ಒಳ್ಳೆಯ ರೀತಿಯಿಂದ ಆಲೋಚನೆ ಮಾಡಿ ಬೇಗನೆ ತರಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಮೈಸೂರು ರಾಜ್ಯದ ಬೀಡಿ ಕೈಗಾರಿಕೆ ಉದ್ಯಮದ ವಹಾರಗಳಿಗೆ ಸಂಬಂಧಪಟ್ಟ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಈ ಮಸೂದೆ ಹತ್ತಾರು ವರ್ಷಗಳ ಬೀಡಿಕಾರ್ಮಿಕರ ಒತ್ತಾಯದ ಪರಿಣಾಮವಾಗಿ ಈ ದಿನ ನಮ್ಮ ಮುಂದೆ ಬಂದಿದೆ ಎಂದು ಹೇಳಬಯಸುತ್ತೇನೆ. ಏಕೆಂದರೆ ಬಹಳ ಹೀನಸ್ಥಿತಿಯಲ್ಲಿರುವ ಇಡೀ ಕಾರ್ಮಿಕವರ್ಗದಲ್ಲಿ ಬಹಳ ಕೆಳಮಟ್ಟದ ಅತಿ ಹೆಚ್ಚಿನ ಶೋಷಣೆಗೆ ಸಿಕ್ಕಿ ಬಹಳ ಕಷ್ಟ ಸ್ಥಿತಿಯಲ್ಲಿರುವ ಈ ಬೀಡಿ ಕಾರ್ಮಿಕರ ಸತತ ಹೋರಾಟದ ಫಲವಾಗಿ ಈ ಶಾಸನ ಬಂದಿದೆಯೇ ವಿನಾ ಇದು ಸರ್ಕಾರದ ಔದಾರ್ಯದಿಂದ ಬಂದಿದ್ದೆಂದು ನಾನಾದರೂ ಒಪ್ಪಿಕೊಳ್ಳುವುದಿಲ್ಲ. ನಮ್ಮ ಮೈಸೂರು ರಾಜ್ಯದ ಸರ್ಕಾರ ಮೊಂಡೆತ್ತು ಇದ್ದ ಹಾಗೆ. ಸರಿಯಾದ ಎತ್ತು ಒಂದು ಸಾರಿ ಚುಚ್ಚಿದರೆ ಮುಂದಕ್ಕೆ ಹೋಗುತ್ತದೆ. ಈ ಮೊಂಡೆತ್ತು ಹತ್ತು ಸಾರಿ ಚುಚ್ಚಿದರೂ ಮುಂದಕ್ಕೆ ಹೋಗುವುದಿಲ್ಲ. ನಮ್ಮ ದೇಶದಲ್ಲಿನ ಎಲ್ಲ ಕಾರ್ಮಿಕರ ಮತ್ತು ವ್ಯವಸಾಯ ಕೂಲಿಕಾರರಿಗಿಂತ ಹೀನ ಸ್ಥಿತಿಯಲ್ಲಿ ಈ ಕಾರ್ಮಿಕರಿದ್ದಾರೆ. ಇವರಿಗೆ ಶುದ್ಧವಾದ ಗಾಳಿ, ನೀರು, ದೊರೆತು ಸರಿಯಾದ ಅವರಣಗಳಲ್ಲಿ ಕೆಲಸಮಾಡತಕ್ಕ ಅವಕಾಶವನ್ನು ಕಲ್ಪಿಸುವುದಕ್ಕೆ ನಮಗೆ ಸ್ವಾತಂತ್ರ್ಯ ಬಂದು 15 ವರ್ಷಗಳಾದಮೇಲೆ ಇಂಥ ಕಾನೂನು ಬರುತ್ತಿದೆ. ಸರ್ಕಾರ ಇನ್ನೂ ಮುಂಚೆಯೇ ಈ ದಾರಿಯಲ್ಲಿ ಏಕೆ ಹೋಗಲಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ಕಳೆದ ಸಾರಿ ಮೈಸೂರಿನ ಕೆಲವು ಸಂಘದವರು ಸರ್ಕಾರಕ್ಕೆ ಮನವಿಯನ್ನರ್ಪಿಸಿದ್ದರಿಂದ ಈ ಕಾನೂನು ಬಂತು ಎಂದು ಹೇಳಿದರು. ಅಷ್ಟೇ ಅಲ್ಲ ಕೋಲಾರದವರು, ಬೆಂಗಳೂರಿನವರು, ಮತ್ತು ಬೇರೆ ಬೇರೆ ಭಾಗದ ಕಾರ್ಮಿಕ ಸಂಘಗಳವರು ಹತ್ತಾರು ವರ್ಷಗಳಿಂದಲೂ ಕೂಡ ಬೀಡಿ ಕಾರ್ಮಿಕರ ಉದ್ಯೋಗದ ರಕ್ಷಣೆ, ಅವರು ಕೆಲಸ ಮಾಡುವ ಫ್ಯಾಕ್ಟರಿಗಳಲ್ಲಿ ಸರಿಯಾದ ಗಾಳಿ, ಬೆಳಕು ಇರಬೇಕು, ಸರಿಯಾದ ಕಟ್ಟಡಗಳಲ್ಲಿ ಕೈಗಾರಿಕೆ ನಡೆಯಬೇಕು ಎಂದು ಕೇಳಿಕೊಳ್ಳುತ್ತಿದ್ದರು. ಈಗಲಾದರೂ ನಮ್ಮ ರಾಜ್ಯ ಸರ್ಕಾರಕ್ಕೆ ಮನಸ್ಸು ಬಂತಲ್ಲ ಇಂಥ ಒಂದು ಶಾಸನವನ್ನೂ ಮಾಡಲಿಕ್ಕೆ! ಇದು ನಿಜವಾಗಿಯೂ ಶ್ಲಾಘನೀಯವಾದ ವಿಷಯ. ಈ ದಿನ ಬೀಡಿ ಕೂಲಿಕಾರರು, ನಮ್ಮ ದೇಶದಲ್ಲಿ ಹರಿಜನರು, ಅಸ್ಪೃಶ್ಯರು ಎಂದು ಯಾರನ್ನು ಹೇಳುತ್ತಾರೆ ಅವರಿಗಿಂತ ಹೀನಸ್ಥಿತಿಯಲ್ಲಿದ್ದಾರೆ. ನಾನು ನೋಡಿದ ಕೆಲವು ಊರುಗಳಲ್ಲಿ ಬೀಡಿ ಕೂಲಿಕಾರರ ಕೇರಿಗಳು ಬೇರೆ ಇವೆ. ಹರಿಜನರ ಕೇರಿಗಳ ಹಾಗೆ ಬೀಡಿ ಕೂಲಿಕಾರರಿಗೆ ಬೇರೆ ಕೇರಿಗಳಿವೆ. ಅವರು ವಾಸ ಮಾಡುವ ಸ್ಥಳ, ದನಕರುಗಳು ಕೂಡ ವಾಸಮಾಡಲಿಕ್ಕೆ ಅರ್ಹವಲ್ಲದ ಸ್ಥಳ. ಅಂಥ ಗುಡಿಸಲುಗಳಲ್ಲಿ ಬೀಡಿ ಕಾರ್ಮಿಕರು ಜೀವನ ಮಾಡುತ್ತಿದ್ದಾರೆ. ಶ್ರೀಮಾನ್ ಗಂಗಾಧರ ನಾಮೋಷಿಯವರು ಹೇಳಿದ ಹಾಗೆ ಈ ದೇಶದಲ್ಲಿ ಕಾನೂನುಗಳೇನೋ ಇವೆ. ಅವೆಲ್ಲ ಕಾನೂನಿನ ಕಡತದಲ್ಲಿವೆ. ಅದರಲ್ಲಿಯೂ ನ್ಯಾಯಶಾಖೆಯಲ್ಲಿ ಕೆಲವು ತಜ್ಞರ ಸಹಾಯದಿಂದ ಅನೇಕ ಕಾನೂನುಗಳು ಈ ದೇಶದಲ್ಲಿ ತಯಾರಾಗುತ್ತಿವೆ. ಆದರೆ ಅವುಗಳನ್ನು ಜಾರಿ ಮಾಡುವ ಶಕ್ತಿ ಈ ರಾಜ್ಯ ಸರ್ಕಾರಕ್ಕೆ ಇಲ್ಲ. ಎಷ್ಟರ ಮಟ್ಟಿಗೆ ಈ ಕಾನೂನನ್ನು ಜಾರಿಗೆ ಇವರು ತರಲು ಸಾಧ್ಯವಿದೆ ಎಂದು ಯೋಚನೆ ಮಾಡಿದರೆ, ಬೇರೆ ಕಾನೂನುಗಳನ್ನೆಲ್ಲ ಹೇಗೆ ಜಾರಿಗೆ ಕೊಟ್ಟಿದ್ದಾರೆಂದು ನೋಡಿದರೆ, ಇದು ಕೂಡ ಸುಮ್ಮನೆ ಕಾನೂನಿನ ಕಡತದಲ್ಲಿ ಸೇರುವ ಹೊಸ ಕಾನೂನೇ ವಿನಾ ಇದನ್ನು ಜಾರಿಗೆ ತರುವುದಕ್ಕೆ ಇವರಿಗೆ ಸಾಕಷ್ಟು ಶಕ್ತಿಯಿಲ್ಲವೆಂದು ನನಗಾದರೂ ಅನ್ನಿಸುತ್ತದೆ.

ನಮ್ಮ ಕಾರ್ಮಿಕ ಮಂತ್ರಿಗಳು ಬಹಳ ಸರಳ ಜೀವಿಗಳು, ಒಳ್ಳೆಯವರು, ಸರಳ ರೀತಿಯಲ್ಲಿ ಜೀವನ ಮಾಡಿದ ಕರ್ಮಯೋಗಿಗಳು ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಮಂತ್ರಿಗಳು ಆದ

(ಶ್ರೀ ಪಿ. ವೆಂಕಟಗಿರಿಯಪ್ಪ)

ತಕ್ಷಣ ಇವರು ಬದಲಾವಣೆಯಾದರು. ನಮ್ಮ ಮೈಸೂರು ಜಿಲ್ಲೆಯಲ್ಲಿ ಸಾವುಕಾರ ಚೆನ್ನಯ್ಯನವರ ಪ್ರಭಾವ ಕಡಿಮೆ ಮಾಡಲು ಕಾರ್ಮಿಕ ಮಂತ್ರಿಗಳು ತಮ್ಮ ಇಲಾಖೆಯ ಕೆಲಸ ಮಾಡುವುದನ್ನು ಬಿಟ್ಟು ಮತ್ತು ತಮ್ಮ ಗುಂಪಿನ ಪ್ರಭಾವ ಹೆಚ್ಚು ಮಾಡಲು ನಿರತರಾಗಿದ್ದಾರೆ.

4-P.M.

Mr. SPEAKER.—In respect of what provision of the Bill the Hon. Member is making this remark ?

Sri P. VENKATAGIRIYAPPA.—I am making a general comment on the Bill and the Government's inability to implement the Acts passed by this House.

Mr. SPEAKER.—Then his remarks must come under one provision or the other. Otherwise, such remarks should not be made.

ಶ್ರೀ ಪಿ. ವೆಂಕಟಗಿರಿಯಪ್ಪ.—ಕಾರ್ಮಿಕ ಮಂತ್ರಿಗಳು ಕೂಡ ಅವರವರ ಖಾತೆಗೆ ಸಂಬಂಧ ಪಟ್ಟ ಕಾನೂನುಗಳು ಯಾವ ರೀತಿ ಅಧಿಕಾರಿಗಳು ಜಾರಿಗೆ ತರುತ್ತಾರೆ ಎನ್ನುವುದನ್ನು ನೋಡಬೇಕು. ಫ್ಯಾಕ್ಟರಿಗಳು ಹೇಗೆ ನಡೆಯುತ್ತಿವೆ, ವಾಸಮಾಡುವ ಮನೆಗಳ ಹತ್ತಿರದಲ್ಲಿ ಇದೆಯೇ, ಅವರ ಸ್ಥಾನ ಮಾನವೇನು, ಮಾಲೀಕರು ಹೇಗೆ ನೋಡಿಕೊಳ್ಳುತಾರೆ ಎಂಬುದುದನ್ನು ಕಣ್ಣಾರೆ ಏಕೆ ನೋಡ ಬಾರದು ? ವಾಸ್ತವವಾಗಿ ಪರಿಸ್ಥಿತಿ ಏನಿದೆ ನೋಡಬೇಕು. ಈ ಮಸೂದೆಯ 6ನೇ ಕಲಮ್ಮಿನಲ್ಲಿ ಇನ್‌ಸ್ಪೆಕ್ಟರ ನೇಮಕದ ಬಗ್ಗೆ ಹೇಳಲಾಗಿದೆ. ಈಗ ಇರತಕ್ಕಂಥ ಇನ್‌ಸ್ಪೆಕ್ಟರುಗಳು ಈ ಕೆಲಸ ನೋಡುತ್ತಾರೆಂದು ಹೇಳಿದರು. ನನ್ನ ಅನುಭವದಿಂದ ನಾನು ಹೇಳುತ್ತೇನೆ. ಬೀಡಿ ಕಾರ್ಖಾನೆಯ ಕೆಲವು ಮಾಲೀಕರು ಭಾರೀ ಶ್ರೀಮಂತ ಜನ ಇದ್ದಾರೆ. ಇಂತಹ ಇನ್‌ಸ್ಪೆಕ್ಟರರಿಗೆ ಅವರು ಜಗ್ಗುವು ದಿಲ್ಲವೆಂಬ ಅನುಮಾನವಿದೆ. ಗೆಜಿಟೆಡ್ ದರ್ಜೆಯ ಅಧಿಕಾರಿಯನ್ನು ನೇಮಕ ಮಾಡಬೇಕು ಏಕೆಂದರೆ ಸಣ್ಣ ಇನ್‌ಸ್ಪೆಕ್ಟರರು ಮಾಲೀಕರ ಮೇಲೆ ಕಾನೂನು ಜಾರಿ ಮಾಡಲು ಸಾಧ್ಯವಾಗುವುದಿಲ್ಲ ಎಂದು ನಾನು ಹೇಳುತ್ತೇನೆ.

ಇನ್ನೊಂದು ಮುಖ್ಯ ವಿಷಯವೆಂದರೆ ಕಾರ್ಮಿಕರ ಬಗ್ಗೆ ಸರಕಾರದ ಮನೋಭಾವನೆ ಬದಲಾವಣೆಯಾಗಬೇಕು. ಮುಖ್ಯವಾಗಿ ಭೂಮಿಯಲ್ಲಿ ಕಷ್ಟಪಡುವ ರೈತರ, ಕಾರ್ಖಾನೆಗಳಲ್ಲಿ ಕಷ್ಟಪಡುವ ಕಾರ್ಮಿಕರ ಬಗ್ಗೆ ಸರಕಾರಕ್ಕೆ ಒಳ್ಳೇ ಭಾವನೆಯಿಲ್ಲದೆ ಸರಿಯಾಗಿ ಕಾನೂನನ್ನು ಜಾರಿಗೆ ತರುತ್ತಿಲ್ಲ. ಸರ್ಕಾರದ ದೃಷ್ಟಿಯಲ್ಲಿ ಜನ ಎಂದರೆ ಭಾರಿ ಕಾರ್ಖಾನೆ ಮಾಲೀಕರು ಅಂದರೆ ಬಿರ್ಲಾ, ಡಾಲ್ಮಿಯಾ, ಭಾರಿ ಕಂಟ್ರಾಕ್ಟರುಗಳು ಬೋರಯ್ಯ; ಬಸವಯ್ಯ, ಮತ್ತು ರಾಮಯ್ಯ ಎನ್ನುವ ಭಾವನೆ ಇದೆ.

Mr. SPEAKER.—I have already said that names not concerned with the Bill should not be brought in.

Sri C. J. MUCKANNAPPA (Sira).—Sir, they are the names of concerns and not persons.

Mr. SPEAKER.—Even concerns are also persons in the eye of law.

ಶ್ರೀ ಪಿ. ವೆಂಕಟಗಿರಿಯಪ್ಪ.—ಒಟ್ಟಿನಲ್ಲಿ ಈ ಕಾನೂನನ್ನು ಜಾರಿಗೆ ತರಲು ಮಸೂದೆಯಲ್ಲಿರ ತಕ್ಕ ಅಧಿಕಾರ ಸಾಲದು. ಬೀಡಿ ಕೂಲಿಕಾರರ ಕಷ್ಟ ಪರಿಸ್ಥಿತಿಯನ್ನು ಹೋಗಲಾಡಿಸಿ ಅವರ ಪರಿಸ್ಥಿತಿ ಉತ್ತಮಗೊಳ್ಳುವಂತೆ ಏರ್ಪಾಡು ಮಾಡಬೇಕೆಂದು ಸರಕಾರಕ್ಕೆ ಒತ್ತಾಯಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಬೀಡಿ ಕೆಲಸಗಾರರು ಕೆಲಸ ಮಾಡತಕ್ಕಂಥ ಜಾಗ ಹೇಗಿರಬೇಕು, ಏನೇನು ಸೌಲಭ್ಯ ಒದಗಿಸಬೇಕು ಎಂಬುದಕ್ಕೋಸ್ಕರ 41 ಕ್ಲಾಜುಗಳಿಂದ ಕೂಡಿದ ಈ ಒಂದು ಸಣ್ಣ ವಿಧೇಯಕವನ್ನು ಸರಕಾರದವರು ಈ ಸಭೆಯ ಮುಂದೆ ಇಟ್ಟಿದ್ದಾರೆ. ಸರಕಾರ ಕೈಗೊಂಡಿರುವ ಕೆಲಸ ಒಳ್ಳೆಯದಾಗಿದೆ ಎಂದು ಹೇಳುವುದಾದರೆ ಕಾರ್ಮಿಕರ ಹಿತರಕ್ಷಣೆಗೋಸ್ಕರ ಈ ಮಸೂದೆಯನ್ನು ಪಾಸು ಮಾಡಿ ಜಾರಿಗೆ ತಂದರೆ ನನಗೆ ಬಹಳ ಸಂತೋಷವಾಗುತ್ತದೆ. ಹಿಂದಿನ ಕಾರ್ಮಿಕ ಸಚಿವರು ಮಾಡಿರುವುದನ್ನು ಇವರು ಎಷ್ಟರ ಮಟ್ಟಿಗೆ ಕಾರ್ಮಿಕರ ಹಿತಕ್ಕೋಸ್ಕರ ಅಧಿ

ಕಾರ ಚಲಾಯಿಸಿ ಜಾರಿಗೆ ತಂದಿದ್ದಾರೆ ? ಕಾನೂನಿನಿಂದ ಕಾರ್ಮಿಕರಿಗೆ ಸೌಲಭ್ಯ ಸಿಕ್ಕಿಲ್ಲ. ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಪರಿಶೀಲನೆಗಾಗಿ ಹೋಗುತ್ತದೆ; ಹೆಚ್ಚಾಗಿ ಚರ್ಚೆ ಮಾಡಬೇಕಾಗಿಲ್ಲ ಎಂದು ಕಾರ್ಮಿಕ ಸಚಿವರು ಹೇಳಿದರು. ಈ ಮಸೂದೆ ಒಂದೂವರೆ ವರ್ಷದಿಂದ ಸಭೆಯ ಮುಂದೆ ಬಾರದೆ ಇರುವುದಕ್ಕೆ ಅಸಮಾಧಾನವಾಗುತ್ತದೆ. ಆದುದರಿಂದ ಅತಿ ಶೀಘ್ರವಾಗಿ ಸಂಬಂಧಪಟ್ಟ ಮಂತ್ರಿಗಳು ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲನೆ ಮಾಡಿದ ನಂತರ ಕಾನೂನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಸ್ವಾಮಿ, ಈ ಕಾನೂನನ್ನು ತಡ ಮಾಡಿ ತಂದಿರುವ ಬಗ್ಗೆ ಕಾರಣ ಹೇಳಲಿಲ್ಲ. ಇಷ್ಟು ತಡವಾಗಿಯಾದರೂ ತಂದಿದ್ದಾರೆಂದು ಸಮಾಧಾನಪಟ್ಟುಕೊಳ್ಳುವುದಾದರೆ ಇದನ್ನು ಯಾವ ರೀತಿ ಎನ್‌ಫೋರ್ಸ್ ಮಾಡುತ್ತಾರೆ ಎಂಬುದಕ್ಕೆ ಏನೇನೂ ಹೇಳಲಿಲ್ಲ.

ಒಬ್ಬ ಇನ್‌ಸ್ಪೆಕ್ಟರ ಕೈಗೆ ಅಥಾರಿಟಿ ಕೊಟ್ಟು ಕಾನೂನಿನ ಪ್ರಕಾರ ಬೀಡಿ ಫ್ಯಾಕ್ಟರಿಯವರು ಸರಿಯಾದ ರೀತಿಯಲ್ಲಿ ನಡೆಸುವ ಹಾಗೆ ಕಾನೂನಿಗೆ ಗೌರವ ತರತಕ್ಕ ರೀತಿಯಲ್ಲಿ ನಡೆದುಕೊಳ್ಳುವಂತೆ ವ್ಯವಸ್ಥೆ ಮಾಡು ಎಂದು ಹೇಳುತ್ತೀರಿ. ಹಾಗೆ ಹೇಳುವಾಗ ಒಂದು ವಿಷಯವನ್ನು ತಮ್ಮ ದೃಷ್ಟಿಗೆ ತರಬೇಕೆಂದು ಯೋಚನೆ ಮಾಡುತ್ತಾ ಇದ್ದೇನೆ. ಕೂಲಿಗಾರರು ಕೆಲಸ ಮಾಡತಕ್ಕ ವಠಾರ ಏನಿದೆ ಅದಕ್ಕೆ ಲೈಸೆನ್ಸ್ ಕೊಡಬೇಕಾದರೆ ಇಂತಿಂತಹ ಕಂಡೀಷನ್ ಇರಬೇಕೆಂದು 4 ನೆಯ ಕ್ಲಾಜಿನಲ್ಲಿ ಹೇಳಿದ್ದೀರಿ, ಕಾಂಪಿಟೆಂಟ್ ಅಥಾರಿಟಿ ಎಂದರೆ ಯಾರು ಎಂದು ಇಲ್ಲಿ ಎಲ್ಲೂ ಹೇಳಿಲ್ಲ, ಕಾಂಪಿಟೆಂಟ್ ಅಥಾರಿಟಿ ಎಂದರೆ,

> "The competent authority shall, in deciding whether to grant or refuse a licence, have regard to the following matters, namely,..."

ಎಂದು ಹೇಳಿದ್ದೀರಿ. ಲೇಬರ್ ಕಮೀಷನರೇ, ಡೆಪ್ಯುಟಿ ಲೇಬರ್ ಕಮಿಷನರೇ, ಸರ್ಕಾರದವರೇ, ಡೆಪ್ಯುಟಿ ಕಮಿಷನರೇ ಯಾರು ಲೈಸೆನ್ಸ್ ಕೊಡುವವರು ಎಂಬುದು ಅಸ್ಪಷ್ಟವಾಗಿದೆ. ಯಾರ ಹತ್ತಿರ ಲೈಸೆನ್ಸ್‌ಗೆ ಹೋಗಬೇಕೆನ್ನುವುದು ಅನುಮಾನವಾಗಿದೆ, ಇದಕ್ಕೆ ತಮ್ಮ ಉತ್ತರದಲ್ಲಿ ಯಾರು ಎಂಬುದನ್ನು ತಿಳಿಸಬೇಕು ಅಥವಾ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇಂಥವರೇ ಲೈಸೆನ್ಸ್ ಕೊಡಬೇಕು, ಇಂಥವರೇ ಅಪೀಲ್ ಹಿಯರ್ ಮಾಡಬೇಕೆಂದು ನಿರ್ದಿಷ್ಟವಾಗಿ ಸೂಚನೆ ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಕ್ಲಾಜ್ 4 (ಬಿ) ನಲ್ಲಿ

"the status and previous experience of the applicant." ಎಂದು ಹೇಳಿದ್ದೀರಿ. ಅವನ ಸ್ಟೇಟಸ್ ಏನಿರಬೇಕು ? ಎಕ್ಸ್‌ಪೀರಿಯನ್ಸ್ ಎಷ್ಟಿರಬೇಕೆಂದು ಹೇಳಿಲ್ಲ. 10 ವರ್ಷ ಇರಬೇಕೇ ? 5 ವರ್ಷ ಇರಬೇಕೇ ? ಬೀಡಿ ಕಟ್ಟಿ ವ್ಯಾಪಾರ ಮಾಡುವುದರಲ್ಲೋ ಅಥವಾ ಬೀಡಿ ಕಟ್ಟಿಸುವುದರಲ್ಲೋ ? ಯಾವುದರಲ್ಲಿ ಅನುಭವ ಇರಬೇಕು ? ಎಷ್ಟು ವರ್ಷ ಅನುಭವ ಇರಬೇಕು ಎನ್ನುವುದು ಇಲ್ಲ. ಸ್ಟೇಟಸ್ ಎಂದರೆ ಏನಿರಬೇಕೆನ್ನುವುದು ಅರ್ಥವಾಗುವುದಿಲ್ಲ. ಮನುಷ್ಯನು ಶ್ರೀಮಂತನಾಗಿರಬೇಕೇ ಯಾವ ಮಟ್ಟದಲ್ಲಿರಬೇಕೆಂಬ ಬಗ್ಗೆ ಅನುಮಾನ ಬಂದಿದೆ. ಹಾಗಾದರೆ ಅನುಭವವಿಲ್ಲದೇ ಇರತಕ್ಕವನು ಶ್ರೀಮಂತನಾಗಿದ್ದು ಬೀಡಿ ಫ್ಯಾಕ್ಟರಿ ಮಾಡಬಾರದೇ ? ಅನುಭವ ಇಲ್ಲದೇ ಹೋದರೆ ಅದು ಅಡ್ಡಿ ಬರುತ್ತದೆಯೇ ? ಇದನ್ನು ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕು. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದನ್ನು ಪರಿಶೀಲಿಸಬೇಕು. ಇದು ಅರ್ಥವಾಗದೇ ಇರತಕ್ಕ ಮಾತು, ದೇಶದಲ್ಲಿ ಅನೇಕ ಜನ ಇವತ್ತಿನ ದಿವಸ ಬೀಡಿ ಫ್ಯಾಕ್ಟರಿಗಳನ್ನು ಹೊಸ ಹೊಸದಾಗಿ ತೆಗೆಯುತ್ತಾ ಇದ್ದಾರೆ; ಅವರಿಗೆ ಅನುಭವ ಇರುವುದಿಲ್ಲ, ಕೆಲಸಗಾರರನ್ನು ಇಟ್ಟುಕೊಂಡು ಕೆಲಸ ಮಾಡಿಸುತ್ತಾ ಇದ್ದಾರೆ.

ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು.

ಕ್ಲಾಜ್ 4 (ಸಿ) ನಲ್ಲಿ

> "the financial resources of the applicant including his financial capacity to meet the demands arising out of the provisions of the laws for the time being in force relating to welfare of labour."

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಎಂದು ಹೇಳಿದ್ದೀರಿ. ಫೈನಾನ್‌ಷಿಯಲ್ ರಿಸೋರ್ಸ್ ಎಂದರೆ ಎಷ್ಟಿರಬೇಕು ? 1 ಲಕ್ಷ ರೂಪಾಯಿ ಇರಬೇಕೇ ? 50 ಸಾವಿರ ರೂಪಾಯಿ ಇರಬೇಕೇ ? ಎಷ್ಟು ಧಡೂತಿ ಇರಬೇಕು ? ಸಾಲ್ವೆನ್ಸಿ ಸರ್ಟಿಫಿಕೇಟ್ ಪ್ರೊಡ್ಯೂಸ್ ಮಾಡಬೇಕೇ ? ಸೇಲ್ಸ್‌ಟ್ಯಾಕ್ಸ್ ಕ್ಲಿಯರನ್ಸ್ ಸರ್ಟಿಫಿಕೇಟ್ ಕೊಡಬೇಕೇ ಎನ್ನುವುದು ಇದರಲ್ಲಿ ಇಲ್ಲ. 50 ಸಾವಿರ ಅಥವಾ 1 ಲಕ್ಷ ರೂಪಾಯಿ ಇದೆ ಎಂದು ಹೇಳಿ ಮೂರು ತಿಂಗಳಾದಮೇಲೆ ಫ್ಯಾಕ್ಟರಿ ಮುಚ್ಚಿದರೆ ಏನು ಮಾಡುತ್ತೀರಿ ? ಇದು ಅರ್ಥವಾಗುತ್ತಿಲ್ಲ. 250 ಜನ ಕೆಲಸಗಾರರನ್ನು ಇಟ್ಟುಕೊಂಡು 50 ಸಾವಿರ ರೂಪಾಯಿ ಇದೆ ಎಂದು ಹೇಳಿ 500 ಜನರನ್ನು ಇಟ್ಟುಕೊಂಡರೆ ಆಗ ಏನು ಮಾಡುತ್ತೀರಿ ? ಇದು ಬಹಳ ಅಸ್ಪಷ್ಟವಾಗಿದೆ ಇದನ್ನು ಸ್ವಲ್ಪ ಚೆನ್ನಾಗಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಕ್ಲಾಜ್ 4 (ಇ) ನಲ್ಲಿ

"whether the beedi manufactured by the applicant will be sold and marketed by himself or through a proprietor or a registered user of a trade mark registered under the Trade and Merchandise Marks Act, 1958 (Central Act 43 of 1958), in relation to beedi, or any other person;

ಎಂದು ಹೇಳಿದ್ದೀರಿ ಇದು ಅರ್ಥವಾಗುವುದಿಲ್ಲ. ಗಣೇಶ ಬೀಡಿ ಕಟ್ಟುತ್ತಾರೆ, 30 ರ ಬೀಡಿ ಕಟ್ಟುತ್ತಾರೆ; ಮಂಗಳೂರಿನಿಂದ ಪ್ರಭು ಬೀಡಿ ಬರುತ್ತದೆ. ಹರಿಭಾಯಿ ಬೀಡಿ ಎಂಬುದನ್ನು ಎಷ್ಟೋ ಜನ ವ್ಯಾಪಾರ ಮಾಡುತ್ತಾರೆ. ಅವರು ಹೋಲ್‌ಸೇಲ್ ವ್ಯಾಪಾರ ಮಾಡುತ್ತಾ ಇಲ್ಲ ಇಂತಿಂತಹ ಏಜೆಂಟಿಗೆ ಇಷ್ಟಿಷ್ಟು ಎಂದು ಡಿಸ್ಟ್ರಿಬ್ಯೂಟ್ ಮಾಡುತ್ತಾರೆ. ನಮ್ಮಲ್ಲಿ ತಯಾರಾಗುವ ಗಣೇಶ ಬೀಡಿ ಡೆಲ್ಲಿಗೆ ಹೋಗುತ್ತದೆ. ಹೀಗಿರುವಾಗ ಈ ನಿಯಮದ ಅರ್ಥವಾಗುವುದಿಲ್ಲ, ಇದರ ಉದ್ದೇಶ ಏನು ? ಇದನ್ನು ಈ ಮಸೂದೆಯನ್ನು ಸಭೆಯ ಮುಂದೆ ಇಡುವಾಗಲೂ ಸಹ ಹೇಳಲಿಲ್ಲ ಆದ್ದರಿಂದ ಈ ವಿಷಯವನ್ನು ಸ್ವಲ್ಪ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ಸ್ನೇಹಿತರಾದ ಶ್ರೀಮಾನ್ ವಿ. ಎಸ್. ಪಾಟೀಲ್ ಅವರು ಫೈನಾನ್‌ಷಿಯಲ್ ಮೆಮೋರ್ಯಾಂಡಂ ಇಲ್ಲ ಎಂದು ಹೇಳಿದರು. ಎಷ್ಟು ಹಣ ಖರ್ಚು ಮಾಡುತ್ತೀರಿ, ಹೆಚ್ಚಿಗೆ ಸಿಬ್ಬಂದಿ ಎಷ್ಟು ತೆಗೆದುಕೊಳ್ಳುತ್ತೀರಿ ಎಂದರೆ ಏನೂ ಇಲ್ಲವೇ ಇಲ್ಲ ; ಈಗಿರುವವರೇ ಮಾಡುತ್ತಾರೆ ಎಂದು ಹೇಳಿದಿರಿ, ಆದರೂ ಒಂದು ಫೈನಾನ್‌ಷಿಯಲ್ ಮೆಮೋರ್ಯಾಂಡಂ ಹಾಕಬೇಕಾಗಿತ್ತು, ಇದು ಏನು ತೋರಿಸುತ್ತದೆ ಎಂದರೆ ಈಗಿರತಕ್ಕ ಕಾನೂನನ್ನೇ ತಾವು ಯಾವ ಮಟ್ಟದಲ್ಲಿ ಯಾವ ವೇಗದಲ್ಲಿ ನಡೆಸುತ್ತಾ ಇದ್ದೀರಿ ಎಂಬುದು ಗೊತ್ತಾಗುತ್ತದೆ. ಹಾಲಿ ಇರತಕ್ಕ ಸಿಬ್ಬಂದಿ ಜಾಸ್ತಿಯಾಗಿದ್ದಾರೆ ಅವರಿಂದಲೇ ಮಾಡಿಸುತ್ತೇವೆ ಎಂದು ಹೇಳಿದಂತಾಯಿತು. ಹೀಗಾದರೆ ನಿಮ್ಮ ಜಾರಿಯಲ್ಲಿರತಕ್ಕ ಕಾರ್ಮಿಕ ಕಾನೂನನ್ನು ಪಿಜನ್‌ಹೋಲ್‌ನಲ್ಲಿಟ್ಟಿದ್ದೀರಾ, ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟಿದ್ದೀರಾ ಎಂದು ಅರ್ಥವಾಗುತ್ತದೆ. ಕಾರ್ಮಿಕ ಖಾತೆಯಲ್ಲಿ ಏನೂ ಕೆಲಸ ನಡೆಯುತ್ತಿಲ್ಲ ಎಂದು ಅರ್ಥವಾಗುತ್ತದೆ. ದೇಶದಲ್ಲಿ ಎಷ್ಟು ಬೀಡಿ ಕೆಲಸಗಾರರು ಇದ್ದಾರೆ ಎಂಬ ಅಂಕಿ ಅಂಶ ಇವತ್ತಿನ ದಿವಸ ನಿಮ್ಮ ಹತ್ತಿರ ಇಲ್ಲ. ಏಕೆಂದರೆ ಲೇಬರ್ ಡಿಪಾರ್ಟ್‌ಮೆಂಟು ಅತ್ತಕಡೆಗೆ ದೃಷ್ಟಿಯನ್ನು ಹರಿಸಿಲ್ಲ, ಎಷ್ಟಿರಬಹುದು ಎಂದು ತಮಗೆ ಅಂಕಿ ಅಂಶ ಕೊಡಬಹುದಾಗಿತ್ತು. ಅದು ಇಲ್ಲದೇ ಇರುವುದರಿಂದ ಏನು ಅನಿಸುತ್ತಾ ಇದೆ ಎಂದರೆ ಇದನ್ನು ಏನೋ ಒಂದು ಮಕ್ಕಿ-ಕಾ-ಮಕ್ಕಿ ನೋಡಿಕೊಳ್ಳಬಹುದು ಎಂದು ಹೇಳುತ್ತಾ ಇದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಅಂಕಿ ಅಂಶ ಕೊಟ್ಟಿದ್ದನ್ನು ತಾವು ಗಮನಿಸಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಜನ ಕೆಲಸಗಾರರು ಇದ್ದಾರೆ ? ನಾನು ವಾಸಮಾಡತಕ್ಕ ಒಂದು ಊರಿನಲ್ಲಿ 4,000 ಜನ ಬೀಡಿ ಕೆಲಸಗಾರರು ಇದ್ದಾರೆ, ನಮ್ಮ ತಾಲ್ಲೂಕಿನಲ್ಲಿ ಹಳ್ಳಿಹಳ್ಳಿಗಳಲ್ಲ 2,000 ಕ್ಕೂ ಮೇಲ್ಪಟ್ಟು ಬೀಡಿ ಕೆಲಸಗಾರರು ಇದ್ದಾರೆ. 1 ಲಕ್ಷದ 55 ಸಾವಿರ ಜನಸಂಖ್ಯೆ ಇರತಕ್ಕ ಒಂದು ತಾಲ್ಲೂಕಿನಲ್ಲಿ 6,000ಕ್ಕೂ ಮೇಲ್ಪಟ್ಟು ಬೀಡಿ ಕೈಗಾರಿಕೆಯಲ್ಲಿ ಕೆಲಸ ಮಾಡಿ ಜೀವನ ಮಾಡುತ್ತಾ ಇರತಕ್ಕ ಜನ ಇದ್ದಾರೆ, ಈ ಅಂಕಿ ಅಂಶ ನಿಮ್ಮ ಹತ್ತಿರ ಇದೆಯೇ ? ಇನ್‌ಸ್ಪೆಕ್ಟರುಗಳು ಚೆಕ್ ಇಟ್ಟಿಲ್ಲ ; ಅದಕ್ಕೇ ನಿಮ್ಮಲ್ಲಿ ಅಂಕಿ ಅಂಶ ಇಲ್ಲ—ಅಂತೂ ಈಗಿರತಕ್ಕ ಸಿಬ್ಬಂದಿಯ ಮೂಲಕ ಈ ಕಾನೂನು ಜಾರಿಗೆ ಬರುತ್ತದೆಯೇ ಎಂದರೆ ಸರ್ವಥಾ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಇಂಥಾ

ಒಂದು ಹೊಸ ಬಿಲ್ಲನ್ನು ತಂದು ಶಹಬಾಸಗಿರಿ ಪಡೆಯುವುದಕ್ಕೆ ಮೊದಲು ಇದರ ಆಗುಹೋಗುಗಳನ್ನು ಯೋಚನೆ ಮಾಡಬೇಕಾಗಿತ್ತು; ಅದನ್ನು ಮಾಡಿಲ್ಲ ಎಂದು ಹೇಳುತ್ತೇನೆ.

ಈಗ ಲೇಬರ್ ಡಿಪಾರ್ಟ್‌ಮೆಂಟಿಗೆ ಕೂಲಿಗಾರರು ಯಾರಾದರೂ ಅರ್ಜಿ ಕೊಟ್ಟರೆ ಅದು ಯಾವ ರೀತಿ ತೀರ್ಮಾನವಾಗುತ್ತದೆ ಎಂಬುದನ್ನು ನೋಡಿ. ಸಾಮಾನ್ಯವಾಗಿ ಈ ಕೈಗಾರಿಕೆ ನಡೆಸತಕ್ಕವರು ಶ್ರೀಮಂತರು; ಅವರು ಈ ಇನ್‌ಸ್ಪೆಕ್ಟರನ್ನು ಕಾರಿನಲ್ಲಿ ಕೂಡಿಸಿಕೊಂಡು ಬಂದು ಒಳ್ಳೆಯ ಒಂದು ಭೋಜನ ಹಾಕಿಸಿದರೆ ಮುಗಿಯಿತು ಎಲ್ಲಾ ಸರಿಯಾಗಿದೆ ಎಂದು ರಿಪೋರ್ಟ್ ಕೊಡುತ್ತಾರೆ. ಕೂಲಿಗಾರ ವರ್ಗದವರು ಒಂದು ಅರ್ಜಿ ಕೊಟ್ಟರೆ ಅದನ್ನು ಎಷ್ಟುಮಟ್ಟಿಗೆ ಪರಿಶೀಲನೆ ಮಾಡುತ್ತೀರಿ, ಅವರಿಗೆ ಕೊಡಬೇಕಾದ ರಿಲೀಫ್ ಕೊಡುತ್ತೀರಾ ಎಂದು ಕೇಳುತ್ತೇನೆ. ಒಂದು ಸಾರಿ ನಮ್ಮ ಊರಿನಲ್ಲಿ ಬೀಡಿ ಫ್ಯಾಕ್ಟರಿಯಲ್ಲಿ ಗಲಾಟೆ ಆಯಿತು, ಹೊಡೆದಾಟ ಆಯಿತು. ಪೋಲೀಸ್‌ನವರು ಕೆಲವರನ್ನು ದಸ್ತಗಿರಿ ಮಾಡಿದರು. ಅದರಲ್ಲಿ ಯಾರ ತಪ್ಪು ಇತ್ತು ಎಂದು ತನಿಖೆ ಮಾಡಿ, ವಿಚಾರ ಮಾಡಿ ಎಂದು ಲೇಬರ್ ಇಲಾಖೆಗೆ ಕೊಟ್ಟ ಅರ್ಜಿ 5 ವರ್ಷ ಆಗಿದೆ; ಇದುವರೆಗೂ ಅದು ಬೆಳಕಿಗೆ ಬಂದಿಲ್ಲ.

ನಿಮ್ಮ ಆ ಅಧಿಕಾರಿಗಳಲ್ಲಿ ಸೇವಾ ಮನೋಭಾವನೆ ಇರುವುದಿಲ್ಲ. ಅವರು ಯಾವಾಗಲೂ ದೊಡ್ಡ ಮನುಷ್ಯರ ಕಿಸೆಯಲ್ಲಿರುತ್ತಾರೆ. ಅಂಥವಕ್ಕೆ ಅವರು ಬಲಿ ಬೀಳಬಾರದು. ಆದರೆ ಈಗ ಇರತಕ್ಕ ಸಿಬ್ಬಂದಿಯೇನಿದೆ ಅದು ಒಂದು ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡುವುದಿಲ್ಲ. ಆದುದರಿಂದ ಇಲ್ಲಿ ತಾವು ಹೇಳಿರತಕ್ಕ ಈ "May or may not" ಎಂಬುದು ಸರಿಯಾಗಿಲ್ಲ. ಇಲ್ಲಿ 'Shall' ಎಂಬ ಪದವನ್ನು ಹಾಕಬೇಕಾಗಿತ್ತು ಎಂದು ಹೇಳುತ್ತೇನೆ. It is an obligatory duty of the Inspector to inspect.

ಇನ್ನು ಕ್ಲಾಜ್ 12 ರಲ್ಲಿ ಹೀಗೆ ಹೇಳಿದೆ:

> "Provided that it shall not be necessary to provide for separate urinals in the beedi industrial premises where less than fifty persons are employed."

ಇದೆಲ್ಲ ಹೋಗಬೇಕೆಂದು ಹೇಳುತ್ತೇನೆ.

Mr. SPEAKER.—If there are 50 persons, one Urinal may suffice. The idea behind that is, if there is a large number then two urinals may be necessary. Then it may be separate. If it is 50 persons, all the 50 do not use it at a time.

Sri C. J. MUCKANNAPPA.—One Urinal will not suffice. Every person is in the habit of taking Coffee or Tea three or four times and they will have to be visiting the Urinal often. ಇಲ್ಲಿ 50 ಜನರಿಗಿಂತ ಕಡಮೆ ಇದ್ದರೆ ಯೂರಿನಲ್ ಅನ್ನು ಪ್ರೊವೈಡ್ ಮಾಡಬೇಕಾಗಿಲ್ಲ ಎಂದು ಹೇಳಿರುವುದು ಸರಿಯಲ್ಲ. ಒಂದಾದರೂ ಇರಲೇಬೇಕು.

ಈ ಹದಿನಾಲ್ಕನೆಯ ಕ್ಲಾಜಿನಲ್ಲಿ ಮಕ್ಕಳನ್ನಿಟ್ಟುಕೊಂಡಿರತಕ್ಕಂಥ ಬಾಣಂತಿ ಹೆಂಗಸರೂ ಎಷ್ಟೋ ಕಡೆಗಳಲ್ಲಿ ಕೂಲಿ ಕೆಲಸಮಾಡುತ್ತಿದ್ದಾರೆ. ಅವರ ಮಕ್ಕಳನ್ನು ಮನೆಯಲ್ಲಿ ನೋಡಿಕೊಳ್ಳುವುದಕ್ಕೆ ಯಾರೂ ಇರುವುದಿಲ್ಲ. ಅಂಥ ಸಂದರ್ಭದಲ್ಲಿ ಅವರಿಗೊಂದು ಪ್ರತ್ಯೇಕ ರೂಮಿರುವುದು ಬೇಡವೆ? 14ನೆಯ ಕ್ಲಾಜಿನಲ್ಲಿ ಹೀಗೆ ಹೇಳಿದ್ದಾರೆ:

> "In every beedi industrial premises wherein more than fifty women employees are ordinarily employed, there shall be provided and maintained a suitable room or rooms for the use of children under the age of six years of such women employees."

ಒಂದು ವೇಳೆ ಈ 50 ಜನ ಹೆಂಗಸರಲ್ಲಿ 7 ಜನ ಬಾಣಂತಿಯರಿದ್ದರೆ ಆಗ ಈ ರೂಮಿರುವುದು ಬೇಡ ಎಂತಲೇ? ಹಾಗಾದರೆ ಅವರು ಆ ಮಕ್ಕಳನ್ನು ಎಲ್ಲಿ ಹಾಕಬೇಕು? ನಾವು ಈ ಹಿಂದೆ ಒಂದಾವರ್ತಿ ಶರಾವತಿಗೆ ಹೋಗಿದ್ದಾಗ ಅಲ್ಲಿ ಕೂಲಿ ಮಾಡುತ್ತಿದ್ದ ಹೆಂಗಸರಲ್ಲಿ ಬಾಣಂತಿಯರಿಗಾಗಿ ತೊಟ್ಟಿಲುಗಳನ್ನು ಕಟ್ಟಿದ್ದ ಒಂದು ಪ್ರತ್ಯೇಕವಾದ ರೂಮಿತ್ತು. ಅಲ್ಲಿ ಅವರು ಹಂಗಾಮಿ ಕೆಲಸ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಗಾರರು. ಇಲ್ಲಾದರೋ ಇವರು ಖಾಯಂ ಕೆಲಸಗಾರರು. ಇವರಿಗೆ ಒಂದು ರೂಮು ಇರಲೇ ಬೇಕೆಂದು ಇದರಲ್ಲಿ ಅಳವಡಿಸುವುದುತ್ತಮ. ಇದು ಕಡ್ಡಾಯವಾಗಿ ಇರಬೇಬೇಕೆಂದು ಹೇಳುತ್ತೇನೆ. ಇಂಥ ಸೌಲಭ್ಯಗಳನ್ನು ಒದಗಿಸುವುದರಿಂದ ಶ್ರೀಮಂತರಿಗೇನೂ ತೊಂದರೆ ಯಾಗುವುದಿಲ್ಲ. ಆದುದರಿಂದ ಈ ಕ್ಲಾಜ್ 14 ರಲ್ಲಿ 50 ಕ್ಕೆ ಮೇಲಿರಬೇಕು ಎಂಬ ಶಬ್ದವನ್ನು ತೆಗೆದುಹಾಕಬೇಕು. ಇಂಥ ಒಂದು ಕೊಠಡಿ ಇರಲೇಬೇಕು ಎಂಬುದನ್ನು ಒತ್ತಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೆಲಸ ಮಾಡತಕ್ಕ ವೇಳೆಯ ವಿಚಾರದಲ್ಲಿ ಒಬ್ಬ ದಿನಕ್ಕೆ 8 ಗಂಟೆಯ ಪ್ರಕಾರ ಒಂದು ವಾರ ಕೆಲಸ ಮಾಡಿದಮೇಲೆ ಇನ್ನೂ ಹೆಚ್ಚು ಕಾಲ ಕೆಲಸ ಮಾಡಿದರೆ ಅವರಿಗೆ ಓವರ್‌ಟೈಂ ಭತ್ಯ ಕೊಡಬೇಕೆಂದು ಹೇಳಿ ಮತ್ತೆ ಅಗ್ರಿಗೇಟಿನಲ್ಲಿ 50 ಗಂಟೆಗಳಿಗೆ ಮೀರದಂತೆ ಇರಬೇಕೆಂದು ಹೇಳಿದೆ. ಇದನ್ನು ಆ ಮಾಲಿಕರು ತಮ್ಮ ಮನಸ್ಸು ಬಂದಹಾಗೆ ವ್ಯಾಖ್ಯಾನ ಮಾಡುತ್ತಾರೆ. ಆದುದರಿಂದ ಇಲ್ಲಿ ಈ ಕೆಲಸದ ಅವಧಿ ಅಥವಾ ವೇಳೆ ಏನಿದೆ ಇದನ್ನು ಖಚಿತವಾಗಿ ಇಷ್ಟೇ ಇರಬೇಕೆಂದು ಹೇಳುವುದು ಉತ್ತಮವೆಂದು ನನಗೆ ಕಾಣುತ್ತದೆ. ಇಲ್ಲವಾದರೆ ಎಂಪ್ಲಾಯರ್ಸಿಗೂ, ಎಂಪ್ಲಾಯಿಗೂ ವೃಥಾ ವ್ಯಾಜ್ಯ ಉಂಟಾಗಲು ಅವಕಾಶವಾಗುತ್ತದೆ. ಆದುದರಿಂದ ಇದನ್ನು ಸರ್ಕಾರದವರು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕ್ಲಾಜ್ 31 ರಲ್ಲಿ ಹೇಳಿರತಕ್ಕ ಅಂಶಗಳನ್ನು ವಿಚಾರಣೆ ಮಾಡತಕ್ಕವರು ಯಾರು? ಈ ಅಂಶ ಇಲ್ಲಿ ಸರಿಯಾಗಿ ಅರ್ಥವಾಗುತ್ತಿಲ್ಲ. ಇದು ಬಹಳ ವೇಗ್ ಆಗಿದೆ. ಆದುದರಿಂದ ಇದನ್ನು ಸರ್ಕಾರದವರು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು 35 ನೆಯ ಕ್ಲಾಜಿನಲ್ಲಿ ಹೇಳಿರತಕ್ಕ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಕಾರ್ಮಿಕರು ತಪ್ಪು ಮಾಡಿದರೆ ಅವರನ್ನು ಪ್ರಾಸೀಕ್ಯೂಟ್ ಮಾಡಲು ಬೇಗ ಪರ್ಮಿಷನ್ ಸಿಕ್ಕುತ್ತದೆ. ಆದರೆ ಅದೇ ಮಾಲೀಕ ತಪ್ಪು ಮಾಡಿದರೆ ಪರ್ಮಿಷನ್ ಸಿಕ್ಕುವುದು ಕಷ್ಟ. ಈ ವಿಚಾರವನ್ನೂ ಕೂಡ ಸರ್ಕಾರದವರು ಸ್ವಲ್ಪ ಆಳವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕ್ಲಾಜ್ 38 ರಲ್ಲಿ ಹೇಳಿರುವುದನ್ನು ಡಿಲೀಟ್ ಮಾಡಬೇಕೆಂದು ಹೇಳುತ್ತೇನೆ. ಶ್ರೀ ಸುಂಠಣಕರ್ ಅವರು ಇದರಬಗ್ಗೆ ಏನು ಹೇಳಿದರೋ ಅದನ್ನೇ ನಾನೂ ಹೇಳುತ್ತೇನೆ. ಆದುದ ರಿಂದ ಈ ವಿನಾಯಿತಿ ಕ್ಲಾಜನ್ನು ತೆಗೆದು ಹಾಕಬೇಕೆಂದು ಹೇಳುತ್ತೇನೆ. ಹಾಗೆ ಮಾಡುವುದು ಒಳ್ಳೆಯದು.

ಇನ್ನು ಕ್ಲಾಜ್ 41 ರ (ಸಿ) ಭಾಗದಲ್ಲಿ ಹೀಗೆ ಹೇಳಿದ್ದಾರೆ:

> "submission of a monthly return by an employer to the competent authority specifying the quantity of beedi tobacco released by the Central Excise Department and the number of beedies manufactured by him."

ಇದು ಬಹಳ ಗಹನವಾದ ವಿಚಾರ. 100 ಪೌಂಡ್ ಎಂದು ಸೆಂಟ್ರಲ್ ಎಕ್ಸೈಜಿನಿಂದ ರಿಲೀಜ ಮಾಡಿಸಿಕೊಂಡರೆ, ಅದರಲ್ಲಿ ಲೆಕ್ಕಕ್ಕೆ ಸಿಕ್ಕದ 50 ಪೌಂಡ್ ಹೆಚ್ಚಿಗೆ ಇರುತ್ತದೆ. ಇವರು ಇಂಥ ಒಂದು ವಾಮ ಮಾರ್ಗವನ್ನು ಹಿಡಿದಿದ್ದಾರೆ. ಆದುದರಿಂದ ಇದರ ಬಗ್ಗೆ ಇನ್ನೂ ಕ್ರೂರವಾದ ಶಿಕ್ಷೆಯನ್ನು ವಿಧಿಸಬೇಕಾಗಿತ್ತು ಎಂದು ಹೇಳುತ್ತೇನೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಸೆಂಟ್ರಲ್ ಎಕ್ಸೈಜ್ ಇನ್‌ಸ್ಪೆಕ್ಟರ್ ಇರುತ್ತಾರೆ. ಆದರೆ ಅವರು ಕೇಂದ್ರಕ್ಕೆ ಸಂಬಂಧಪಟ್ಟ ನೌಕರರು. ಆದುದರಿಂದ ಅವರು ನಮ್ಮ ಹಿಡಿತಕ್ಕೆ ಸಿಕ್ಕುವುದಿಲ್ಲ.

ನಮ್ಮಲ್ಲಿರುವ ಸೆಂಟ್ರಲ್ ಎಕ್ಸೈಜು ಇಲಾಖೆಗೆ ಸೇರಿದವರಿಗೆ ಯಾವ ಲೆಖ್ಖವನ್ನೂ ಒಬ್ಬರೂ ಕೊಡುತ್ತಿಲ್ಲ. ಸೆಕ್ಷನ್ನು 41 ರ (ಸಿ) ಕ್ಲಾಜಿನಲ್ಲಿ ಹೇಳಿರುವ ಹಾಗೆ ಲೆಕ್ಕಪತ್ರಗಳನ್ನೂ ಹೇಗೆ ಕೊಡ ಬೇಕು ಎನ್ನುವುದನ್ನೆಲ್ಲಾ ಸೆಲೆಕ್ಟು ಕಮಿಟಿಯವರು ಸ್ವಲ್ಪ ಆಲೋಚನೆ ಮಾಡಬೇಕು. ಏಕೆಂದರೆ 50 ಪೌಂಡಿನವರೆಗೆ ಲೆಕ್ಕವನ್ನೇ ಕೊಡುವುದಿಲ್ಲ. ನೂರು ಪೌಂಡು ಮೇಲಾದರೆ ಲೆಕ್ಕ ಮಾತ್ರ ಸಿಗು ತ್ತದೆ. ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು.

4-30 P.M.

ಇದರಲ್ಲಿ ಇನ್ನೊಂದು ಭಾಗದಲ್ಲಿ 14ವರ್ಷಗಳಿಗಿಂತ ಕಡಿಮೆ ವಯಸ್ಸಿನವರನ್ನು ಫ್ಯಾಕ್ಟರಿಗೆ ಸೇರಿಸಕೂಡದು ಎಂದು ಇದೆ. ಇದರಂತೆ 14ರಿಂದ 18ವರ್ಷ ವಯಸ್ಸಿನವರನ್ನೇ ನೇಮಕ ಮಾಡಿ

ಕೊಳ್ಳುವುದು ಎಂದರೆ ಕೆಳಮಟ್ಟದ ವಯಸ್ಸಿನವರಿಗೆ ಬೇರೆ ಎಲ್ಲಿ ಕೆಲಸವನ್ನು ಒದಗಿಸುತ್ತೀರಿ? ಇದು ಅವರ ಹೊಟ್ಟೆ ಬಟ್ಟೆಯ ಪ್ರಶ್ನೆ, ನನ್ನ ದೃಷ್ಟಿಯಲ್ಲಿ ಕಾರ್ಕಳ, ನಂಬರು 30 ಬೀಡಿ, ಗಣೇಶ ಬೀಡಿ ಹಾಗೂ ಪ್ರಭು ಬೀಡಿಗಳ ಫ್ಯಾಕ್ಟರಿಯ ದೃಷ್ಟಿ ಇಟ್ಟುಕೊಂಡು ತಮ್ಮಲ್ಲಿ ಹೇಳುತ್ತಿದ್ದೇನೆ. 14 ವರ್ಷಕ್ಕಿಂತ ಕೆಳಗಿರುವ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು ಅವರಿಗೆ ಶಕ್ತಿಯಿರುವುದಿಲ್ಲ. ಅಂತಹ ವರಿಗೆಲ್ಲ ಕೆಲಸವನ್ನು ಎಲ್ಲಿ ಒದಗಿಸಿ ಕೊಡುತ್ತೀರಿ? ಕಂಪಲ್ಸರಿ ಎಜುಕೇಷನ್ನು ಎಂದೇನೋ ಕೊಡು ತ್ತಿದ್ದೀರಿ, ಅದರ ಬಗ್ಗೆ ಯೋಚನೆ ಮಾಡುವಾಗ ಅನ್ ಎಂಪ್ಲಾಯ್‌ಮೆಂಟು ಪ್ರಾಬ್ಲಂನ್ನು ದೃಷ್ಟಿ ಯಲ್ಲಿಟ್ಟುಕೊಂಡು ಇದಕ್ಕೆ ಯಾವ ರೀತಿಯಾದ ಮೆಷಿನರಿ ಮಾಡುತ್ತೀರಿ? ಇದರ ಅರ್ಥ ನನಗೆ ಇಲ್ಲಿ ಗೊತ್ತಾಗಲಿಲ್ಲ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. 12-14 ವರ್ಷಗಳ ಕೆಳಗಿನ ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ ಯೋಚನೆ ಮಾಡಬೇಕು, ಇದು ಹಸಿವಿನ ಪ್ರಶ್ನೆ. ಇದಕ್ಕೋಸ್ಕರ ಸ್ವಲ್ಪ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಬೀಡಿ ಯನ್ನು ಪರದೇಶಕ್ಕೆ ಕಳುಹಿಸುವುದರ ಕಡೆಗೂ ತಾವು ಆದಷ್ಟು ಶ್ರಮಿಸಬೇಕು. ಮತ್ತು ಈ ಕೈ ಗಾರಿಕೆಗೆ ಇನ್ನು ಏನೇನು ಸವಲತ್ತುಗಳನ್ನು ಒದಗಿಸಿಕೊಡಬೇಕು ಎನ್ನುವುದರ ಬಗೆಗೆ ಸೆಲೆಕ್ಟು ಕಮಿಟಿಯವರು ಪರಿಶೀಲನೆ ಮಾಡಿ ಯಾವ ರೀತಿಯಾಗಿ ಇದನ್ನು ಜಾರಿಗೆ ತರಬಹುದು ಎನ್ನುವುದನ್ನು ಪರಿಶೀಲಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ದೇವ (ಗುಬ್ಬಿ).—ಸ್ವಾಮಿ, ಈ ಬಿಲ್ಲನ್ನು ಸರಿಪಡಿಸುವ ದೃಷ್ಟಿಯಿಂದ ನಾನು ಕೆಲವು ಸಲಹೆಗಳನ್ನು ಮಂತ್ರಿಗಳಿಗೆ ತಿಳಿಸಬೇಕೆಂದು ನಿಂತಿದ್ದೇನೆ.

> "It involves not only acceptance of time and application of modern technology, but far reaching changes in social customs and institutions."

ನನಗನಿಸುತ್ತಿರುವುದು ಇದುವರೆಗೆ ಪ್ಲಾನನ್ನು ಮಾಡುವಾಗ ಅದು ಎಲ್ಲಿಯವರೆಗೆ ಮಾಡಬೇಕು ಆದರಿಂದ ಯಾವ ರೀತಿಯ ಫಲ ದೊರಕುತ್ತದೆ ಎನ್ನುವುದನ್ನು ನೋಡಿಕೊಂಡು ಮಾಡಬೇಕು. ಆದರೆ ಮೂರನೆಯ ಪಂಚವಾರ್ಷಿಕ ಯೋಜನೆ ಬಂದಮೇಲೆ ಅನೇಕ ಬದಲಾವಣೆಗಳನ್ನು ಮಾಡಿ ಕೆಲವು ಇನ್‌ಸ್ಟಿಟ್ಯೂಷನ್ನುಗಳು ಬಂದಿವೆ ಎಂದು ನಾನು ಭಾವಿಸುತ್ತೇನೆ. ಇಲ್ಲಿ ನೋಡುವಾಗ ಬೀಡಿ ಕೈಗಾರಿಕೆಯಲ್ಲಿ ಕೆಲಸ ಮಾಡಲು ಬರುವ ಹೆಂಗಸರನ್ನು ಸೆಲೆಕ್ಷನ್ನು ಮಾಡಿ ಅದಕ್ಕೆ ಒಂದು ಕಮಿಟಿ ಮಾಡಿಕೊಂಡು ಅದರ ಮೂಲಕ ಹೆಂಗಸರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದರೆ ಅದು ಸರಿ ಕಾಣು ವುದಿಲ್ಲ. ಇಲ್ಲಿರುವ ಸೆಕ್ಷನ್ನು 29 (1) ರಲ್ಲಿ ಏನಿದೆ ಎಂದರೆ :

> "The Government may permit the wetting or cutting or wrapping leaves by women employees outside the beedi industrial premises on an application made by the employees."

ಇಲ್ಲೆಲ್ಲಾ ಕಂಟ್ರಾಕ್ಟರುಗಳ ಸಿಸ್ಟಂ ಇದೆ. ಇದನ್ನೆಲ್ಲಾ ತಪ್ಪಿಸುವುದಕ್ಕಾಗಿ ಇದರಲ್ಲಿ ಹೇಳಿರು ವಂತೆ ಮಾಡಿದರೆ ಇದರ ಮೂಲ ಧ್ಯೇಯಕ್ಕೇನೇ ವಿರೋಧವಾಗುತ್ತದೆ. ಇದೂ ಅಲ್ಲದೇ ಈ ಬೀಡಿಗೆ ಜಾಸ್ತಿ ಬಂಡವಾಳ ಬೇಕಾಗುವುದಿಲ್ಲ. ಇದಕ್ಕೆ ಸರಕಾರ ಬಂಡವಾಳ ಹಾಕಿಕೊಂಡು, ಇದನ್ನು ಸಹ ಕಾರ ತತ್ವದ ಮೇಲೆ ನಡೆಸಿಕೊಂಡು ಹೋಗುವುದು ಎಂದರೆ ಇಲ್ಲದೇ ಇದ್ದ ತೊಂದರೆಗಳನ್ನು ಸರಕಾರ ವಹಿಸಬೇಕಾಗಿ ಬರುತ್ತದೆ. ಅಲ್ಲದೆ ಇದರ ಕೆಲಸಗಳನ್ನು outside the premises ನಲ್ಲಿ ಮಾಡಬೇಕೆಂದು ಇದರಲ್ಲಿ ಹೇಳಿರುವುದು ಸರಿಯಾಗುವುದಿಲ್ಲ ಎಂದು ನಾನು ಹೇಳಬೇಕಾಗಿದೆ.

Mr. SPEAKER.—Does the Hon'ble Member want a model factory to be started by Government?

Sri V. M. DEO.—Yes. In licensing new industrial units or sanctioning extension of the existing units there must be considerable proportion between the public sector and private sector...ಪ್ರೈವೇಟ್ ಸೆಕ್ಟರು ಮತ್ತು ಪಬ್ಲಿಕ್ ಸೆಕ್ಟರು ಎಂದಿರುವುದನ್ನು ಎರಡೂ ಸಮನ್ವಯ ಮಾಡಿಕೊಂಡು ಹೋಗಬೇಕು.

Mr. SPEAKER.—Is there any public sector in Beedi Industry?

Sri V. M. DEO.—No Sir, you can create it. ಪಬ್ಲಿಕ್ಕು ಸೆಕ್ಟರ್ ಬಂದಾಗ ಇವೆಲ್ಲಾ ಸರಿಹೋಗುತ್ತದೆ ಎನ್ನುವುದು ನನ್ನ ವಾದ. ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಏನು ಉದ್ದೇಶಗಳಿವೆಯೋ ಅದರಂತೆ spirit of planning will be implemented. You

(SRI M. V. DEO)

will be enmeshed in a number of laws. ಹೀಗೆ ಹತ್ತಾರು ಕಾನೂನುಗಳು ಆಗಿ ಇಲ್ಲದೇ ಇರುವ ಅನಾನುಕೂಲಗಳು ಆಗಲು ಕಾರಣವಾಗುತ್ತಿದೆ. ಇದನ್ನು ಯಾವ ರೀತಿಯಾಗಿ ವಿಚಾರ ಮಾಡಬೇಕು ಎನ್ನುವುದನ್ನು ಯೋಚನೆ ಮಾಡಬೇಕು. Government-*cum*-small beedi workers themselves—Invest some money in it and start it. ಆ ರೀತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗಿರುವಂತೆ ಮಾಡಿದರೆ ಇದರಲ್ಲಿರುವ ಪ್ರಾವಿಷನ್ಸ್‌ಗಳು ಕೂಲಿಗಾರರಿಗೆ ಅನುಕೂಲವಾಗದ ಹಾಗೆ ಮಾಡಿದ್ದಾರೆ. ಇದನ್ನು ಅನುಕೂಲವಾಗುವ ಹಾಗೆ ವಿಚಾರ ಮಾಡಬೇಕಾಗಿದೆ. ಇದನ್ನೆಲ್ಲಾ ಸೆಲೆಕ್ಟ್ ಕಮಿಟಿಯಲ್ಲಿ ಸರಿಯಾಗಿ ಯೋಚನೆ ಮಾಡಿ ಇದನ್ನು ಹೇಗೆ ಜಾರಿಗೆ ಕೊಡಬೇಕು ಎನ್ನುವುದರ ಕಡೆಗೆ ಯೋಚನೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri RAJAGOPAL (K. G. F.).—Are you suggesting Public sector or Co-oprative Societies ?

Sri V. M. DEO.—Take Mandya Sugar Factory—51 per cent was contributed by Government and the rest was contributed by people.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಸರಕಾರದವರು ಈ ಸಭೆಯ ಮುಂದೆ ಮಂಡಿಸಿರುವ ಈ ಬೀಡಿ ಕೈಗಾರಿಕೆಗೆ ಸಂಬಂಧಪಟ್ಟ ಮಸೂದೆಯನ್ನು ನಾನು ಸ್ವಾಗತಿಸುತ್ತಾ, ಕೆಲವು ಸಲಹೆಗಳನ್ನು ಕೊಡಬೇಕು ಎಂದಿದ್ದೇನೆ.

ಈ ಬೀಡಿ ಕೈಗಾರಿಕೆಯಲ್ಲಿ ತೊಡಗಿರತಕ್ಕಂಥ ಕಾರ್ಮಿಕರಿಗೆ ಈಗ ಇರತಕ್ಕಂಥ ಕಾರ್ಮಿಕ ರಕ್ಷಣೆ ಕಾನೂನುಗಳು ಏನಿವೆ ಅವು ಅನೇಕಸಲ ಅನ್ವಯವಾಗುವುದಿಲ್ಲ ಅಥವಾ ಅವುಗಳ ಲಾಭವನ್ನು ಈ ಕಾರ್ಮಿಕರು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಕಾರಣ, ಪ್ರತ್ಯೇಕವಾಗಿ ಒಂದು ಕಾನೂನನ್ನು ರಚಿಸಬೇಕಾಗಿದೆ ಎನ್ನುವ ಉದ್ದೇಶವನ್ನು ಅವರು ಮಸೂದೆಯ ಉದ್ದೇಶ ಮತ್ತು ಕಾರಣಗಳಲ್ಲಿ ತಿಳಿಸಿದ್ದಾರೆ.

ಈ ಬೀಡಿ ಕೈಗಾರಿಕೆಯಂತೆಯೆ ಅಗರಬತ್ತಿ ಕೈಗಾರಿಕೆ ಕೂಡ ಇದೆ. ಹಾಗೇ ಶಿವಕಾಶಿಯಲ್ಲಿ ನೋಡಿದರೆ ಅಲ್ಲಿ ಬೆಂಕಿಪಟ್ಟಣ ಕೈಗಾರಿಕೆ ಕೂಡ ಫ್ಯಾಕ್ಟರಿಯಿಂದ ಹೊರಗಡೆ ಇದ್ದು ಅಲ್ಲಿಕೂಡ ಮನೆ ಮನೆಯಲ್ಲಿ ಮಾಡತಕ್ಕಂಥ ಒಂದು ವ್ಯವಸ್ಥೆ ಆಗಿದೆ. ಒಂದು ದೃಷ್ಟಿಯಿಂದ ಈ ಕೈಗಾರಿಕೆಯನ್ನು ಗೃಹ ಕೈಗಾರಿಕೆ ಎಂದು ಕರೆಯಬಹುದು. ಗೃಹ ಕೈಗಾರಿಕೆಗಳನ್ನು ಕೆಲಸಮಾಡತಕ್ಕಂಥವನು ತನ್ನ ಸ್ವಂತ ಬಂಡವಾಳದಿಂದ ಮಾಡುತ್ತಾ ಇರಲಿ ಅಥವಾ ಬೇರೆ ಯಾರಿಂದಲಾದರೂ ಬಂಡವಾಳ ಪಡೆದು ಮಾಡುತ್ತಾ ಇರಲಿ, ಅಂಥ ಕೆಲವು ಕೆಲಸಗಳನ್ನು ನಿಯಂತ್ರಿಸುವುದಕ್ಕೆ ಅನುಕೂಲವಾಗತಕ್ಕಂಥ ಕಾನೂನುಗಳು ಇನ್ನೂ ನಮ್ಮಲ್ಲಿ ಬಂದಿಲ್ಲ; ಕಾರಣವೇನೆಂದರೆ ಕಾನೂನುಗಳನ್ನು ನಾವು ಮಾಡಬಹುದು, ಆದರೆ ಆ ಕಾನೂನನ್ನು, ಅದರ ಉದ್ದೇಶ ಮತ್ತು ಅದರಲ್ಲಿ ಬರೆದಿರತಕ್ಕಂಥದ್ದನ್ನು ಕಾರ್ಯಗತ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಇವತ್ತು ನಾವು ಕೃಷಿ ಕೂಲಿಗಾರರಿಗೆ ಒಂದು ಕನಿಷ್ಠ ಸಂಬಳ (ಮಿನಿಮಮ್ ವೇಜಸ್) ಕೊಡಬೇಕು ಎಂದು ನಾವು ಒಂದು ಕಾನೂನನ್ನು ಮಾಡಿದ್ದೇವೆ. ಅದನ್ನು ಜಾರಿಗೆ ಕೊಡುವಂಥ ಒಂದು ಪ್ರಯತ್ನ ಕೆಲವು ಕಡೆಗಳಲ್ಲಿ ಇಲಾಖೆಯವರು ಮಾಡಿದ್ದರೂ ಅದನ್ನು ಪೂರ್ತಿ ಜಾರಿಗೆ ತರುವುದಕ್ಕೆ ಆಗುತ್ತಾ ಇಲ್ಲ. ಕಾರಣ ಏನೆಂದು ನಾವು ವಿಚಾರ ಮಾಡಿದರೆ ಈಗ ಸಮಾಜದಲ್ಲಿ ನಿರುದ್ಯೋಗ ದಿನೇ ದಿನೇ ಹೆಚ್ಚುತ್ತಾ ಇದೆ. ಜೊತೆಗೆ ಅವಶ್ಯಕ ವಸ್ತುಗಳ ಬೆಲೆ ಏರುತ್ತಾ ಇದೆ, ಜನಸಂಖ್ಯೆ ಬೆಳೆಯುತ್ತಾ ಇದೆ. ಸಮಾಜದ ಆರ್ಥಿಕ ಪರಿಸ್ಥಿತಿ, ಆಹಾರ ಧಾನ್ಯಗಳ ಬೆಲೆ ಏರುತ್ತಿರುವುದು, ಜನಸಂಖ್ಯೆ ಒಂದೇ ಸಮನೆ ಏರುತ್ತಾ ಇರುವುದು—ಈ ಮೂರನ್ನೂ ಗಣನೆಗೆ ತೆಗೆದುಕೊಂಡರೆ, ಕೈಗಾರಿಕೆಗಳ ಅಭಿವೃದ್ಧಿಯ ಒಂದು ವೇಗ ಮತ್ತು ನಮ್ಮ ದೇಶದ ಜನರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗುತ್ತಾ ಇರತಕ್ಕಂಥ ಪ್ರಮಾಣ ಮತ್ತು ಪರದೇಶಗಳ ಜೊತೆಯಲ್ಲಿ ಸ್ಪರ್ಧೆ ಮಾಡುವ ನಮ್ಮ ಶಕ್ತಿ—ಗಣನೆಗೆ ತೆಗೆದುಕೊಂಡರೆ, ಒಂದೊಂದು ಸಲ ಅನಿಸುತ್ತದೆ—ನ್ಯಾಯವಾದ ಉದ್ಯೋಗವನ್ನು ಕಲ್ಪಿಸಿಕೊಡದೆ ಇರತಕ್ಕಂಥ ಸರಕಾರಕ್ಕೆ, ಇಂಥ ಉದ್ಯೋಗ ಕೊಟ್ಟು, ಇಷ್ಟೆ ಸಂಬಳ ಕೊಟ್ಟು, ಇಷ್ಟೇ ಕಾಲ ದುಡಿಸಿಕೊಳ್ಳಬೇಕು ಅನ್ನತಕ್ಕಂಥ ಹಕ್ಕು ಕೊಡುವುದು ಎಲ್ಲಿ ಬರುತ್ತದೆ, ಎಂಬ ಪ್ರಶ್ನೆ ಏಳುತ್ತದೆ. ಯಾರಿಗೆ ಉದ್ಯೋಗ ಕೊಡಲಿಲ್ಲವೋ ಅವರು ಇಷ್ಟಪಟ್ಟ ಉದ್ಯೋಗವಿಲ್ಲದಿದ್ದರೆ, ಇನ್ನೊಂದು ಉದ್ಯೋಗ ಕೊಡುತ್ತೇವೆ, ಅದಕ್ಕಿಂತ ಉತ್ತಮ ಕೆಲಸಮಾಡುವ ವಾತಾವರಣವನ್ನು ಕಲ್ಪಿಸಿಕೊಡುತ್ತೇವೆ, ಅದಕ್ಕಿಂತ ಒಳ್ಳೆಯ ಪರಿಸ್ಥಿತಿಯನ್ನು ನಿರ್ಮಾಣಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಶ್ರೀ ದೇವರಾಜ ಅರಸರು ಕೊಡುವುದಕ್ಕೆ ಸಾಧ್ಯವಿದೆಯೆ ಎಂದು ನಾವು ಪ್ರಶ್ನೆ ಮಾಡಿದರೆ, ಬೆಳಿಗ್ಗೆ ತಾವೆಲ್ಲರೂ ಸೇರಿ

ಹೇಳಿದಿರಿ : ''ನಾವು ಡಿಪ್ಲೊಮ ಮಾಡಿದವರಿಗೆಲ್ಲಾ ಕೆಲಸ ಕೊಡುವುದಕ್ಕೆ ಸಿದ್ಧರಿದ್ದೇವೆಂದು ಹೇಳುವುದಕ್ಕೆ ತಯಾರಿಲ್ಲ'' ಎಂದು. ಆರ್ಥಿಕ ಮಂತ್ರಿಗಳು, ಕಾರ್ಮಿಕ ಮಂತ್ರಿಗಳು—ವಿದ್ಯಾಭ್ಯಾಸದ ಮಂತ್ರಿಗಳು ಒಬ್ಬರು ಇರಲಿಲ್ಲ, ಎಲ್ಲ ಹಾಗೆ ಹೇಳಿದರು.

ಶ್ರೀ ಡಿ. ದೇವರಾಜ ಅರಸು.—ಆ ರೀತಿ ಹೇಳಲಿಲ್ಲ. ಅದು ನಿಮ್ಮ ಊಹೆ.

ಶ್ರೀ ಎಸ್. ಗೋಪಾಲ ಗೌಡ.—ಊಹೆ ಅಲ್ಲ, ತಮ್ಮ ಹೇಳಿಕೆಗಳಿಂದ ಆ ಅಭಿಪ್ರಾಯ ವ್ಯಕ್ತಪಟ್ಟಿತು.

ಮತ್ತೆ ಲೇಬರ್ ಎಕ್ಸ್‌ಚೇಂಜ್ ಕೂಡ ಏನು ಮಾಡುತ್ತಿದೆ ? ಕೆಲಸ ಬೇಡಿ ನಿಮಗೆ ಅರ್ಜಿ ಹಾಕುತ್ತಾರೆ, ಅವರು ಅವರ ಹೆಸರುಗಳನ್ನು ಪಟ್ಟಿ ಮಾಡುತ್ತಾರೆ. ಬೇರೆ ಯಾರಾದರೂ ಇಂಥ ಕೆಟಗರಿಯ ಇಷ್ಟು ಹೆಸರನ್ನು ಕಳುಹಿಸಿ ಎಂದು ಕೇಳಿದರೆ ಕಳುಹಿಸತಕ್ಕಂಥಾದ್ದು, ಅಷ್ಟು ಮಾಡುತ್ತಾರೆ. ಅವನಿಗೆ ಉದ್ಯೋಗ ದೊರೆಯಿತೊ ಇಲ್ಲವೊ ಎನ್ನುವುದನ್ನು ನೋಡುವುದಿಲ್ಲ; ಅದು ನಮ್ಮ ಕನ್‌ಸರ್ನ್ ಅಲ್ಲ, ನಮಗೆ ಸಂಬಂಧವಿಲ್ಲ, ಆ ಜವಾಬ್ದಾರಿಯನ್ನು ಹೊತ್ತುಕೊಂಡಿಲ್ಲ ಅನ್ನುವ ಮಾತನ್ನು ಸರಕಾರದವರು ಹೇಳಿದರು. ಯೋಜನೆಯನ್ನು ಹಾಕಿಕೊಂಡು, ಅದಕ್ಕೆ ಬದ್ಧವಾದ ಕೈಗಾರಿಕೆಗಳನ್ನು, ಕೃಷಿಯನ್ನು, ನಮ್ಮ ಜನಜೀವನವನ್ನು ಯೋಜನಾಬದ್ಧವಾಗಿ ಪ್ರಗತಿಯ ಹಾದಿಯಲ್ಲಿ ಕೊಂಡೊಯ್ಯುವ ಜವಾಬ್ದಾರಿ, ಸರಕಾರದ್ದು. ಸಂದರ್ಭಗಳು ಬಂದಾಗಲೇ ಹಂಗನ್ನು ಹರಿಸಿಕೊಳ್ಳುವುದಾದರೆ, ಆವಾಗ ಜನರಿಗೆ ಗತ್ಯಂತರವಿಲ್ಲದೆ, ಎಷ್ಟೇ ಕೆಟ್ಟ ಪರಿಸ್ಥಿತಿಯಿರಲಿ, ಅಲ್ಲಿ ಹೊಟ್ಟೆ ಒತ್ತಡವನ್ನು, ಹಸಿವನ್ನು ಇಂಗಿಸಿಕೊಳ್ಳಲು ದುಡಿಯಲೇಬೇಕಾಗುತ್ತದೆ. ಇದನ್ನು ಮಾನ್ಯ ಕಾರ್ಮಿಕ ಸಚಿವರು ಗಮನಿಸುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ವಸ್ತು ಸ್ಥಿತಿ ಏನು ಅನ್ನುವುದು ಬಹಳ ಮುಖ್ಯ. ಏಕೆ ಬಡ ಕಾರ್ಮಿಕರು ಇಂಥ ಕೆಟ್ಟ ವಾತಾವರಣದಲ್ಲಿಯೂ, ಗೊತ್ತಾದ ಕಾಲಕ್ಕಿಂತ ಹೆಚ್ಚು ಕಾಲ ದುಡಿಯುತ್ತಾರೆ, ಗೊತ್ತಾಗಿರತಕ್ಕಂಥ ಒಂದು ಕನಿಷ್ಠ ಮಿತಿ ಸಂಬಳಕ್ಕಿಂತ ಕಡಮೆ ಸಂಬಳವನ್ನು ಪಡೆಯುತ್ತಾರೆ, ಎನ್ನುವುದು ಈ ಪರಿಸ್ಥಿತಿಯ ವಿವರಣೆಯಿಂದ ದೊರೆಯುತ್ತದೆ. ಈ ಪರಿಸ್ಥಿತಿಯ ಒತ್ತಡದಿಂದ ಮದ್ರಾಸಿನ ಒಂದು ಮೂಲೆಯಿಂದ ಶರಾವತಿಯ ಮೂಲೆಗೆ ಬಂದು ಒಬ್ಬ ಹೆಣ್ಣುಮಗಳು ದುಡಿಯುತ್ತಾಳೆ, ಆ ಹೆಣ್ಣು ಮಗಳು ಇನ್ನೂ ಹಡೆದು 2 ತಿಂಗಳು ಆಗುವುದಕ್ಕೆ ಮುಂಚೆ ಮಣ್ಣು ಹೊರುವುದಕ್ಕೆ ಬರುತ್ತಾಳೆ. ಮಗುವನ್ನು ಕಲ್ಲು ಮೇಲೋ, ಮರದ ಸಂದಿಯಲ್ಲಿಯೊ ಬಿಟ್ಟು ಶರಾವತಿಗೆ ಮಣ್ಣು ಹೊರುವುದಕ್ಕೆ ಏಕೆ ಬರುತ್ತಾಳೆ? ಪರಿಸ್ಥಿತಿಯ ಒತ್ತಡದಿಂದ—ತಾನು ಹುಟ್ಟಿದ ಊರು, ಬಂಧು ಬಳಗ ಬಿಟ್ಟು ದಿವಸಕ್ಕೆ ಒಂದು ಒಂದೂವರೆ ರೂಪಾಯಿ ಕೂಲಿಗೆ ದುಡಿಯುವುದಕ್ಕಾಗಿ ಎನ್ನುವುದನ್ನು ತಾವು ಗಮನಿಸಬೇಕಾಗಿದೆ.

ನಾವು ಇವೊತ್ತು ಪಾಣಿ ಮಂಗಳೂರಿಗೆ ಹೋಗಿ ನೋಡಿದರೆ, ಗುಲ್ಬರ್ಗ, ಧಾರವಾಡ, ಹುಬ್ಬಳ್ಳಿಗಳಲ್ಲಿ ನೋಡಿದರೆ, ಸಿರಾದಲ್ಲಿ ನೋಡಿದರೆ, ಅಥವಾ ಬೀಡಿ ಕೈಗಾರಿಕೆಗಳು ಹೆಚ್ಚಾಗಿರುವ ಯಾವುದೇ ಊರಿನಲ್ಲಿ ನೋಡಿದರೆ ಈ ಪರಿಸ್ಥಿತಿಯನ್ನು ನಾವು ಗಮನಿಸಬಹುದು. ತೀರ್ಥಹಳ್ಳಿಯಲ್ಲಿಯೂ ಒಂದು ಬೀಡಿ ಫ್ಯಾಕ್ಟರಿಇದೆ, ಮೂರನೇ ನಂಬರ್ ಬೀಡಿ ಎಂದು. ಮೊದಲು ಈ ಕಾನೂನುಗಳೆಲ್ಲ ಬರುವುದಕ್ಕೆ ಮುಂಚೆ ಅವರೂ ಕೂಡ ಸೂಪರ್‌ವಿಷನ್ ದೃಷ್ಟಿಯಿಂದ ಒಳ್ಳೆಯದಾಗುತ್ತದೆಂದು ಸಾಧ್ಯವಾದ ಮಟ್ಟಿಗೂ ಒಂದು ಹಾಲಿನಲ್ಲಿ ಸ್ಥಳಮಾಡಿ ಎಲ್ಲರೂ ಅಲ್ಲಿ ಕುಳಿತುಕೊಂಡು ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದರು. ಈ ಕಾನೂನು ಬಂದ ಮೇಲೆ, ಕನಿಷ್ಟ ಕೂಲಿ, ಕಾಲದ ಮಿತಿ, ರಿಜಿಸ್ಟರುಗಳನ್ನು ಇಡುವುದು, ಅಧಿಕಾರಿಗಳು ಕೇಳತಕ್ಕ ಸಮಜಾಯಿಷಿಯನ್ನು ಕೊಡುವುದು, ಇವನ್ನೆಲ್ಲ ಮಾಡುತ್ತ ಹೋದರೆ ನಮ್ಮ ಬಂಡವಾಳ ಕರಗುತ್ತದೆಂದೂ, ನಮಗೆ ಲಾಭ ದೊರೆಯುವುದಿಲ್ಲವೆಂದೂ ಈ ಹೊಸ ಮಾರ್ಗವನ್ನು ಮಾಲೀಕರು ಹುಡಿಕಿದರು. ಒಂದು ಊರಿನಲ್ಲಿ ಒಬ್ಬ ಬೀಡಿ ಫ್ಯಾಕ್ಟರಿಯ ಮಾಲಿಕನಿದ್ದರೆ, ವಾಸ್ತವವಾಗಿ ಅವನು ಏನು ಮಾಡುತ್ತಾನೆಂದರೆ ಆ ಊರಿನಲ್ಲಿ ಎಷ್ಟು ಜನ ಈ ಉದ್ಯೋಗವನ್ನು ಕೈ ಕೊಳ್ಳುವುದಕ್ಕೆ ತಯಾರಿದ್ದಾರೆಂದು ತಿಳಿದುಕೊಂಡು ಅವರಿಗೆ ಎಷ್ಟು ಬೇಕೊ ಅಷ್ಟು ತಂಬಾಕು ಹಂಚುತ್ತಾನೆ, ಅದಕ್ಕೆ ಬೇಕಾದ ಎಲೆ ಹಂಚುತ್ತಾನೆ, ದಾರ ಕೊಡುತ್ತಾನೆ. ಅವರು ಅದನ್ನು ಮನೆಗೆ ತೆಗೆದುಕೊಂಡು ಹೋಗಿ ರಾತ್ರಿ ಹಗಲು ಕಟ್ಟುತ್ತಾರೆ. ಅದರಿಂದ ಕೂಲಿ ಎಂಟಾಣೆ, ಹತ್ತಾಣೆ, ಹದಿನಾಲ್ಕಾಣೆ, ಒಂದು ರೂಪಾಯಿ ಹೀಗೆ ಒಬ್ಬನು ದುಡಿಯಬಹುದು. ಅದೂ ಯಂತ್ರದಂತೆ ಕೆಲಸ ಮಾಡಿದರೆ. ಒಂದು ಸೆಕೆಂಡಿಗೆ ಒಂದು ಬೀಡಿ ಕಟ್ಟಬಹುದು ಎಂದು ಯೋಚನೆ ಮಾಡಿದ್ದರೆ, ಒಬ್ಬ ಒಂದು ಸಾವಿರ ಬೀಡಿ ಕಟ್ಟುತ್ತಾನೆಂದರೆ ಯಂತ್ರದಂತೆ ಕೆಲಸ ಮಾಡಬೇಕು. ಹೆಂಗಸರು ಮತ್ತು ಮಕ್ಕಳು ಅಷ್ಟೊ ಕಟ್ಟುವುದಕ್ಕೆ ಸಾಧ್ಯವಿಲ್ಲ. ಬೀಡಿಗಳ ವ್ಯಾಪಾರದಲ್ಲಿ ಅವರ ಖರ್ಚೆಲ್ಲ ಹೋಗಿ ತಂಬಾಕಿನ ಮೇಲೆ ಹಾಕಿರತಕ್ಕ excise duty, ಎಲೆಗಳ ಮೇಲೆ ಹಾಕಿರತಕ್ಕ ಡ್ಯೂಟಿ, ಇವನ್ನೆಲ್ಲ ಕೊಟ್ಟು ಅವನಿಗೆ ಎಷ್ಟು ಲಾಭ ಉಳಿಯುತ್ತದೆ ಎನ್ನುವುದೂ ಒಂದು ಪ್ರಶ್ನೆ ಬರುತ್ತದೆ. ಮಾರ್ಕೆಟ್ಟಿನಲ್ಲಿ ಬೀಡಿ ಕೊಳ್ಳತಕ್ಕವರೆಲ್ಲ ದಿವಸಕ್ಕೆ ಮೂರಾಣೆ ಸಂಪಾದನೆ ಮಾಡಿ ಜೀವನ ಮಾಡುವವರು, ತೀರ ಕೆಳಮಟ್ಟದಲ್ಲಿ ಜೀವನ

(ಶ್ರೀ ಎಸ್. ಗೋಪಾಲಗೌಡ)

ಮಾಡತಕ್ಕ, subsistance ಅಥವಾ existence level ಎಂದು ಏನು ಹೇಳುತ್ತೇವೆ, ಬದುಕುವ ಜೀವನವಲ್ಲ, ಸಾಯುವುದರ ಬದಲು ಬದುಕಿರುವುದು, ಇಂಥ ಜನ ಏನಿದ್ದಾರೆ ಅವರು ಬೀಡಿ ಕೊಳ್ಳುತ್ತಾರೆ, ಸೇವನೆ ಮಾಡುತ್ತಾರೆ. ತೀರ ಬಡವರು, ಮುಸಲ್ಮಾನರ ಹೆಣ್ಣು ಮಕ್ಕಳು, ಬೇರೆ ಏನೂ ಕೆಲಸ ದೊರಯದೆ ಇರತಕ್ಕ ಗಂಡಸರೂ, ಮಕ್ಕಳೂ, ಇವರು ಬೀಡಿ ಉದ್ಯೋಗಳಲ್ಲಿ ತೊಡಗಿದ್ದಾರೆ. ಎಂಟು ಗಂಟೆ ಕೆಲಸ ಮಾಡಬೇಕು ಎಂದರೆ, ಎಂಟು ಗಂಟೆಗೆ 600 ಬೀಡಿ ಕಟ್ಟುತ್ತಾನೆಂದರೆ ಎಷ್ಟು ಸಂಬಳ ಕೊಡುತ್ತೀ ಎಂದರೆ ಎಷ್ಟೂ ಕೊಡುವುದಕ್ಕಾಗುವುದಿಲ್ಲವೆಂದು ಹೇಳತ್ತಾನೆ. ತನಗೆ ಲಾಭ ಬರುವುದಿಲ್ಲವೆನ್ನುತ್ತಾನೆ. ಈ ಕೆಲವು ವಿಶೇಷ ಅಂಶಗಳನ್ನೂ ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇದು ತೀರ ಕೆಟ್ಟ ಪರಿಸ್ಥಿತಿ ಎಂದು ಹೇಳಬಹುದು. ಈ ಕಾರಣದಿಂದಲೇ ಈ ಪರಿಸ್ಥಿತಿಯನ್ನು ನಾನು ಸ್ವಲ್ಪ ವಿವರಿಸಿ ಹೇಳುವುದಕ್ಕೆ ಇಷ್ಟಪಟ್ಟೆ. ಕಾನೂನನ್ನೂ ಮಾಡಿದರೂ ಹೀಗೆಯೇ ಇದು ನಡೆಯತಕ್ಕದ್ದು, ತಪ್ಪಿದರೆ ಶಿಕ್ಷೆಯಾಗುತ್ತದೆಂದು ಹೇಳುವ ಮಾತು ಸರಿ, ಕಾನೂನನ್ನು ಪರಿಪಾಲನೆ ಮಾಡುವುದು, ಅದರಂತೆ ನಡೆದುಕೊಂಡು ಹೋಗುವುದು, ನಡೆದುಕೊಂಡು ಹೋಗುವುದಕ್ಕೆ ಪರಿಪಾಲನೆ ಮಾಡುವುದಕ್ಕೆ ಅಗತ್ಯವಾಗಿ ಬೇಕಾದ ಸನ್ನಿವೇಶಗಳು, ಮತ್ತು ಅವಶ್ಯ ಸಾಮುಗ್ರಿಗಳೂ ನಮ್ಮಲ್ಲವೆಯೇ ಎನ್ನತಕ್ಕದ್ದು ಬಹಳ ಮುಖ್ಯವಾದ ಪ್ರಶ್ನೆ. ಆ ಕಾರಣದಿಂದ ಇವೊತ್ತು ಈ ಬೀಡಿ ಕೈಗಾರಿಕೆಯಲ್ಲಿ ಕೆಲವರು ಕಾನೂನು ಬಾಹಿರರಾಗಿ, ಮತ್ತು ಅನುಚಿತವಾದ ಲಾಭಗಳನ್ನೂ ಗಳಿಸಿ, ಹೆಚ್ಚು ಲಾಭವನ್ನೂ ಪಡೆಯತಕ್ಕ ಮಾಲೀಕರೂ ಇದ್ದಾರೆಂದು ಇಟ್ಟು ಕೊಂಡರೂ ಬಹಳಷ್ಟು ಜನರು ಜೀವನೋಪಾಯಕ್ಕೇ ಗತ್ಯಂತರವಿಲ್ಲದೆ, ಈ ಉದ್ಯಮವನ್ನೂ ಅವಲಂಬಿಸಿಕೊಂಡು ಜೀವನ ಮಾಡುವುದಕ್ಕೆ ಮನೆಯಲ್ಲಿ ಅದನ್ನು ಮಾಡಿಕೊಂಡು ಹೋಗುತ್ತಿದ್ದಾರೆ.

ಗೃಹ ಕೈಗಾರಿಕೆಗಳನ್ನೂ, ತನ್ನ ಮನೆಯಲ್ಲಿ ತನ್ನ ಸ್ವಂತ ಬಂಡವಾಳದಿಂದ, ಅಥವಾ ಬೇರೆಯವರು ಕೊಡತಕ್ಕ ಬಂಡವಾಳದಿಂದ, ಕೆಲಸ ಮಾಡಿ ಆ ಕೈಗಾರಿಕೆಯಿಂದ ಜೀವನ ಮಾಡತಕ್ಕವನನ್ನೂ ನಿಯಂತ್ರಿಸತಕ್ಕ ಕಾನೂನು ಇನ್ನು ಬರುವುದಕ್ಕೆ ಸಾಧ್ಯವಾಗಿಲ್ಲವೆಂದು ನಾನು ಹೇಳಬಹುದಾಗಿದೆ. ಅಗರ ಬತ್ತಿಯ ಪರಿಸ್ಥಿತಿಯೂ ಹಾಗೆಯೇ ಇದೆ. ಅದು ಒಂದು ದೃಷ್ಟಿಯಲ್ಲಿ ಬೀಡಿ ಕೈಗಾರಿಕೆಗಿಂತ ಕೆಟ್ಟ ಪರಿಣಾಮವನ್ನುಂಟು ಮಾಡತಕ್ಕದ್ದು. ಅದರಲ್ಲಿ ಸುವಾಸನೆಯ ವಸ್ತುಗಳು ಮತ್ತು ಇತರ ವಸ್ತುಗಳು ಸೇರುತ್ತವೆ. ನೇರವಾಗಿ ನಮ್ಮ ಶರೀರವನ್ನು ಹಾಳು ಮಾಡತಕ್ಕ ವಸ್ತುಗಳು ಅದರಲ್ಲಿರುತ್ತವೆ. ಅಗರಬತ್ತಿ ಕೈಗಾರಿಕೆಯಲ್ಲಿಯೂ ಹೆಚ್ಚು ಜನ ಹೆಣ್ಣು ಮಕ್ಕಳು ಕೆಲಸ ಮಾಡುತ್ತಾರೆ. ಅದನ್ನು ಒಳ್ಳೆಯ ಸ್ಥಿತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಇಂಥ ಒಂದು ಮಸೂದೆಯನ್ನು ತರಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ಸಲಹೆಯನ್ನು ನಾನು ಮಾಡ ಬಯಸುತ್ತೇನೆ. ಸರ್ಕಾರದ ಸ್ಥಿತಿ, ಕಾನೂನುಗಳ ಸ್ಥಿತಿ ಏನು ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಯಾವ ಕೆಲಸವನ್ನು ಮಾಡಬೇಕು ಎಂದು ಹೇಳಿದರೂ ಈಗ ಅವರು ಹಣದ ಅಭಾವವನ್ನು ದೇಶದ ಮುಂದೆ ಇಡುತ್ತಿದ್ದಾರೆ. ಈ ಹಣದ ಅಭಾವದ ಹಿನ್ನೆಲೆಯಲ್ಲಿ ತುರ್ತು ಪರಿಸ್ಥಿತಿ ಮುಂದೆ ಬರುತ್ತದೆ. ಈ ಎರಡು ಕಾರಣಗಳೇನಿವೆ, ಇವು ಜನಜೀವನದ ಮೇಲೂ ಘೋರವಾದ ಪರಿಣಾಮವನ್ನುಂಟು ಮಾಡಿವೆ. ಇಂಥ ಸಂದರ್ಭಗಳಲ್ಲಿ ಈ ವಿಧೇಯಕಗಳನ್ನು ತಂದು ಕಾನೂನಿನ ಕಡತಕ್ಕೆ ಏರಿಸುವುದು ಎಷ್ಟು ಮುಖ್ಯವೋ ಅದಕ್ಕಿಂತ ಹೆಚ್ಚಾಗಿ ಇವೊತ್ತು ಈ ಸ್ಥಿತಿಯಲ್ಲಿ ಈ ಕೈಗಾರಿಕೆಯನ್ನು ಅವಲಂಬಿಸಿ ಕೊಂಡಿರತಕ್ಕ ಜನರಿಗೆ ನೀವು ಈ ಕಾನೂನುಗಳಲ್ಲಿ ಒದಗಿಸತಕ್ಕ ಸೌಲಭ್ಯಗಳಿಗೆ ಬದಲಾಗಿ ಇನ್ನೇನಾದರೂ ಸೌಕರ್ಯಗಳನ್ನೂ ಕಲ್ಪಿಸಿ ಕೊಡಬಹುದೇ ಎನ್ನುವುದನ್ನು ಇದನ್ನು ಈ ಸಂದರ್ಭದಲ್ಲಿ ವಿಚಾರ ಮಾಡಬೇಕು ಎನ್ನುವುದು ಮಾನ್ಯ ಕಾರ್ಮಿಕ ಮಂತ್ರಿಗಳಲ್ಲಿ ನನ್ನ ವಿನಂತಿ. ಈ ಕೈಗಾರಿಕೆಯನ್ನು ಸಹಕಾರ ಪದ್ಧತಿಯ ಮೇಲೆ ನಡೆಸಿಕೊಂಡು ಹೋಗಬಹುದು. ಸರ್ಕಾರ ನೇರವಾಗಿ ಈ ಕೈಗಾರಿಕೆಗೆ ಯಾವೊಂದು ಜವಾಬ್ದಾರಿಯನ್ನು ಹೊತ್ತುಕೊಳ್ಳದೆ ಯಾವ ಯಾವ ಊರುಗಳಲ್ಲಿ ಈ ಬೀಡಿ ಉದ್ಯಮದಲ್ಲಿ ತೊಡಗಿರತಕ್ಕ ಜನರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆಯೋ ಅಲ್ಲಿ ಹತ್ತು ಜನರಿಗಿಂತ ಹೆಚ್ಚಾಗಿ ಅಥವಾ 25-50 ಜನರಿಗಿಂತ ಹೆಚ್ಚಾಗಿದ್ದಾರೆ, ಅವರಿಗೆ ಸುಲಭ ದರದಲ್ಲಿ ಅಥವಾ ಒಂದು ಖಚಿತವಾದ ದರದಲ್ಲಿ ಎಲೆ, ತಂಬಾಕು ಮತ್ತು ಅದಕ್ಕೆ ಬೇಕಾದ ಇನ್ನಿತರ ಸಾಮಾನುಗಳನ್ನೂ ಒದಗಿಸಿ ಅವರು ಕಟ್ಟತಕ್ಕ ಬೀಡಿಗಳನ್ನು ಮಾರಾಟ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಿ ಅದರ ಮೂಲಕ ಅವರಿಗೆ ಸಹಾಯ ನೀಡಬಹುದು ಎಂದು ನನ್ನಗನಿಸುತ್ತದೆ. ಇದನ್ನು ಪ್ರತ್ಯೇಕವಾಗಿ ಸರ್ಕಾರ ಪರಿಶೀಲನೆ ಮಾಡುವುದು ಕೂಡ ಈ ದುಸ್ಥಿತಿಯಲ್ಲಿ ಬಹಳ ಅತ್ಯಗತ್ಯವೆಂದೆನ್ನಿಸುತ್ತದೆ.

ದಿನಕ್ಕೆ ಎಂಟು ಗಂಟೆ ಕಾಲ ಕೆಲಸ ಮಾಡಬೇಕೆಂದು ಪ್ರಪಂಚದಲ್ಲಿ ಎಲ್ಲರೂ ಒಪ್ಪಿರತಕ್ಕ ಕಾನೂನು, ಯಾವ ಕಾನೂನಿನಲ್ಲಿಯಾದರೂ ಇರತಕ್ಕದ್ದು ಇದೇ ರೀತಿಯಾಗಿ. ಈಗ ನಮ್ಮ ಮುಂದಿರುವ ಕಾನೂನಿನಲ್ಲಿ ದಿನಕ್ಕೆ ಹತ್ತು ಗಂಟೆಯು ತನಕ ಕೆಲಸ ಮಾಡಬಹುದು, ವಾರಕ್ಕೆ 54 ಗಂಟೆ ಕೂಡ ಕೆಲಸ ಮಾಡಬಹುದು ಎಂದು ಇದೆ. ನಿಜವಾಗಿಯೂ ಪರಿಸ್ಥಿತಿ ಹೇಗಿದೆ ಎಂದರೆ ಸರಿಯಾಗಿ 14 ಗಂಟೆ ಕೆಲಸ ಮಾಡಿದರೂ ಅವರಿಗೆ ವೇಜಸ್ ಸಿಕ್ಕುವುದಿಲ್ಲ. ಒಬ್ಬ ಕೆಲಸಗಾರನು ಸಾಧಾರಣವಾಗಿ ಒಂದು ವಾರಕ್ಕೆ 48 ಗಂಟೆ ಕೆಲಸ ಮಾಡ ಬೇಕಾಗುತ್ತದೆ. ಅದಕ್ಕೂ ಹೆಚ್ಚು ಕಾಲ ಕೆಲಸ ಮಾಡಿದರೆ ಓವರ್ ಟೈಂ ವರ್ಕ್ ಆಗುವುದರಿಂದ ಹೆಚ್ಚಿಗೆ ಕೊಡಬೇಕಾಗುತ್ತದೆ. ಆದರೆ ಬೀಡಿ ಕೆಲಸಗಾರರು ಹತ್ತು ಗಂಟೆ ಹೆಚ್ಚು ಕೆಲಸ ಮಾಡಿದರೂ ಅವರಿಗೆ ನ್ಯಾಯವಾಗಿ ದೊರೆಯಬೇಕಾದ ವೇತನ ದೊರೆಯುವುದಿಲ್ಲ.

5-00 P.M.

ಶ್ರೀ ಡಿ. ದೇವರಾಜ ಅರಸ್.—ಅನೇಕ ಕಡೆ ಈ ರೀತಿ ಇದೆ. ಎಲ್ಲಿ ಓವರ್-ಟೈಂ ಕೆಲಸ ಮಾಡುತ್ತಾರೆಯೋ ಅಲ್ಲಿ ಹೆಚ್ಚಿಗೆ ವೇತನ ಕೊಡಬೇಕಾಗುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ಇದನ್ನು ನಿಯಂತ್ರಣ ಮಾಡುವುದು ಕಷ್ಟವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಒಂದು ದಿವಸಕ್ಕೆ ಎಂಟು ಗಂಟೆ ಕೆಲಸ ಮಾಡಿದರೆ ಹೊಟ್ಟೆ ತುಂಬುವಷ್ಟು ಕೂಲಿ ಪಡೆದುಕೊಳ್ಳುತ್ತಾರೆಯೇ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಈ ಕೆಲಸ ಕೈ ಚಳಕದ ಮೇಲೆ ಸಹ ಹೋಗುತ್ತದೆ. ಒಂದು ಗೆರೆ ಹಾಕಿ ಇದನ್ನು ಕಡ್ಡಾಯವಾಗಿ ಮಾಡಲು ಸಾಧ್ಯವಿದೆ ಎಂದು ನಾನು ಭಾವಿಸುವುದಿಲ್ಲ.

ಲೈಸೆನ್ಸ್ ತೆಗೆದು ಕೊಳ್ಳಬೇಕಾಗುತ್ತದೆ ಎಂದು ಮಸೂದೆಯಲ್ಲಿ ಹೇಳಿದೆ. ಆದರೆ ಈ ಕೆಲಸ ಮಾಡುವ ಜನರು ಎಲೆ ತಂಬಾಕು ತಂದು ಮನೆಯಲ್ಲಿಯೇ ಕುಳಿತು ಬೀಡಿ ತಯಾರು ಮಾಡಿ ಮಾರಾಟ ಮಾಡುತ್ತಾರೆ. ಇಂಥ ಸಂದರ್ಭಗಳಲ್ಲಿ ಲೈಸನ್ಸ್ ತೆಗೆದುಕೊಳ್ಳಬೇಕು ಎಂಬ ಬಲಾತ್ಕಾರ ಮಾಡಿದರೆ ಕಷ್ಟವಾಗುತ್ತದೆ. ಮನೆಯಲ್ಲಿ ಕುಳಿತು ಕೆಲಸ ಮಾಡಿದರೆ ಇದೊಂದು ಗೃಹ ಕೈಗಾರಿಕೆಯಾಗುವುದರಿಂದ ಫ್ಯಾಕ್ಟರಿ ಕಾನೂನು ಅನ್ವಯಿಸುವುದಕ್ಕಾಗುವುದಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ತಪ್ಪಾಗುತ್ತದೆ. ಕಾನೂನು ಚೆನ್ನಾಗಿದೆ. ಆದರೆ ಕೆಲಸ ಮಾಡತಕ್ಕಂಥ ಸ್ಥಳದಲ್ಲಿ ವಾತಾವರಣ ಚೆನ್ನಾಗಿ ಇರಬೇಕು ನೀರಿನ ಸೌಕರ್ಯ ಇರಬೇಕು. ಮಕ್ಕಳನ್ನು ನೋಡಿ ಕೊಳ್ಳಲು ವ್ಯವಸ್ಥೆ ಇರಬೇಕು. ಸಾಮಾನ್ಯವಾಗಿ ಕಾನೂನಿನಲ್ಲಿ ಒದಗಿಸಿರುವ ಎಲ್ಲ ಅನುಕೂಲತೆ ಒದಗಿಸಿಕೊಡಬೇಕು. ಸಾಧಾರಣವಾಗಿ ಈ ಕಾನೂನನ್ನು ಯಾರೂ ವಿರೋಧಿಸುವುದಿಲ್ಲ. ಈ ಕಾನೂನನ್ನು ಕಾರ್ಯಗತ ಮಾಡತಕ್ಕಂಥಾದ್ದು ದೊಡ್ಡದು. ಇದರಲ್ಲಿ ತೊಡಕು ಇದೆ. ಇದನ್ನು ಕಾರ್ಯಗತ ಮಾಡಲು ಅಧಿಕಾರಿಗಳು ಮೃದುತನ ತೋರಿಸದೆ ನಿಷ್ಠೂರವಾಗಿ ಕಾರ್ಯಗತ ಮಾಡಿದರೆ ಕಠಿಣ ಸನ್ನಿವೇಶ ಉಂಟಾಗುತ್ತದೆ. ಆದ್ದರಿಂದ ಸಾಧ್ಯವಾದ ಮಟ್ಟಿಗೆ ಎಲ್ಲೆಲ್ಲಿ ಹತ್ತಾರು ಜನ ಸೇರಿ ಬೀಡಿ ಕೆಲಸ ಮಾಡುತ್ತಾರೆಯೋ ಅಂಥಲ್ಲಿ ಫ್ಯಾಕ್ಟರಿ ಆಕ್ಟ್, ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್, ಮಿನಿಮಂ ವೇಜೆಸ್ ಆಕ್ಟ್ ಪ್ರಕಾರ ಏನೇನು ಸೌಲಭ್ಯ ಒದಗಿಸಬೇಕೊ ಅವುಗಳನ್ನು ಕೊಡುವಂತೆ ಮಾಲೀಕರ ಮೇಲೆ ಒತ್ತಾಯ ತರಬೇಕು. ಎಂದರೆ ಕಾನೂನಿನ ಉದ್ದೇಶ ಸಫಲವಾಗುವುದು. ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗಿ ಬಂದು ಕಾನೂನು ಪಾಸಾಗಿ ನೋಟಿಫಿಕೇಷನ್ಸ್ ಹೊರಡಿಸಿ ನಿಯಮಗಳನ್ನು ತಯಾರಿಸುವುದಕ್ಕೆ ಇನ್ನೊಂದು ಚುನಾವಣೆಯ ಕಾಲ ಬಂದರೂ ಬರಬಹುದು. ಈ ಕಾರ್ಮಿಕರಲ್ಲಿ ಮಹಿಳೆಯರು ಹೆಚ್ಚಾಗಿ ಇದ್ದಾರೆ. ಅವರೆಲ್ಲರಿಗೂ ರಕ್ಷಣೆ ಕೊಟ್ಟು ಕಾಪಾಡಿ ಸಹಾಯ ಮಾಡುತ್ತಾರೆಂದು ಆಶಿಸಿ ನಾನು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

Sri S. RAJAGOPAL.—Mr. Speaker, Sir, regarding this Bill, several Members already have expressed their opinion, and there is very less chance for me to quote any important aspects of this Bill. I am happy, Sir, that the Hon'ble Minister for Labour, at least in his time, has brought this Bill before this Assembly; and in the same way I request him also to see, within his time, that this Bill is passed and implemented as early as possible, because there is a lot of talk going on even now that the Ministry is going to be cut down. While I am saying this, there may be some counter-charge also against me, because these Bills

(SRI S. RAJAGOPAL)

are not brought by individual Ministers. If it is so it may not be called as Jatti Ministry, Nijalingappa Ministry, Kamraj Ministry or Sanjeevareddy Ministry. There is no necessity to stress ? Individuals if it is Congress Ministry I am happy that the Hon'ble Minister has at least got up this Bill at this juncture. He knows the troubles of the workers so far faced by them. In this introduction speech he mentioned that in spite of the Governments of Madras and Kerala having passed this measure because we have not passed it earlier, they could not implement it in a satisfactory way keeping in view the troubles faced by the workers. I request the Hon'ble Minister again and again, to see if possible, that this Bill is passed during the present Session alone after referring to the Select Committee, and implement this at an early stage also.

The second thing is Sir, the Hon'ble Minister mentioned that several difficulties also would crop up while implementation took place. Hon'ble Members suggested several difficulties that we are facing under other Acts and Rules while they are put into force; the Minimum Wages Act is there, unfortunately, the people concerned are not getting the proper benefit out of it. In this age, particularly even organised workers are lacking very much, in places like Kerala, Madras, Bombay and Calcutta, already there is law in this behalf and it is already implemented, but they are not able to utilise the provisions for their benefit because a lot of sabotage is coming in. There is a lot of rivalries between unions, suppression by the employers, suppression by some other parties. We are not able to utilise the benefits of the laws in existence in a full measure. We are having a small number of organised workers. We cannot understand why even the facilities created by the Government could not be utilised by the workers. As you say, the condition of the beedi workers is horrible and they are spread over in the villages and in houses, they are manufacturing beedies. Even though there are various laws, we are not able to utilise many of them in a proper manner. So, I request the Labour Minister to see how best he can use all the provisions of the Bill in the best interests of the beedi workers in the implementation of the legislation, because the machinery that we have is inefficient and inadequate. I think the Labour Minister also will accept it. In the Labour Department, we are having a good Labour Minister. I do not know whether he has been able to advance the cause of the labourers to the extent we expected. Implementating authorities are very very necessary. No doubt, the Labour Commissioner, Assistant Labour Commissioner, Labour Officers and Inspectors are there, but they are not giving effect to the laws in the manner expected. They are not fulfilling all the expectations raised in this behalf. In that respect there are Acts and Rules which have already been implemented, but they should have implemented them in a proper manner. In the same way we hope that this Bill relating to beedi workers will not suffer from defective implementation, but will be implemented in a proper manner so as to bring the expected relief to the

beedi workers. I do trust that the Labour Minister will keep in mind these points at least and help the poor beedi workers to derive the full benefits that are contemplated under the present Bill.

With this, I request the Labour Minister to have this legislation passed in this very session so that the beedi workers get the much-needed relief as early as possible. Thank you.

Sri G. V. GOWDA (Palya).—Mr. Speaker, Sir, by the introduction of this Bill, one thing is certain. The machinery of the Government which is entrusted with the implementation of the labour laws has failed and I must express my thanks to the Hon'ble Minister who has conceded that point in the statement of Objects and Reasons. He says, "it has become very difficult to estabish that there is employer-employee relationship between the proprietors of Beedi factories and their workers. As such it has been found impracticable to enforce labour laws". I do not know why it was not possible for this machinery to enforce these labour laws already on the statute book. You say that by implementing certain provisions of the existing enactments, much of the interests of the beedi workers could have been safeguarded. If a factory were to be found working on a permises which is dirty, if a factory were functioning in premises which is not suitable.........

Sri D. DEVARAJ URS.—My Hon'ble friend is a lawyer and knows all these things, still he is arguing in this fashion. I cannot understand. It is not possible to enforce the Factory Act. As I said big factories are being broken up into small establishment to escape the penalty of law. That is what they have been doing so far.

Sri G. V. GOWDA.—I know Sir, I am only saying whether the Govermental machinery is working. If for instance a factory owner for the purpose of escaping from the clutches of law breaks his business and opens small branches, should not the machinery pursue and go after the said person and bring him to book as soon as possible within the frame work of the existing law ?

Sri D. DEVARAJ URS.—How to do it ? Under what Law ?

Sri G. V. GOWDA.—It is possible, Sir. If that is so, what guarantee is there that the interests of the workers would be safeguarded even under this Bill ? What I mean is, adequate steps should have been taken under the existing enactments. I am not opposing this Bill. It is worth the while if the provisions of this measure are implemented and if the workers get their amenities. From that point of view, the machinery that is now entrusted with the task of enforcing the labour laws must have evinced keener interest, and must have the same zeal and enthusiasm that the Government has in securing the best interest of the beedi workers. Government's intentions are quite good, but sometimes they cannot be translated into action on account of the defect in the machinery that has to implement the measures. And unless the intentions are properly translated into action, there is no use making so many enactments and keeping them on the Statute Books. As a matter of fact the successful functioning of democracy in a Welfare State depends upon the proper implementation of the enactments that are

(SRI G. V. GOWDA)

passed in the Legislature. As we have been seeing, the more the number of enactments that we pass, it gives rise to more corruption, because if we do not really implement or translate the intentions of the Government, it gives rise to corruption. Therefore, I am submitting to the Hon'ble Minister enthusiastic as he is, that at least after these enactments are passed, the Government see that the provisions are properly enforced, and that the intention of this House is translated into action with the clear view of safeguarding the interest of the workers. I have also seen many of the premises where this manufacture of beedi is going on. There is no proper ventilation, it is not clean, it is not suitable for human beings to stay there at all. Such places are found there. It is, therefore, very necessary to safeguard the interests of workers who are working in an unhealthy surrounding. Provision has been made here to see that licences will not be given to carry on these activities in such unhealthy premises.

There are many other provisions included in this Bill in order to secure the interests of the workers. Unless, the inspecting authorities take the law in the proper spirit and implement it, there is no use. So, the test of these laws is in the implementation of it. Then only it is worthwhile enacting the law and the Hon'ble Minister can have the satisfaction that he has done something worthwhile for the sake of these poor workers.

Sir, it is said that a competent authority would issue licence. We do not know who might be appointed as the competent authority. If you can see the memorandum regarding delegated legislation, there are 41 clauses and if we remove clauses 40 and 41, there will be only 39 clauses; out of this, 13 clauses are there providing for delegated power. 13 clauses empower the State Government to take power in their hands.

I do not think that it is desirable to have so much authority delegated to the executive when an enactment is made. Then, Sir, in a family, father and his sons engage themselves in the manufacture of beedi and whether they would also come within the purview of this Act is a point to be examined. If I engage myself in this work with my family and not employ anybody else, should I also obtain a license, is the point. Here, there is no question of employer and employee. So, I suggest that in such cases we should not insist on obtaining licence. This enactment is only to safeguard the interests of the workers in the industry in a factory. It is to see that the premises in which this industry is carried on is licenced. But, if the members of a family, in their spare time, engage themselves in manufacturing beedi in their houses, they should not be subjected to the provision of obtaining license and all these conditions.

SRI D. DEVARAJ URS.—There is clause 40.

SRI G. V. GOWDA.—But you should not make a person go to the authority and prove that he has not employed any body and so he must be given exemption. There is the Inspector to watch and he may find

out the fact. Sir, we are seeing so many people living in slums. What has the Government done to to them ? If some poor man and his family do this work in their house, why should they be subjected to all these conditions ? So, this provision should not be made applicable in such cases.

ಶ್ರೀ ಆರ್. ಎಸ್. ಲಕ್ಷ್ಮೀಪತಿ (ಗೌರಿಬಿದನೂರು).—ಹೊಗೆಸೊಪ್ಪು ಸೆಂಟ್ರಲ್ ಎಕ್ಸೈಜ್ ಬಾಬಿಗೆ ಸೇರಿದ್ದು. ಇದನ್ನು ಕೇವಲ ಬೀಡಿ ಸುತ್ತುವುದಕ್ಕೇ ಅಲ್ಲದೆ, ಬೇರೆ ರೂಪದಲ್ಲೂ ಉಪಯೋಗಿಸುತ್ತಾರೆ. ಯಾರಲ್ಲೇ ಇದು ಇದ್ದರೂ ಅವರು ಇದರ ಬಗ್ಗೆ ಲೆಕ್ಕ ಇಡಬೇಕೆಂಬ ಕಾನೂನಿದೆ. ರಹದಾರಿಯಿಲ್ಲದೆ-ಬೇರೆ ಕಡೆಗೆ ಸಾಗಿಸುವಂತಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಸ್ವಲ್ಪ ದೂರದೃಷ್ಟಿಯಿಂದ ವರ್ತಿಸುವುದೊಳ್ಳೆಯದು.

Sri G. V. GOWDA.—Sub-clause (2) of Clause 10 provides that the owner must provide 150 cubic feet of space for each worker. This comes to 5 feet by 5 feet per employee. I think this is on the high side and may prevent a more number of employees from being put to work and it may thus affect the industry. So also there is a provision that for every 50 workers there must be a first-aid kit manned by a trained man. I think it would be enough if one trained man is provided for a factory. The minimum wages to which the workers are entitled are not stated here. So also, unless an employee works for 240 days he is not entitled to leave. The employers will somehow maneouvre to see that something less than 240 days is shown to deprive the employees of their legitimate leave. I suggest that leave should be given on a proportionate or slab basis. Otherwise it would lead to exploitation.

5-30 P.M.

The terms about notice of dismissal should be liberalised and a resonable opportunity should be given to the worker if he has put in a certain period of service. It is also stated that the Central enactments will cease to be effective once this Bill becomes law. But I submit that if certain advantages accrue to the workers they should be protected. About the powers of exemption to be vested in Government, this provision is unwarranted and is likely to be misapplied. It may be that as long as good persons like the present Labour Minister are there, things may go alright but this cannot be guarantee and there is a likeihood of abuse. Hence that exemption should be removed.

I would also request that delegated legislation should be minimised and the provisions liberalised. The various original and appellate authorities should be mentioned in the Bill itself. I expect much from the Select Committee and I hope this would emerge as a pucca legislation.

ಶ್ರೀ ಡಿ. ದೇವರಾಜಅರಸ್.—ಸ್ವಾಮೀ, ಈಗ ಮಾತನಾಡಿದಂತಹ ಎಲ್ಲ ಮಾನ್ಯ ಸ್ನೇಹಿತರೂ, ಒಬ್ಬರು ವಿನಾ ಈ ಮಸೂದೆಯನ್ನು ಸ್ವಾಗತಿಸಿದ್ದಾರೆ. ಅವರೂ ಕೂಡ ಕೆಲಸಗಾರರ ದೃಷ್ಟಿಯಿಂದ ಇದು ಬಹಳ ಅಗತ್ಯವಾಗಿ ಬರಬೇಕಾಗಿತ್ತು, ಆದರೂ ಸ್ವಲ್ಪ ನಿಧಾನವಾಗಿಯಾದರೂ ಈಗ ತಂದದ್ದು ಒಳ್ಳೆಯದು ಎಂದು ಹೇಳಿದ್ದಾರೆ. ಜೊತೆಗೆ ಕೆಲವು ಸಲಹೆಗಳನ್ನೂ ಕೊಟ್ಟಿದ್ದಾರೆ. ಇದನ್ನು ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡತಕ್ಕ ಕಾಲದಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದ್ದಾರೆ. ಒಬ್ಬ ಮಾನ್ಯ ಸದಸ್ಯರು ಮಾತ್ರ ಈ ಬಿಲ್ಲನ್ನು ಮೊದಲು ಸ್ವಾಗತಿ

(ಶ್ರೀ ಡಿ. ದೇವರಾಜ್ ಅರಸ್)

ಸಿದರು. ಶ್ರೀಮಾನ್ ಪರಮೇಶ್ವರಪ್ಪನವರು ಈ ರೀತಿ ಸ್ವಾಗತಿಸಿ ಆ ನಂತರದಲ್ಲಿ ಈ ಬಿಲ್ಲು ಬರುವ ಅಗತ್ಯವಿಲ್ಲ. ಅದರಿಂದ ಇದನ್ನು ವಾಪಸು ತೆಗೆದುಕೊಳ್ಳಬೇಕು ಎಂದು ಹೇಳಿದರು. ನಾನು ಮೊದಲು ಹೇಳಿದುದನ್ನು ಅವರು ಸರಿಯಾಗಿ ಕೇಳಿ ತಿಳಿದುಕೊಂಡಿದ್ದರೆ ಅವರೂ ಹೀಗೆ ಹೇಳುತ್ತಿರ ಲಿಲ್ಲ. ಈಗ ಇಲ್ಲಿರತಕ್ಕ ಫ್ಯಾಕ್ಟರಿಯ ಆಕ್ಟ್ ಅಪ್ಲಿಕಬಲ್ ಆಗದ ರೀತಿಯಲ್ಲಿ ಕೆಲವು ಮಾಲೀಕರುಗಳು ಕೆಲವು ಹೊಸ ವಿಧಾನಗಳನ್ನು ಕಂಡುಹಿಡಿದುಕೊಂಡು ಇದನ್ನು ಈಗ ಅಪ್ಲೈ ಮಾಡುವುದಕ್ಕೆ ಸಾಧ್ಯವಾಗದಂತೆ ಮಾಡುತ್ತಿದ್ದಾರೆ. ಅವರು ಫ್ಯಾಕ್ಟರಿಯ ಆಕ್ಟಿನ ಡೆಫನಿಷನ್ನನ್ನು ಸರಿಯಾಗಿ ಓದಿಲ್ಲ ಎಂದು ನಾನು ಭಾವಿಸುತ್ತೇನೆ. ಫ್ಯಾಕ್ಟರಿಯ ಡೆಫನಿಷನ್ನು ಏನು ಎನ್ನುವುದನ್ನೂ ಕೊಟ್ಟಿದ್ದಾರೆ.

> "Uuder the Factories Act 10 persons should work for the preceding 12 months with the aid of power. In the alternative 20 workers should be engaged in manufacturing process without the aid of power."

ಹೀಗೆ ಅವರು ಡೆಫನಿಷನ್ನಿನಲ್ಲಿ ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿ ಉಪಯೋಗಿಸಿದಾಗ್ಯೂ ಹತ್ತು ಜನಕ್ಕಿಂತಲೂ ಕಡಿಮೆಯಿಲ್ಲದೇ ಹೋದರೆ ಅದನ್ನು ಫ್ಯಾಕ್ಟರಿ ಎಂದು ಪರಿಗಣನೆ ಮಾಡುವಂತಿಲ್ಲ. ವಿದ್ಯುಚ್ಛಕ್ತಿ ಉಪಯೋಗ ಮಾಡದೇ ಬರೀ 20 ಜನರು ಸೇರಿಕೊಂಡು ಒಂದು ಫ್ಯಾಕ್ಟರಿ ನಡೆಸು ವಂತಿದ್ದರೆ ಅಂತಹವರು ಅದರ ವ್ಯಾಪ್ತಿಯಲ್ಲಿ ಬರಬಹುದು ಎನ್ನುವಂತೆ ಡೆಫಿನಿಷನ್ನು ಇರುವುದರಿಂದ ಇದರೊಳಗೆ ಬರುವ ಹಾಗಿಲ್ಲ. ಇದರಂತೆ 20 ಜನಕ್ಕೆ ಕಡಿಮೆ ಇರಬೇಕು ಎಂದು ಮಾಡಿರುವುದರಿಂದ ನಮ್ಮ ಮೈಸೂರು ದೇಶದಲ್ಲಿ ಬಹಳ ದೊಡ್ಡ ಮಾಲೀಕರುಗಳಾಗಿದ್ದರೂ ಬೀಡಿ ತಯಾರಿಕೆಯ ಉದ್ಯಮವನ್ನೆಲ್ಲಾ ಪೂರ್ತಿಯಾಗಿ ಸಣ್ಣ ಸಣ್ಣ ಮನೆಗಳೊಳಗೇ ಹಂಚಿಬಿಟ್ಟಿದ್ದಾರೆ. ಅವರು ಪ್ರತ್ಯೇಕವಾದ ಫ್ಯಾಕ್ಟರಿಗಳನ್ನು ಮಾಡಿಕೊಂಡು ನಡೆಸುವಂತಿಲ್ಲ. ಅದರಿಂದಾಗಿ ಈಗಿರುವ ಫ್ಯಾಕ್ಟರಿ ಆಕ್ಟ್ ಅವರುಗಳಿಗೆ ಅನ್ವಯಿಸುವಂತಿಲ್ಲ. ಇವರುಗಳು ಲಕ್ಷಾಂತರ ರೂಪಾಯಿಗಳಷ್ಟು ಆದಾಯವನ್ನು ಪಡೆಯುತ್ತಿದ್ದಾರೆ. ಇನ್‌ಕಂ-ಟ್ಯಾಕ್ಸನ್ನು ಕೊಡುತ್ತಿದ್ದಾರೆ. ಆದರೆ ಇವರುಗಳು ಈಗಿರುವ ಕಾನೂನಿನ ವ್ಯಾಪ್ತಿಯೊಳಗೆ ಬಾರದೇ ಇರುವುದರಿಂದ ಈ ಹೊಸ ಕಾನೂನನ್ನು ಮಾಡಿ ಇದರೊಳಗೆ ಅವರೆಲ್ಲ ಬರುವಂತೆ ಮಾಡಲಾಗಿದೆ. ಇದರಿಂದ ಮಾನ್ಯ ಸದಸ್ಯರು ಹೇಳುವ ವಾದದಲ್ಲಿ ತಿರುಳಿಲ್ಲ ಎಂದು ಹೇಳಬೇಕಾಗಿದೆ.

ಇನ್ನೊಬ್ಬರು ಮಾನ್ಯ ಸದಸ್ಯರು, ಪ್ರಾಯಶಃ ಶ್ರೀಮಾನ್ ಐಕಳರವರು ಎಂದು ಕಾಣುತ್ತದೆ. ಇದಕ್ಕೆ ಪ್ರತ್ಯೇಕವಾದ ಮೆಷಿನರಿಯನ್ನೇನಾದರೂ ತಯಾರು ಮಾಡಿದ್ದೀರಾ ಎಂದು ಕೇಳಿದರು. ಹಿಂದೆ ಶ್ರೀಮಾನ್ ವಿ. ವಿ. ಗಿರಿಯವರು ಕೇಂದ್ರ ಸರಕಾರದ ಮಂತ್ರಿಗಳಾಗಿದ್ದ ಕಾಲದಲ್ಲಿ ಈ ಪ್ರಶ್ನೆ ಬಂದಿತ್ತು. ನಮ್ಮ ಇಡೀ ಇಂಡಿಯಾ ದೇಶಕ್ಕಾಗಿ ಬೇಕಾಗುವ ಸುಮಾರು 15 ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ಮೆಷಿನರಿಗಳನ್ನು ತರಿಸಿಕೊಳ್ಳಬಹುದು ಎಂದು ಏರ್ಪಾಡಾಗಿತ್ತು. ಆದರೆ ಇದರ ನಿಖರವಾದ ಅಂಕಿ ಅಂಶಗಳು ಸರಿಯಾಗಿ ಆಗ ದೊರಕದೇ ಹೋದುದರಿಂದಲೂ ಇದನ್ನು ಹೇಗೆ ಮಾಡಬೇಕೆಂದು ಯೋಚನೆ ಮಾಡಿದಾಗ ಬೀಡಿ ಕೈಗಾರಿಕೆಗಾಗಿ ಪಡೆಯತಕ್ಕ ಈ ಮೆಷಿನರಿಗಳಿಗಾಗಿ ತಯಾರಾಗುವ ಖರ್ಚು ಹೆಚ್ಚಾದುದರಿಂದಲೂ ಮತ್ತು ಇದರ ಮೇಲೆ ತೆರಿಗೆ ಹೊರೆಯೂ ಹೆಚ್ಚಾಗಿ ಬೀಳುವುದರಿಂದಲೂ ಅದನ್ನು ಕೈಬಿಟ್ಟರು. ಇಂತಹ ಮೆಷಿನರಿ ಗಳನ್ನು ತಯಾರ್ ಮಾಡುವುದು ಅಸಾಧ್ಯ ಎಂದು ಆಗಲೇ ಕೈಬಿಟ್ಟುದರಿಂದ ಇದರ ಲೆಕ್ಕ ಇದನ್ನು ಮಾಡದೇ ಇರುವಂತೆ ಅದು ಬಿಟ್ಟು ಇರುವಂತಾಯಿತು, ಇದರಿಂದ ಕೂಲಿಗಾರರುಗಳಿಗೆ ಅನುಕೂಲ ವಾಯಿತು ಅಲ್ಲದೆ ಇದಕ್ಕೆ ಬೇಕಾಗುವ ಮೆಷಿನರಿಯನ್ನು ನಮ್ಮ ದೇಶದಲ್ಲಿಯೇ ತಯಾರು ಮಾಡಲು ಸಾಕಾದಷ್ಟು ಜನರು ಸಿಕ್ಕದೇ ಇರುವ ಸಮಸ್ಯೆ ಬಂತು, ಹಾಗೂ ನಿರುದ್ಯೋಗದ ಸಮಸ್ಯೆಯೂ ಹೆಚ್ಚುತ್ತ ಇರುವ ವಿಚಾರವೂ ಬಂತು.

ಇದೆಲ್ಲವನ್ನು ಗಣನೆಗೆ ತೆಗೆದುಕೊಂಡು ಮೆಷಿನರಿ ಉಪಯೋಗಿಸುವುದು ಸಾಧುವಲ್ಲವೆಂದು ನಮ್ಮ ಭಾವನೆ.

ಶ್ರೀ ಸಂಜೀವನಾಥ ಐಕಳ.—ಕೆಲವುಕಡೆ ಬೀಡಿಸೇದಬಾರದೆಂದು ನಿಷೇಧಿಸಿದ್ದೀರಿ. ಇನ್ನು ಮುಂದೆ ಬೀಡಿಸೇದುವುದನ್ನೇ ಪ್ರೊಹಿಬಿಟ್‌ಮಾಡಿ ನಿರುದ್ಯೋಗ ಕಲ್ಪಿಸುತ್ತೀರೋ !

ಶ್ರೀ ಡಿ. ದೇವರಾಜ ಅರಸ್.—ಒಂದಕ್ಕೊಂದಕ್ಕೆ ಕರ್ಫ್ಯೂಸ್ ಮಾಡಿಕೊಳ್ಳುತ್ತಾ ಇದ್ದೀರಿ 'ಅಸೆಂಬ್ಲಿ' ಹಾಲಿನಲ್ಲಿ ಬೀಡಿಸೇದಿ ಎಂದು ಹೇಳಬೇಕೆ ? ಸಿನಿಮಾ ಮಂದಿರಗಳು, ಬಸ್ಸುಗಳು ಇಂಥಾ ಕಡೆ ಇತರರಿಗೆ ತೊಂದರೆ, ಉಪದ್ರವವಾಗಬಾರದೆಂದು ಅದನ್ನು ನಿಲ್ಲಿಸಿದೆ ಎಲ್ಲಾ ಕಡೆ ಬೀಡಿ ಸೇದಬೇಕು ಅನ್ನುವುದು ಸಾಧುವಲ್ಲ ಅನ್ನುವುದನ್ನು ಒಪ್ಪತಕ್ಕ ಮಾತು.

ಸ್ವಾಮಿ, ಇನ್ನು ಒಂದು ಶಂಕೆಯನ್ನು ಮಾನ್ಯಸದಸ್ಯರನೇಕರು ವ್ಯಕ್ತಪಡಿಸಿದರು. ಅದೇನೆಂದರೆ ಈ ಮಸೂದೆ ಬರಬೇಕು, ಆದರೆ ನಿಧಾನವಾಗಿ ಬಂದಿದೆಯೆಂದು ಇದರಿಂದ ಕಾರ್ಮಿಕರ ಹಿತಸಾಧನೆ ಸ್ವಲ್ಪವಾಗುತ್ತದೆಂದು ಒಪ್ಪಿಕೊಂಡರು; ಆದರೆ ಇದನ್ನು ಜಾರಿಗೆ ತರುವುದರಲ್ಲಿ ನಿಧಾನಮಾಡದೆ ಹೋದರೆ ಎಲ್ಲರೂ ಸ್ವಾಗತಿಸುತ್ತೇವೆಂದು ಹೇಳಿದರು. ಈ ಸಂದರ್ಭದಲ್ಲಿ ನಾನು ಈ ಮಾನ್ಯ ಸಭೆಗೆ ಒಂದು ಭರವಸೆ ಕೊಡುತ್ತೇನೆ. ಈ ಸಭೆಯು ಈ ಸೆಷನ್ ಮುಗಿಯುವುದರೊಳಗಾಗಿ, ಸುಮಾರು 15ದಿವಸಗಳೊಳಗೆ ಸೆಲೆಕ್ಟ್ ಕಮಿಟಿಯ ವರದಿಯನ್ನು ಈ ಸಭೆಯಮುಂದೆ ಇಡುವುದಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಾಸ್ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಪಾಸ್ ಮಾಡುವುದು, ಬಿಡುವುದು ತಮ್ಮ ಕೈಯಲ್ಲಿ ಇರುತ್ತದಲ್ಲ. ಅಂಥ ಒಂದು ಭಯಬೇಕಾಗಿಲ್ಲ. ರೀಜನಬಲ್ ಟೈಮಿನಲ್ಲಿ ಇದು ಕಾನೂನು ಆಗುತ್ತದೆಂದು ಭಾವಿಸುತ್ತೇನೆ.

ಈಗ ಈ ಇಲಾಖೆಯಲ್ಲಿರತಕ್ಕಂಥ ಅನೇಕ ಕಾನೂನುಗಳನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರುತ್ತಾ ಇಲ್ಲವಾದ ಪ್ರಯುಕ್ತ, ಈ ಕಾನೂನು ಸಹ ಹಿಂದಿನ ಕಾನೂನುಗಳಂತೆ ಕಡತದಲ್ಲಿ ಉಳಿದು ಹೋಗುತ್ತದೆ. ಅಥವಾ ಸರಿಯಾದ ರೀತಿಯಲ್ಲಿ ಅಧಿಕಾರಿಗಳು ಜಾರಿಗೆ ತರುವ ಸ್ಥಿತಿಯಲ್ಲಿಲ್ಲ ಎಂಬ ಅಪಾದನೆಗಳನ್ನು ಮತ್ತು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಈ ವಿಷಯದ ಬಗ್ಗೆ ಮಾತನಾಡುವಾಗ ಈ ಮಾನ್ಯ ಸಭೆಯ ಗಮನಕ್ಕೆ—ಅವಗಾಹನೆಗೆ—ಒಂದು ಅಂಶವನ್ನು ತರಬೇಕಾದ್ದು ಅಗತ್ಯವೆಂದು ಕಾಣಿಸುತ್ತದೆ. ತಮಗೆ ಗೊತ್ತಿರುವ ಹಾಗೆ ಈ ಇಲಾಖೆ ಸರಕಾರದಲ್ಲಿ ಬಹಳ ಕೊನೆಯಲ್ಲಿ ಹುಟ್ಟಿದ ಶಿಶು. ಅಂದರೆ Labour Department as such ಕೊನೆಯದು. ಅದು ಒಂದು ಕಾಲದಲ್ಲಿರಲಿಲ್ಲ; ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಪ್ರತ್ಯೇಕವಾದ ಇಲಾಖೆಯಾಗಿ ಈಗಿರುವಂಥ ಒಬ್ಬ ದೊಡ್ಡ ಆಫೀಸರನ್ನು ಮುಖ್ಯಾಧಿಕಾರಿಯಾಗಿ ಹೊಂದಿರಲಿಲ್ಲ. ಆವಾಗ ಇದನ್ನು ಗ್ರಹಿಸಿ ಎಂದರೆ conceive ಮಾಡಿರಲಿಲ್ಲ. ಅದಕ್ಕೆ ದೇಶದ ಪರಿಸ್ಥಿತಿಯೇ ಕಾರಣ. ಕಾರ್ಮಿಕ ವರ್ಗದ ಅಭಿವೃದ್ಧಿ, ಕೈಗಾರಿಕೆ ಅಭಿವೃದ್ಧಿಯ ಜೊತೆಯಲ್ಲಿಯೇ ಸೇರಿಕೊಂಡಿತ್ತು. ಕಾರ್ಮಿಕರು ಹೆಚ್ಚುತ್ತಾ ಹೆಚುತ್ತಾ ಹೋದಹಾಗೆಲ್ಲಾ ಅವರಿಗೆ ಅಗತ್ಯವಾದ ಅನುಕೂಲಗಳನ್ನು ಒದಗಿಸುವುದು ಕಾನೂನು ರಕ್ಷಣೆಕೊಡುವುದು, ವಗೈರೆ ಯೋಚನೆಮಾಡುತ್ತಾ ಇದ್ದೇವೆ. ಆದ್ದರಿಂದ ಇದೂಕೂಡ ಬೆಳೆಯುತ್ತಾ ಇರತಕ್ಕಂಥಾ ಇಲಾಖೆ. ಆ ಮಾತನ್ನು ಹೇಳುವಾಗ ಒಂದೇ ಒಂದು ಉದಾಹರಣೆಯನ್ನು ಕೊಟ್ಟರೆ ನನ್ನ ಮಾತನ್ನು ಒಪ್ಪುತ್ತೀರ. ಸಂದರ್ಭಾನುಸಾರ ಇನ್‌ಸ್ಪೆಕ್ಟರೇಟನ್ನು, ಫ್ಯಾಕ್ಟರಿ ಇನ್‌ಸ್ಪೆಕ್ಟರುಗಳನ್ನು, ಹೆಚ್ಚಿಸಬೇಕು ಎಂದು ಸಲಹೆಬಂತು. ಆದರೆ ಅಡ್‌ವರ್ಟೈಸ್ ಮಾಡಿದರೆ ಅನೇಕ ಸಂದರ್ಭಗಳಲ್ಲಿ ಜನರು ಒದಗುತ್ತಾ ಇಲ್ಲ. ಸಿಬ್ಬಂದಿ ಜಾಸ್ತಿಮಾಡುವುದಕ್ಕೆ ಅದು ಒಂದು ಅಡ್ಡಿ ಬರುತ್ತಾ ಇದೆ. ಜನರು ಬಾರದೆಹೋದರೆ, ಈ ಹುದ್ದೆಗಳಿಗೆ ಉಮೇದುವಾರರನ್ನು ಆಕರ್ಷಿಸಲು ಹೆಚ್ಚುಸಂಬಳ ಕೊಡಬೇಕು, ಅದು ಇನ್ನೊಂದು ವಿಧಾನ. ಈಗ ಇಲಾಖೆಯ ಸಂಬಳ ಹೆಚ್ಚು ಮಾಡುವುದ ್ಕ ಬದಲು ನಾವು ಅನುಭವಕ್ಕೆ ಬಂದ ಹಾಗೆಲ್ಲಾ ಇಲಾಖೆಯ ಅಧಿಕಾರಿಗಳನ್ನು ಎಷ್ಟು ಮಾಡಬೇಕು, ಅವರ ದಕ್ಷತೆ ಹೇಗಿರಬೇಕು ಎಂಬುದರ ಬಗ್ಗೆ ಗಮನ ಕೊಡುತ್ತಿದ್ದೇವೆ. ಇದಕ್ಕೆ 1962-63ರ ಸಾಲಿನಲ್ಲಿ Industrial disputes (ಎಂದರೆ ಮಾಲೀಕರು ಮತ್ತು ಕಾರ್ಮಿಕರಿಗೆ ಉಂಟಾಗತಕ್ಕಂಥ ಜಗಳಗಳು) ಎಷ್ಟಿದ್ದವು, ಅವು ಯಾವ ಒಂದು ಪ್ರಮಾಣದಲ್ಲಿ ತೀರ್ಮಾನಕ್ಕೆ ಬರಲು ಸಾಧ್ಯವಾಗಿದೆ ಎಂಬ ಅಂಕಿ ಅಂಶಗಳನ್ನು ನೋಡಬೇಕಾಗಿದೆ. 1962ನೇ ಸಾಲಿನಲ್ಲಿ, ಪೆಂಡಿಂಗ್ ಕೇಸುಗಳು 184, ಆ ಸಾಲಿನಲ್ಲಿ ಬಂದದ್ದು ಸೇರಿ 592 ಆದವು, ಅದರಲ್ಲಿ 330 ಕೇಸುಗಳು ತೀರ್ಮಾನವಾದುವು, ಫೇಲ್ಯೂರ್ ಆದದ್ದು 288, ಹಿಂದಕ್ಕೆ ತೆಗೆದುಕೊಂಡದ್ದು 104, ಅಡ್‌ಜುಡಿಕೇಷನ್ನಿಗೆ ಹೋಗಿರತಕ್ಕಂಥದ್ದು 135. 1963ನೇ ಇಸವಿಯಲ್ಲಿ ಇದುವರೆಗೆ 54 ಕೇಸುಗಳು ಪೆಂಡಿಂಗ್ ಇವೆ. ಹೊಸದಾಗಿ ಬಂದವು 491 ತೀರ್ಮಾನವಾಗಿರತಕ್ಕಂಥವು; 238 ಹಿಂದಕ್ಕೆ ತೆಗೆದುಕೊಂಡಿರುವುದು 66 ಈಗ 63 ಪೆಂಡಿಂಗ್ ಕೇಸುಗಳಿವೆ. ಬಹಳ ಕಾರಣವಿದ್ದು ಯಾವುದಾದರೂ ಡಿಸ್‌ಪ್ಯೂಟನ್ನು ಅಡ್‌ಜುಡಿಕೇಶನ್ನಿಗೆ ಕಳುಹಿಸಬಾರದು ಎಂದು ಕಂಡರೆ, ರೆಫ್ಯೂಸ್ ಮಾಡುತ್ತೇವೆ. ಸರ್ವೇ ಸಾಧಾರಣವಾಗಿ ಕಾರ್ಮಿಕರ ಹಿತದೃಷ್ಟಿಯಿಂದ ಯಾವ ಕೇಸು ಫೆಲ್ಯೂರ್ ಆಗಿದೆ ಅದು ಅಡ್‌ಜುಡಿಕೇಶನ್ನಿಗೆ ಹೋಗಬೇಕು ಎಂದು ಹೇಳಿದರೆ ಅದಕ್ಕೆ ಅಡ್ಡಿಬರುತ್ತಾ ಇಲ್ಲ ಎಂಬುದನ್ನು ತಮ್ಮ ಅವಗಾಹನೆಗೆ ತರುತ್ತಿದ್ದೇನೆ.

(ಶ್ರೀ ಡಿ. ದೇವರಾಜ ಅರಸ್)

ಈಗಿರತಕ್ಕಂಥ ಇನ್‌ಸ್ಪೆಕ್ಟರೇಟ್ ಸಂಖ್ಯೆ ಸಾಲದು, ಅಥವಾ ಹಾಲಿ ಇರತಕ್ಕಂಥ ಕಾನೂನುಗಳನ್ನು ಜಾರಿಗೆ ತರುವುದರ ಜೊತೆಗೆ, ಈಗ ಹೊಸದಾಗಿ ಬರುವಂಥ ಈ ಕಾನೂನನ್ನು ಜಾರಿಗೆ ತರುವುದು ಸ್ವಲ್ಪ ಕಷ್ಟವಾದೀತು, ಅವರ ಕೆಲಸ ಜಾಸ್ತಿ ಆದೀತು ಎಂದು ಮಾನ್ಯಸದಸ್ಯರು ಈ ಮಸೂದೆ ಜಾರಿಗೆ ಕೊಡುವುದಕ್ಕೇ ಹೊಸ ಅಧಿಕಾರಿಗಳನ್ನು ನೇಮಕಮಾಡುವುದು ಸೂಕ್ತವಲ್ಲವೇ ಎಂದು ಕೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ತಮಗೆ ತಿಳಿಸುವುದೇನೆಂದರೆ ವಿನಾಕಾರಣ ಇನ್‌ಸ್ಪೆಕ್ಟರೇಟ್ ತಕ್ಷಣ ಹೆಚ್ಚಿಸುವ ಬದಲು ಹಾಲಿಇರುವ ಇನ್‌ಸ್ಪೆಕ್ಟರೇಟ್ ಮತ್ತು ಅವರ ಮೇಲ್ಪಟ್ಟ ಅಧಿಕಾರಿಗಳಿಗೆ, ಅಧಿಕಾರವಹಿಸಿ, ಕೆಲಸದ ಪ್ರಮಾಣವನ್ನು ಕೆಲವು ದಿವಸ ವೀಕ್ಷಿಸೋಣ, ತದನಂತರ; ನಮಗೆ ಅನುಭವ ಬಂದಹಾಗೆಲ್ಲಾ, ಹೆಚ್ಚು ಜನರು ಕೆಲಸ ನಿರ್ವಹಿಸುವುದಕ್ಕೆ ಬೇಕು ಎಂದು ಕಂಡರೆ, ಹೆಚ್ಚು ಜನರನ್ನು ನೇಮಿಸಿಕೊಳ್ಳುವುದಕ್ಕೆ ಪ್ರಯತ್ನಮಾಡೋಣ.

ಶ್ರೀಮಾನ್ ಗೋಪಾಲ ಗೌಡರು ಬೀಡಿ ಕೈಗಾರಿಕೆ ಕೆಲಸಗಾರರಿಗೆ ಅನ್ವಯುವಾಗುವಂಥ ಈ ಕಾನೂನು ಏನಿದೆ ಅದೇರೀತಿ ಊದುಬತ್ತಿ ಮತ್ತು ಬೆಂಕಿಪೊಟ್ಟಣ ತಯಾರುಮಾಡತಕ್ಕಂಥ ಉದ್ಯೋಗಗಳಲ್ಲಿ ಕೆಲಸಮಾಡತಕ್ಕವರಿಗೂ ಇದು ಅನ್ವಯವಾಗಬೇಕಾಗಿದೆ, ಆ ರೀತಿ ಒಂದು ಕಾನೂನು ತರುವುದು ಒಳ್ಳೆಯದು ಎಂದು ಸಲಹೆಕೊಟ್ಟಿದ್ದಾರೆ. ಇನ್ನೂ ಕೆಲವು ಮಾನ್ಯಸದಸ್ಯರುಗಳು ಬೇರೆ ಬೇರೆ ಸಲಹೆಗಳನ್ನು ಕೊಟ್ಟಿದ್ದಾರೆ. ನಶ್ಯ ಕೈಗಾರಿಕೆ ಈ ವಿಧೇಯಕದಲ್ಲಿ ಬರುವುದಕ್ಕೆ ಸಾಧ್ಯವೋ ಇಲ್ಲವೋ ಗೊತ್ತಿಲ್ಲ. ಎಲ್ಲ ವಿಷಯಗಳನ್ನೂ ಸೆಲೆಕ್ಟ್‌ಕಮಿಟಿಯವರು ಪರಿಶೀಲನೆ ಮಾಡುತ್ತಾರೆ. ಕೆಲಸಗಾರರ ಹಿತದೃಷ್ಟಿಯಿಂದ ಯಾವ ಕಾನೂನು ಅಗತ್ಯವೆಂದು ಒಪ್ಪುತ್ತೀರೋ ಅದನ್ನು ತಕ್ಷಣವೇ ತರುವುದಕ್ಕೆ ಪ್ರಯತ್ನಪಡೋಣ.

ಮತ್ತೆ ಅವರೇ ಹೇಳಿದ್ದಾರೆ; ವಸ್ತು ಸ್ಥಿತಿ ಏನಿದೆ ಅನ್ನುವುದನ್ನು ವಿವರಣೆ ಮಾಡಿದ್ದಾರೆ; ಒಂದುಕಡೆ ಉದ್ಯೋಗವಿಲ್ಲದೆ ಇರತಕ್ಕಂಥಾದ್ದು; ಈ ಕಡೆ ಕಾನೂನಿನಲ್ಲಿ ಕೆಲಸಕಾರ್ಯಗಳಿಗೆ ಬಗಿಯಾದ ಅಡಚಣೆ ತರತಕ್ಕಂಥಾದ್ದು ಹೆಂಗಸರು ಇಷ್ಟುಗಂಟೆಗಳ ಮೇಲೆ ಕೆಲಸಮಾಡಬಾರದು, ರಾತ್ರಿಕೆಲಸ ಮಾಡಬಾರದು, ಮಕ್ಕಳನ್ನು ಕಾರ್ಖಾನೆಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದು, 14ವರ್ಷದ ಕೆಳಗಿರುವವರನ್ನು ಉಪಯೋಗಿಸಬಾರದು ಮುಂತಾದ ನಿಷೇಧಗಳನ್ನು ಹಾಕುವುದು. ಅವರನ್ನು ನಾವು ಉಪಯೋಗಿಸದೆಹೋದರೆ, ಜನರಿಗೆ ಉದ್ಯೋಗ ದೊರೆಯದೆ ಹೋದರೆ ಏನುಮಾಡಬೇಕು ಎಂದು ಬಹಳವಾಗಿ ಹೇಳಿದ್ದಾರೆ. ನಿಜ 14ವರ್ಷಕ್ಕೆ ಒಳಪಟ್ಟ ಚಿಕ್ಕವಯಸ್ಸಿನವರನ್ನು ಕೆಲಸಕ್ಕೆ ನೇಮಕಮಾಡಬಾರದು ಎಂದು ಹೇಳುವಾಗ, ಅದರ ಹಿನ್ನೆಲೆ ಏನು ಎನ್ನುವುದು ತಮಗೆಗೊತ್ತಿದೆ, ಚಿಕ್ಕಮಕ್ಕಳನ್ನು ಈ ರೀತಿ ಕೆಲಸಕ್ಕೆ ಉಪಯೋಗ ಮಾಡಿದರೆ ಅಪಾಯ. ಆದ್ದರಿಂದ ಉಪಯೋಗಮಾಡಬಾರದು ಎನ್ನುವುದು ನಿಷೇಧದ ತಾತ್ಪರ್ಯ. ಇವೆರಡನ್ನೂ ಹೇಗೆ ಸರಿದೂಗಿಸಬೇಕೆಂದು ಹೇಳಲಿಲ್ಲ, ಇದು ಯೋಚನೆ ಮಾಡತಕ್ಕಂಥ ವಿಚಾರ. ಸರಿದೂಗಿಸುವುದು ಕಷ್ಟ. ಒಬ್ಬ ಬಡವ, ಕುಷ್ಟರೋಗದಿಂದ ನರಳುತ್ತಿರುತ್ತಾನೆ; ಅವನು ಸೂಯಿಸೈಡ್ ಮಾಡಿಕೊಳ್ಳಬಹುದು ಎಂದು ಹೇಳುವ ಯಾವ ಕಾನೂನು ಇದೆ. ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕಾನೂನು ಒಪ್ಪುವುದಿಲ್ಲ, ಧರ್ಮವೂ ಒಪ್ಪುವುದಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಆತ್ಮಹತ್ಯೆಗೆ ಅವಕಾಶವಿರಬೇಕು. ಮಾನ ಮರ್ಯಾದೆ ಎಲ್ಲ ಹೋಗಿ ಬದುಕಿರುವುದಕ್ಕಿಂತ ಆತ್ಮಹತ್ಯೆಗೆ ಅವಕಾಶವಿರುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಾನು ನನ್ನ ಸ್ನೇಹಿತರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅವರು ವಾದ ಮಾಡುತ್ತ ಪ್ರಪಂಚದ ಸೃಷ್ಟಿಯೇ ಸರಿಯಲ್ಲವೇನೋ, ನಾವು ಇರುವುದೇ ಸರಿಯಲ್ಲವೇನೋ ಎಂದು ಹೇಳುತ್ತಾರೆ. ಈಗ ಅವರು ಬ್ರಹ್ಮಚರ್ಯವನ್ನಾಚರಿಸುತ್ತಿದ್ದಾರೆ, ಸಂತೋಷ. ಅದಕ್ಕೆ ಅವಕಾಶವಿದೆ. ಆದರೆ ಆತ್ಮಹತ್ಯೆಗೆ ನಾನು ತಿಳಿದಮಟ್ಟಿಗೆ ಎಲ್ಲೂ ಅವಕಾಶವಿಲ್ಲ. ಗೋಪಾಲ ಗೌಡರ ಸರ್ಕಾರ ಬಂದು ಆತ್ಮಹತ್ಯೆಗೆ ಅವಕಾಶ ಮಾಡಿ ಕೊಡುವುದಾದರೆ ಸಂತೋಷ. ಆತ್ಮಹತ್ಯೆಗೆ ಕಾಂಗ್ರೆಸ್ ಸರ್ಕಾರದಲ್ಲಿ ಅವಕಾಶವೂ ಇಲ್ಲ, ಅದು ಸಾಧ್ಯವೂ ಇಲ್ಲ.

ಲೈಸೆನ್ಸ್ ಕೊಡುವ ಬಗ್ಗೆ ಕೆಲವು ಅಂಶಗಳನ್ನು ಶ್ರೀ ವೆಂಕಟೇಗೌಡರು ಮತ್ತು ಕೆಲವು ಸ್ನೇಹಿತರು ವ್ಯಕ್ತಪಡಿಸಿದ್ದಾರೆ. ಲೈಸೆನ್ಸ್ ಕೊಡುವಾಗ ಏನೇನೋ ನಿರ್ಬಂಧಗಳನ್ನು ಕಾನೂನಿನಲ್ಲಿ ಹಾಕಿದ್ದೀರಿ; ಕೇಳಿದವರಿಗೆಲ್ಲ ಏಕೆ ಕೊಡಬಾರದು, ಎಂದು ಕೇಳಿದರು. ಯಾವ ದೃಷ್ಟಿಯಿಂದ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇವೆನ್ನುವುದರ ಹಿನ್ನೆಲೆಯನ್ನು ಅರ್ಥಮಾಡಿಕೊಂಡರೆ ಈಗಿರತಕ್ಕದ್ದು ಸರಿಯಾಗಿದೆ ಎಂದು ತಾವು ಒಪ್ಪುತ್ತೀರಿ. ಈಗ ಮನೆಗಳಿಗೆ ಹೊಗೆಸೊಪ್ಪು ಮತ್ತು ಎಲೆಗಳನ್ನು ಕಳಿಸಿಕೊಡುತ್ತಿದ್ದಾರಲ್ಲ, ಅದರಿಂದ ನೀವು ಹೇಳಬಹುದು ಅದೂ ಒಂದು ಗೃಹ

ಕೈಗಾರಿಕೆ, ಅಲ್ಲಿರತಕ್ಕ ಬಡವರಿಗೆ ಇದರಿಂದ ಅನುಕೂಲವಾಗುತ್ತದೆ, ಅವರು ಆ ರೀತಿ ಕೆಲಸಮಾಡಿಕೊಂಡು ಹೋದರೆ ಅದಕ್ಕೆ ನೀವು ಏಕೆ ಅಡ್ಡಿಪಡಿಸಬೇಕು ಎಂದು. ಫ್ಯಾಕ್ಟರಿ ಎಂದು ಒಂದು ಸ್ಥಳವನ್ನು ನಿರ್ದೇಶ ಮಾಡಿದಾಗ ಅಲ್ಲಿ ಬಂದು ಕೆಲಸ ಮಾಡುವವರಲ್ಲಿ ಬಡವರೂ, ಹೆಣ್ಣುಮಕ್ಕಳೂ ಇರುತ್ತಾರೆ. ಮನೆಗೆ ತೆಗೆದುಕೊಂಡು ಹೋಗಿ ಕೆಲಸ ಮಾಡುವವರಲ್ಲಿ ಬಡವರೂ ಇರಬಹುದು. ಯಾರು ಮನೆಗಳಿಗೆ ತೆಗೆದುಕೊಂಡು ಹೋಗಿ ಕೆಲಸ ಮಾಡುತ್ತಾರೆಯೋ ಅವರಿಗಿಂತ ನೇರವಾಗಿ ಕಾರ್ಖಾನೆಗಳಿಗೆ, ಗೊತ್ತಾದ ಸ್ಥಳಗಳಿಗೆ ಬಂದು ಕೆಲಸ ಮಾಡುವವರ ಪರಿಸ್ಥಿತಿ ಚೆನ್ನಾಗಿರುವುದಿಲ್ಲ, ಮನೆಗೆ ತೆಗೆದುಕೊಂಡು ಹೋಗುವವರಿಗೆ ಮನೆಯಾದರೂ ಇದೆಯಲ್ಲ. ಒಂದು ಮನೆಯೂ ಇಲ್ಲದೆ ಇದ್ದವನಿಗೆ, ಮರದಡಿಯಲ್ಲಿ ಕುಳಿತುಕೊಂಡು ಕೆಲಸ ಮಾಡುವವನಿಗೆ ಯಾರೂ ಹೊಗೆಸೊಪ್ಪು ಎಲೆ ಕೊಡುವುದಿಲ್ಲ. ಆದುದರಿಂದ ಮನೆಗೆ ತೆಗೆದುಕೊಂಡು ಹೋಗಬೇಕಾದರೆ ಅವರಿಗೆ ಮನೆಯಾದರೂ ಇರುತ್ತದೆ. ಅನೇಕ ಬೀಡಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಮನೆಯೂ ಇಲ್ಲದೆ ಇರುವವರು ಇರುತ್ತಾರೆ. ಅವರಿಗೆ ಇನ್ನು ಯಾವುದೇ ತರಹ ಅನುಕೂಲಗಳಿರುವುದಿಲ್ಲ. ಮನೆಗಳಲ್ಲಿ ಕೆಲಸಮಾಡುವವರು ನಾಲ್ಕಾರು ಜನರಿದ್ದರೆ ಬಿಡುವಿನ ವೇಳೆಯಲ್ಲಿ ಕೆಲಸ ಮಾಡುತ್ತಾರೆ. ಕೆಲವರು ಹೇಳಿದ ಹಾಗೆ ಅವರು 2-3 ಗಂಟೆ ಕೆಲಸ ಮಾಡುತ್ತಾರೆ. ಅವರುಗಳು ಬೇರೆ ವೃತ್ತಿಯನ್ನು ಅವಲಂಬಿಸಿಕೊಂಡಿರುತ್ತಾರೆ ಮತ್ತು ಇದನ್ನು ಉಪಕಸಬಾಗಿ ಇಟ್ಟುಕೊಂಡಿರುತ್ತಾರೆ. ಗೊತ್ತಾದ ಸ್ಥಳದಲ್ಲಿ ಕೆಲಸಮಾಡುವುದಕ್ಕೆ ಬಂದರೆ ಆಗ ಇದು ಉಪಕಸಬಾಗುವುದಿಲ್ಲ. ಆಗ ಇದು ಮುಖ್ಯ ಕಸಬು ಅಥವಾ ಜೀವನಕ್ಕೆ ಬೇಕಾದ ಕಸಬಾಗುತ್ತದೆ. ಮೊದಲು ಜೀವನ ಮಾಡುವುದಕ್ಕೆ ಕಸಬನ್ನು ಒದಗಿಸಬೇಕು, ಆ ಮೇಲೆ ಉಪಕಸಬಿನ ಯೋಚನೆ ಮಾಡಬೇಕಾಗುತ್ತದೆ. ಕೆಲಸಗಾರರ ದೃಷ್ಟಿಯಿಂದ ಮನೆಗಳಿಗೆ ತೆಗೆದುಕೊಂಡು ಹೋಗಿ ಕೆಲಸ ಮಾಡುವುದನ್ನು ಸ್ವಲ್ಪ ಹತೋಟಿಯಲ್ಲಿಡಬೇಕಾದೀತು. ಇವೊತ್ತಿನ ಸನ್ನಿವೇಶದಲ್ಲಿ ಮನೆಗೆ ತೆಗೆದುಕೊಂಡು ಹೋಗುವವರೆಲ್ಲರೂ ಅನಕೂಲಸ್ಥರು ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಲೈಸೆನ್ಸ್ ಕೊಡುವ ಕಾಲದಲ್ಲಿ ಒಂದು ರೀತಿಯ ಡಿಸ್‌ಕ್ರಿಷನ್ ಇರಬೇಕು ಎನ್ನುವ ದೃಷ್ಟಿಯಿಂದ 40ನೆಯ ಕ್ಲಾಜಿನಲ್ಲಿ ಯಾವುದಕ್ಕೆ ವಿನಾಯ್ತಿಯನ್ನು ಕೊಡಬೇಕೆಂಬುದನ್ನು ಇಟ್ಟುಕೊಂಡಿರತಕ್ಕದ್ದು. ಒಂದು ವೇಳೆ ವಿನಾಯಿತಿ ಬೇಡ ಎಂದರೆ ಕೆಲವು ಜನ ಬಡವರಿಗೆ ತೊಂದರೆಯಾಗುತ್ತದೆನ್ನುವುದನ್ನೂ ತಾವು ಯೋಚನೆ ಮಾಡಬೇಕು. ಡಿಸ್ಕ್ರಿಷನ್ ಉಪಯೋಗಿಸಲೇಬೇಕಾಗುತ್ತದೆ. ನಾನು ಇದ್ದರೆ ಸರಿಹೋಗುತ್ತದೆ, ಇನ್ನೊಬ್ಬರು ಬಂದರೆ ಸರಿಹೋಗುವುದಿಲ್ಲ ಎನ್ನುವ ವಾದ ಸರಿಯಲ್ಲವೆಂದು ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಇದಕ್ಕೆ ಸಂಬಂಧಪಟ್ಟಹಾಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನೆಲ್ಲಾ ಸೆಲೆಕ್ಟ್ ಕಮಿಟಿಯವರು ಗಮನದಲ್ಲಿಟ್ಟುಕೊಂಡು ಇದನ್ನು ಪರಿಶೀಲನೆ ಮಾಡುವಾಗ ಯಾವ ಮಟ್ಟದಲ್ಲಿ ತಿದ್ದುಪಡಿ ಸಾಧ್ಯವೋ ಅದನ್ನೆಲ್ಲಾ ಮಾಡುತ್ತಾರೆ. ಅನೇಕರು ಹೇಳಿರತಕ್ಕ ಕೆಲವು ಕಲಮುಗಳ ಬಗ್ಗೆ ನೇರವಾದ ಉತ್ತರ ಕೊಡಬೇಕಾದ ಅಗತ್ಯವಿಲ್ಲವೆಂದು ನನ್ನ ಭಾವನೆ.

ರಜದ ಸಂಬಂಧವಾಗಿ ಒಂದು ಮಾತನ್ನು ಹೇಳಿದ್ದಾರೆ. 'ಸಿಕ್ ಲೀವ್' ಕೊಡಬೇಕಾದರೆ ಯಾವುದೇ ಕಾನೂನಿನಲ್ಲಿ ಹೀಗೆಯೇ ಕೊಡಬೇಕೆಂದಿಲ್ಲ. ಇಲ್ಲಿ ಕೂಡ ಅದನ್ನು ನಮೂದು ಮಾಡುವುದು ಕಷ್ಟವಾಗುತ್ತದೆ. ಆದರೆ Statement of Objects and Reasons ನಲ್ಲಿ ಹೇಳಿರುವ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ.

"The provisions of the Payment of Wages Act, 1936, the Industrial Disputes Act, 1947, and the Industrial Employment (Standing Orders) Act, 1956, have been made applicable to the workers in beedi industrial premises so as to enable them to derive the benefits accruiug thereunder.

ಇದರ ಪ್ರಕಾರ ಕಾರ್ಮಿಕ ಮತ್ತು ಮಾಲೀಕ ಇಬ್ಬರೂ ಸೇರಿ ಯಾವ ಪ್ರಮಾಣದಲ್ಲಿ 'ಸಿಕ್ ಲೀವ್' ಕೊಡಬೇಕೆಂದು ತೀರ್ಮಾನ ಮಾಡಿಕೊಳ್ಳುತ್ತಾರೆ. National Festival Holidays ಬಗ್ಗೆ ಒಂದು ಕಾನೂನನ್ನು ಮಾಡಿದ್ದೇವೆ. ಅದು ಎಲ್ಲ ಕಾರ್ಖಾನೆಗಳಿಗೂ ಅನ್ವಯಿಸುತ್ತದೆ. ಅದರ ಪ್ರಕಾರ 7 ದಿನ ವೇತನ ಸಹಿತ ರಜ ಸಿಕ್ಕುತ್ತದೆ.

Mr. DEPUTY SPEAKER.—The question is:

"That the Mysore Beedi Industrial Premises (Regulation of Conditions of Works) Bill, 1962 be taken into consideration."

The motion was adopted.

Motion to refer to a Joint Select Committee.

Sri D. DEVARAJ URS.—Sir, I beg to move:

"That the Mysore Beedi Industrial Premises (Regulation of Conditions of Work) Bill, 1962, be referred to a Joint Select Committee consisting of a total number of 20 members, 15 from the Legislative Assembly and 5 members from the Legislative Council and that the concurrence of the Legislative Council be obtained therefor and that the following members of this House shall be members of the Joint Select Committee, namely:

Sriyuths:

1 P. Venkatagiriyappa
2 A. Krishna Shetty
3 Gopala Salenna
4 Bhaskar Shetty
5 K. H. Ranganath
6 S. S. Patil (*Badakihal*)
7 B. D. Jatti
8 B. J. Linge Gowda
9 M. Srinivasa Naik
10 Prabhu Rao Jagadale
11 Allum Karibasappa
12 Tavare Fakirappa Siddappa
13 S. P. Phayde
14 Koppal Rajasaheb Abdul Sab
15 Devappa Shamanna"

Mr. DEPUTY SPEAKER.—The question is:

"That the Mysore Beedi Industrial Premises (Regulation of Conditions of Work) Bill, 1962 be referred to a Joint Select Committee consisting of a total number of 20 members, 15 from the Legislative Assembly and 5 members from the Legislative Council and that the concurrence of the Legislative Council be obtained therefor and that the following members of this House shall be members of the Joint Select Committee, namely:

Sriyuths:

1 P. Venkatagiriyappa
2 A. Krishna Shetty
3 Gopala Salenna
4 Bhaskar Shetty
5 K. H. Ranganath
6 S. S. Patil (*Badakihal*)
7 B. D. Jatti
8 B. J. Linge Gowda

Sriyuths :

9 M. Srinivasa Naik
10 Prabhu Rao Jagadale
11 Allum Karibasappa
12 Tavare Fakirappa Siddappa
13 S. P. Phayde
14 Koppal Rajasaheb Abdul sab
15 Devappa Shamanna"

The Motion was adopted.

MR. DEPUTY SPEAKER.—Under sub-rule (2) of Rule 240 of the Rules of Procedure and Conduct of Business in the Legislative Assembly, I nominate the Hon'ble Minister for Labour, Housing and Transport and the Minister for Law as Members of the Joint Select Committee.

SRI ANNA RAO GANAMUKHI (Afzalpur).—On a point of order, Sir. Under what rule the Minister for Finance is put on the Select Committee ?

MR. SPEAKER.—He is an Hon'ble Member of the Assembly and there is no bar, if one is a Minister for serving as a member of the Select Committee.

The House will now adjourn and meet at 12-30 P.M. tomorrow.

The House adjourned at Six of the Clock to meet again at Thirty Minutes past Twelve of the Clock on Friday, the 13th September 1963.